
ಮಂಗಳವಾರ, ಜುಲೈ 26, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 206 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮನುಷ್ಯಜೀವಿ ಮೂಲತಃ ಚತುಷ್ಪಾದಿಗಳಿಂದ ವಿಕಾಸವಾದರೂ ಎರಡು ಕಾಲಿನ ಮೇಲೆ ನಿಲ್ಲುವ, ನಡೆಯುವ ಹಂತಕ್ಕೆ ಏರಿದ ಪ್ರಾಣಿ. ಇದರ ಲಾಭಗಳೂ ಕೆಲವು; ಅಪಾಯಗಳೂ ಹಲವು.



ಆಳ-ಅಗಲ ದೇಶದ ಮುಖ್ಯಸ್ಥರಿಗೆ ಸೀಮಿತ ಅಧಿಕಾರ
ಗುಜರಾತ್: ನಕಲಿ ಮದ್ಯ ಸೇವಿಸಿ 10 ಮಂದಿ ಸಾವು 3
ರಸಗೊಬ್ಬರಕ್ಕೆ ಪರದಾಟ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,766 ▼	16,631 ▼	₹52,480 (ಬೆಂಗಳೂರು)	₹55,800 (ಬೆಂಗಳೂರು)	79.78 ▲

ಸಂಪೂರ್ಣ ಪಾರದರ್ಶಕ ವ್ಯವಸ್ಥೆ ಜಾರಿಗೆ ಸಿದ್ಧತೆ – ಕಂದಾಯ ಸಚಿವ ಅಶೋಕ

ನೋಂದಣಿ ಅಕ್ರಮ ತಡೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉಪ ನೋಂದಣಿ ಕಚೇರಿಗಳಲ್ಲಿ ನಡೆಯುತ್ತಿರುವ ಲಂಚಾವತಾರದ ಕುರಿತು ಲೋಕಾಯುಕ್ತರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿದ ಬೆನ್ನಲ್ಲೇ, ಅಕ್ರಮಗಳ ತಡೆಗೆ ಬಿಗಿ ಕ್ರಮಗಳನ್ನು ಕೈಗೊಳ್ಳಲು ಕಂದಾಯ ಇಲಾಖೆ ಮುಂದಾಗಿದೆ. ದಲ್ಲಾಳಿಗಳ ಹಾವಳಿ ತಡೆಗಾಗಿ ಕಚೇರಿಯೊಳಗೆ ನೌಕರರಿಗೆ ಗುರುತಿನ ಚೀಟಿ ಕಡ್ಡಾಯಗೊಳಿಸಲಾಗಿದೆ.

ಬೆಂಗಳೂರಿನ 43 ಉಪ ನೋಂದಣಿ ಕಚೇರಿಗಳಲ್ಲಿ ಲೋಕಾಯುಕ್ತ ಪೊಲೀಸರು ಇತ್ತೀಚೆಗೆ ದಿಢೀರ್ ತಪಾಸಣೆ ನಡೆಸಿದ್ದರು. ದಲ್ಲಾಳಿಗಳ ಕೆಲಸವನ್ನು ಆದ್ಯತೆಯ ಮೇಲೆ ಮಾಡುತ್ತಿರುವುದು, ಭ್ರಷ್ಟಾಚಾರ, ತೆರಿಗೆ ವಂಚನೆಗೆ ಸಹಕಾರ ಸೇರಿದಂತೆ ಹಲವು ಬಗೆಯ ಅಕ್ರಮಗಳು ಕಂಡುಬಂದಿದ್ದವು. ಈ ಕುರಿತು ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ವರದಿಯನ್ನು ಆಧರಿಸಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ವಿಚಾರಣೆ ಆರಂಭಿಸಿದ್ದಾರೆ.

ಈ ಸಂಬಂಧ 'ಪ್ರಜಾವಾಣಿ' ಸೋಮವಾರದ ಸಂಚಿಕೆಯಲ್ಲಿ 'ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿನ ಅಕ್ರಮಕ್ಕೆ ಕಡಿವಾಣ ಬೀಳಲಿ' ಎಂಬ ಶೀರ್ಷಿಕೆಯಡಿ ಸಂಪಾದಕೀಯವನ್ನೂ ಬರೆದಿತ್ತು.

ಸುದ್ದಿಗಾರರಿಗೆ ಈ ಕುರಿತು ಸೋಮವಾರ ಪ್ರತಿಕ್ರಿಯಿಸಿದ ಕಂದಾಯ ಸಚಿವ ಆರ್. ಅಶೋಕ, 'ರಾಜ್ಯದ ಉಪ ನೋಂದಣಿ ಕಚೇರಿಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಗುರುತಿನ ಚೀಟಿ ಧರಿಸುವುದು ಸೇರಿದಂತೆ ಅಕ್ರಮ ತಡೆಗೆ ಬಿಗಿ ಕ್ರಮಗಳನ್ನು ಕೈಗೊಳ್ಳುವಂತೆ ನೋಂದಣಿ ಮತ್ತು ಮುದ್ರಾಂಕ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ' ಎಂದರು.

'ನಗರದ ಉಪ ನೋಂದಣಿ ಕಚೇರಿಗಳಲ್ಲಿನ ಲೋಪಗಳ ಕುರಿತು ಲೋಕಾಯುಕ್ತ ಪೊಲೀಸರು ವರದಿ ನೀಡಿದ್ದಾರೆ. ಅನಧಿಕೃತ ವ್ಯಕ್ತಿಗಳು ಕಚೇರಿಯೊಳಗೆ ಇರುವುದನ್ನು ತಪ್ಪಿಸಲು ಅಧಿಕಾರಿಗಳು ಮತ್ತು ಸಿಬ್ಬಂದಿ ಗುರುತಿನ ಚೀಟಿ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ನಗದು ಘೋಷಣೆ, ಅಧಿಕಾರಿಗಳು ಮತ್ತು ಸಿಬ್ಬಂದಿ ಕಚೇರಿಯಿಂದ ಹೊರಹೋಗುವ ಮುನ್ನ ಕಡತದಲ್ಲಿ ಕಾರಣ ದಾಖಲಿಸುವುದನ್ನೂ ಕಡ್ಡಾಯವಾಗಿ ಪಾಲಿಸುವಂತೆ ಸೂಚನೆ ನೀಡಲಾಗಿದೆ' ಎಂದು ತಿಳಿಸಿದರು.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ 'ಸರ್ವರ್' ಪದೇಪದೇ ಡೌನ್ ಆಗುತ್ತಿರುವ ಕುರಿತು ದೂರುಗಳಿವೆ. ಈ ಬಗ್ಗೆಯೂ ಲೋಕಾಯುಕ್ತರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸರ್ವರ್ ನಿರ್ವಹಣೆ ಒಂದು ಕಂಪನಿಯ ಬಳಿ ಇದ್ದರೆ, ಸೇವೆ ಒದಗಿಸುವವರು ಇತರರು. ಎರಡೂ ಕೆಲಸಗಳನ್ನು ಒಂದೇ ಸಂಸ್ಥೆಗೆ ನೀಡುವ ಯೋಜನೆ ರೂಪಿಸಲಾಗಿದೆ ಎಂದರು.

6ನೇ ಪುಟ ನೋಡಿ

'ಅನುಮತಿ ಇಲ್ಲದೆ ಕಚೇರಿಯಿಂದ ಹೊರಗಿದ್ದರೆ ಕ್ರಮ'

ಬೆಂಗಳೂರು: ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಚೇರಿಯ ಅವಧಿಯಲ್ಲಿ ಅನುಮತಿ ಇಲ್ಲದೇ ಹೊರಗಿರುವುದು ಕಂಡುಬಂದಲ್ಲಿ ಅಂತಹವರ ವಿರುದ್ಧ ಕ್ರಮ ಜರುಗಿಸುವಂತೆ ಎಲ್ಲ ಇಲಾಖಾ ಮುಖ್ಯಸ್ಥರಿಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಸುತ್ತೋಲೆ ಹೊರಡಿಸಿದ್ದಾರೆ.

'ಸರ್ಕಾರಿ ಅಧಿಕಾರಿಗಳು ಮತ್ತು ನೌಕರರಲ್ಲಿ ಇತ್ತೀಚಿನ ದಿನಗಳಲ್ಲಿ ಸಮಯಪ್ರಜ್ಞೆ, ಕಾರ್ಯನಿಷ್ಠೆಯ ಕೊರತೆಯನ್ನು ಅವಲೋಕಿಸಲಾಗಿದೆ. ಪ್ರತಿದಿನವೂ ಬೆಳಿಗ್ಗೆ 10 ಗಂಟೆಗೆ ಹಾಜರಾಗಿ, ಕಚೇರಿಯ ಅವಧಿ ಪೂರ್ಣವಾಗುವವರೆಗೂ ಅಧಿಕಾರಿಗಳು, ನೌಕರರು ತಮಗೆ ನಿಗದಿಪಡಿಸಿದ ಸ್ಥಾನದಲ್ಲಿ ಇದ್ದು ಕರ್ತವ್ಯನಿರ್ವಹಿಸಬೇಕು. ಈ ಅವಧಿಯಲ್ಲಿ ಅನ್ಯ ಕರ್ತವ್ಯದ ಮೇಲೆ ಹೊರ ಹೋಗಬೇಕಾಗಿದ್ದಲ್ಲಿ ಮೇಲಧಿಕಾರಿಗಳ ಅನುಮತಿ ಪಡೆಯುವುದು ಕಡ್ಡಾಯ' ಎಂದು ಸೋಮವಾರ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

'ನಿಗದಿಯ ಅವಧಿಗಿಂತ ವಿಳಂಬವಾಗಿ ಹಾಜರಾಗುವ, ಕಚೇರಿ ಅವಧಿಯಲ್ಲಿ ಸ್ವಸ್ಥಾನದಲ್ಲಿ ಇಲ್ಲದ, ಚಲನವಲನ ದಾಖಲಾತಿ ಪುಸ್ತಕದಲ್ಲಿ ನಮೂದಿಸಿ, ಮೇಲಧಿಕಾರಿಗಳ ಅನುಮತಿ ಪಡೆಯದ ನೌಕರರು, ಅಧಿಕಾರಿಗಳ ವಿರುದ್ಧ ಸಕ್ಷಮ ಪ್ರಾಧಿಕಾರವು ಸೂಕ್ತ ಶಿಸ್ತುಕ್ರಮ ಜರುಗಿಸಬೇಕು' ಎಂದು ಸೂಚಿಸಿದ್ದಾರೆ.

ನೋಂದಣಿ: ಶೇ 10ರ ರಿಯಾಯಿತಿ ವಿಸ್ತರಣೆ

ಸ್ಥಿರಾಸ್ತಿಗಳ ನೋಂದಣಿಗಾಗಿ ಮುದ್ರಾಂಕ ಶುಲ್ಕ ನಿಗದಿಗೆ ಮಾರ್ಗಸೂಚಿ ದರದಲ್ಲಿ ಶೇಕಡ 10ರಷ್ಟು ರಿಯಾಯ್ತಿ ಸೌಲಭ್ಯವನ್ನು ಇನ್ನೂ ಮೂರು ತಿಂಗಳು ವಿಸ್ತರಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

'ಕೃಷಿ ಜಮೀನು, ಕೃಷಿಯೇತರ ಜಮೀನು, ನಿವೇಶನ, ಕಟ್ಟಡ, ಅಪಾರ್ಟ್‌ಮೆಂಟ್, ಫ್ಲ್ಯಾಟ್ ಮತ್ತು ಇತರೆ ಸ್ಥಿರಾಸ್ತಿಗಳ ನೋಂದಣಿಗೆ ಮುದ್ರಾಂಕ ಶುಲ್ಕ ನಿಗದಿಗೆ ಮಾರ್ಗ ಸೂಚಿ ದರದ ಶೇ 10 ರಷ್ಟು ರಿಯಾಯ್ತಿಯನ್ನು ಮಾರ್ಚ್ ಜುಲೈ 23ರವರೆಗೆ ನೀಡಲಾಗಿತ್ತು. ಈ ಅವಧಿ ಪೂರ್ಣಗೊಂಡಿದ್ದು, ಇನ್ನೂ ಮೂರು ತಿಂಗಳು ವಿಸ್ತರಿಸಿ ಹೊಸ ಆದೇಶ ಹೊರಡಿಸಲಾಗುವುದು' ಎಂದರು.



ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಿರ್ಗಮಿತ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ವಂದಿಸಿದರು. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಇದ್ದಾರೆ –ಪಿಟಿಐ ಚಿತ್ರ

ಅತ್ಯುನ್ನತ ಹುದ್ದೆಗೆ ಏರಿದ ಮೊದಲ ಆದಿವಾಸಿ ವ್ಯಕ್ತಿ

ರಾಷ್ಟ್ರಪತಿ ಮುರ್ಮು ಪ್ರಮಾಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದ 15ನೇ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಅವರು ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಸೋಮವಾರ ಬೆಳಿಗ್ಗೆ 10.15ಕ್ಕೆ ಪ್ರಮಾಣವಚನ ಸ್ವೀಕರಿಸಿದರು. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಪ್ರಮಾಣವಚನ ಬೋಧಿಸಿದರು.

ಮುರ್ಮು ಅವರು ರಾಷ್ಟ್ರಪತಿ ಹುದ್ದೆಗೆ ಏರುವ ಮೂಲಕ ಹಲವು ಪ್ರಥಮಗಳ ದಾಖಲೆ ಬರೆದಿದ್ದಾರೆ. ಅವರು ರಾಷ್ಟ್ರಪತಿ ಹುದ್ದೆಗೇರಿದ ಆದಿವಾಸಿ ಸಮುದಾಯದ ಮೊದಲ ವ್ಯಕ್ತಿ. ಸ್ವಾತಂತ್ರ್ಯಾನಂತರ ಹುಟ್ಟಿ ರಾಷ್ಟ್ರಪತಿಯಾದ ಮೊದಲ ವ್ಯಕ್ತಿ ಮತ್ತು ಅತ್ಯಂತ ಕಿರಿಯ ವಯಸ್ಸಿನ ರಾಷ್ಟ್ರಪತಿ ಎಂಬ ಹೆಗ್ಗಳಿಕೆಗಳಿಗೆ ಅವರು ಪಾತ್ರರಾಗಿದ್ದಾರೆ.

ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದ ಎರಡನೇ ಮಹಿಳೆ ಇವರು. ದೇವರ ಹೆಸರಿನಲ್ಲಿ ಹಿಂದಿಯಲ್ಲಿ ಅವರು ಪ್ರಮಾಣವಚನ ಪಡೆದುಕೊಂಡರು.

> ವಾರ್ಡ್ ಕೌನ್ಸಿಲರ್ ಸ್ಥಾನದಿಂದ ರಾಷ್ಟ್ರಪತಿಯಾಗುವ ಅವಕಾಶ ನನಗೆ ದೊರೆತಿದೆ. ಅದು ಪ್ರಜಾಪ್ರಭುತ್ವದ ತಾಯಿಯಂತಿರುವ ಭಾರತದ ಶ್ರೇಷ್ಠತೆ
> **ದ್ರೌಪದಿ ಮುರ್ಮು,** ರಾಷ್ಟ್ರಪತಿ

ನಿರ್ಗಮಿತ ರಾಷ್ಟ್ರಪತಿ ರಾಮನಾಥ ಕೋವಿಂದ್, ಮಾಜಿ ರಾಷ್ಟ್ರಪತಿ ಪ್ರತಿಭಾ ಪಾಟೀಲ್, ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ಪ್ರಧಾನಿ ನರೇಂದ್ರ ಮೋದಿ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮುಂತಾದ ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

'ಭಾರತದಲ್ಲಿ ಬಡವರು ಕನಸು ಕಾಣುವುದು ಮಾತ್ರವಲ್ಲ ಅದನ್ನು ಈಡೇರಿಸಿಕೊಳ್ಳಲೂಬಹುದು ಎಂಬುದಕ್ಕೆ ನನ್ನ ಆಯ್ಕೆಯು ಪುರಾವೆಯಾಗಿದೆ' ಎಂದು ಪ್ರಮಾಣವಚನದ ನಂತರ ಮುರ್ಮು ಹೇಳಿದರು.

ಶತಮಾನಗಳಿಂದ ಸೌಲಭ್ಯ ವಂಚಿತರಾಗಿರುವವರು, ಬಡವರು, ಶೋಷಿತರು, ಹಿಂದುಳಿದವರು ಮತ್ತು ಆದಿವಾಸಿಗಳು ತಮ್ಮಲ್ಲಿ ಅವರ ಪ್ರತಿಬಿಂಬವನ್ನು ಕಾಣುತ್ತಿರುವುದು ತಮಗೆ ಬಹುದೊಡ್ಡ ತೃಪ್ತಿ ತಂದಿದೆ ಎಂದರು.

ಪ್ರಾಥಮಿಕ ಶಿಕ್ಷಣ ಪಡೆಯುವುದೇ ಕನಸಾಗಿದ್ದಂತಹ ಒಡಿಶಾದ ಸಣ್ಣ ಆದಿವಾಸಿ ಗ್ರಾಮದಿಂದ ಆರಂಭವಾದ ತಮ್ಮ ಜೀವನದ ಪಯಣವನ್ನು ಮುರ್ಮು ಅವರು ಮೆಲುಕು ಹಾಕಿದರು. ಆ ಗ್ರಾಮದಿಂದ ಕಾಲೇಜು ಮೆಟ್ಟಿಲು ಹತ್ತಿದ ಮೊದಲ ಹುಡುಗಿ ತಾವು ಎಂಬುದನ್ನೂ ಅವರು ನೆನಪಿಸಿಕೊಂಡರು.

ರಾಷ್ಟ್ರಪತಿ ಭವನದಿಂದ ಸಂಸತ್ ಭವನಕ್ಕೆ ಮುರ್ಮು ಅವರನ್ನು ಕೋವಿಂದ್ ಅವರು ಕರೆತರುವುದರೊಂದಿಗೆ ಪ್ರಮಾಣವಚನ ವಿಧಿಗಳು ಆರಂಭಗೊಂಡವು. ಉಪರಾಷ್ಟ್ರಪತಿ, ಪ್ರಧಾನಿ, ಲೋಕಸಭೆಯ ಸ್ಪೀಕರ್ ಅವರು ಮುರ್ಮು ಅವರನ್ನು ಸಂಸತ್ತಿನಲ್ಲಿ ಸ್ವಾಗತಿಸಿದರು. ಮೂರೂ ಸೇನಾಪಡೆಗಳು ಮುರ್ಮು ಅವರಿಗೆ ರಾಷ್ಟ್ರಪತಿ ಭವನದಲ್ಲಿ ಗೌರವ ವಂದನೆ ಸಲ್ಲಿಸಿದವು.



ಕೆಪಿಎಸ್‌ಸಿ: ಲಘು ಲಾಠಿ ಪ್ರಹಾರ

ನೇಮಕಾತಿಗೆ ನಡೆಸಿದ ಪರೀಕ್ಷೆಯ ಫಲಿತಾಂಶ ತಕ್ಷಣ ಪ್ರಕಟಿಸುವಂತೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಪರೀಕ್ಷೆ ನಡೆಸಿ ಹಲವು ತಿಂಗಳು ಕಳೆದರೂ ಫಲಿತಾಂಶ ಪ್ರಕಟಿಸಿಲ್ಲವೆಂದು ರೊಚ್ಚಿಗೆದ್ದು, ಕೆಪಿಎಸ್‌ಸಿ ಪ್ರವೇಶದ್ವಾರ ಎದುರು ಸೋಮವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿದ 500ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು.

ಸರ್ಕಾರಿ ಉದ್ಯೋಗದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳ ಭವಿಷ್ಯದ ಜೊತೆ ಕೆಪಿಎಸ್‌ಸಿ ಚೆಲ್ಲಾಟವಾಡುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಯುವ ನಾಯಕಿ ಭವ್ಯಾ ನರಸಿಂಹಮೂರ್ತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಭಿತ್ತಿಪತ್ರಗಳನ್ನು ಹಿಡಿದು ಅಭ್ಯರ್ಥಿಗಳು ಕೆಪಿಎಸ್‌ಸಿ ವಿರುದ್ಧ ಘೋಷಣೆಗಳನ್ನು ಕೂಗಿದರು.

ಕೆಪಿಎಸ್‌ಸಿ ಅಧಿಕಾರಿಯೊಬ್ಬರು ಸ್ಥಳಕ್ಕೆ ಬಂದು ಫಲಿತಾಂಶ ಪ್ರಕಟಿಸಲು ಒಂದು ವಾರ ಸಮಯಾವಕಾಶ ಕೋರಿದರೂ ಸಮಾಧಾನಗೊಳ್ಳದ ಪ್ರತಿಭಟನಾಕಾರರು, ತಕ್ಷಣ ಫಲಿತಾಂಶ ಪ್ರಕಟಿಸುವಂತೆ ಒತ್ತಾಯಿಸಿದರು. ಅಲ್ಲದೆ, ಕೆಪಿಎಸ್‌ಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಾಳ್ಕರ ಸ್ಥಳಕ್ಕೆ ಬರುವಂತೆ ಪಟ್ಟು ಹಿಡಿದರು.

ಆ ಬಳಿಕ ಸ್ಥಳಕ್ಕೆ ಬಂದ ವಿಕಾಸ್ ಕಿಶೋರ್, 'ಕಳೆದ ವಾರವಷ್ಟೆ ನಾನು ಅಧಿಕಾರ ವಹಿಸಿಕೊಂಡಿದ್ದೇನೆ. ಫಲಿತಾಂಶ ಪ್ರಕಟಿಸುವ ಪ್ರಕ್ರಿಯೆಯತ್ತ ಕಾರ್ಯೋನ್ಮುಖರಾಗಿದ್ದೇವೆ. ಸೋಮವಾರದ ಒಳಗೆ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನಡೆದ ಮುಖ್ಯ ಪರೀಕ್ಷೆಯ ಫಲಿತಾಂಶ ಕೊಡುತ್ತೇವೆ. ಅಲ್ಲದೆ, ಉಳಿದ ಫಲಿತಾಂಶ ಪ್ರಕಟಣೆಗೆ ಸಂಬಂಧಿಸಿದಂತೆ ಮಾಹಿತಿ ನೀಡುತ್ತೇವೆ' ಎಂದು ಭರವಸೆ ನೀಡಿದರು.



ಕೆಪಿಎಸ್‌ಸಿ ಪ್ರವೇಶದ್ವಾರದ ಬಳಿ ಪ್ರತಿಭಟನೆ ನಡೆಸಿದ ಭವ್ಯಾ ನರಸಿಂಹಮೂರ್ತಿ ಮತ್ತು ಉದ್ಯೋಗಾಕಾಂಕ್ಷಿಗಳನ್ನು ಪೊಲೀಸರು ವಶಕ್ಕೆ ಪಡೆದರು –ಪ್ರಜಾವಾಣಿ ಚಿತ್ರ

ಕಾರ್ಯದರ್ಶಿಯ ಭರವಸೆಯ ನಂತರವೂ ಪ್ರತಿಭಟನೆ ಮುಂದುವರಿದಾಗ ಸ್ಥಳಕ್ಕೆ ಬಂದ ಪೊಲೀಸರು, ಇಲ್ಲಿ ಪ್ರತಿಭಟನೆಗೆ ಅವಕಾಶ ಇಲ್ಲ. ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುವಂತೆ ಎಚ್ಚರಿಕೆ ನೀಡಿದರು. ಅದನ್ನು ಲೆಕ್ಕಿಸದೆ ಪ್ರತಿಭಟನಕಾರರು ಘೋಷಣೆ ಕೂಗಿದಾಗ, ಗುಂಪು ಚದುರಿಸಲು ಪೊಲೀಸರು ಮುಂದಾದರು. ಈ ವೇಳೆ ಪೊಲೀಸರು ಮತ್ತು ಪ್ರತಿಭಟನಕಾರರ ನಡುವೆ ಮಾತಿನ ಚಕಮಕಿ, ತಳ್ಳಾಟ, ನೂಕಾಟ ನಡೆಯಿತು. ಪ್ರತಿಭಟನಾಕಾರರ ಕೆನ್ನೆಗೆ ಪೊಲೀಸರು ಬಾರಿಸಿದ್ದು ಸಂಘರ್ಷಕ್ಕೆ ಕಾರಣವಾಯಿತು. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಾಠಿ ಬೀಸಿದರು. ಅಲ್ಲದೆ, ಭವ್ಯಾ ನರಸಿಂಹಮೂರ್ತಿ ಮತ್ತು ಕೆಲವು ಪ್ರತಿಭಟನಕಾರರನ್ನು ವಶಕ್ಕೆ ಪಡೆದು ವಾಹನದಲ್ಲಿ ಕರೆದೊಯ್ದರು.

ಬೆಂಗಳೂರು, ಮೈಸೂರು, ಬೀದರ್, ರಾಯಚೂರು, ಹೊಸಪೇಟೆ, ತುಮಕೂರು, ಕೋಲಾರ, ಚಿಕ್ಕಮಗಳೂರು ಮುಂತಾದ ಕಡೆಗಳಿಂದಲೂ ಅಭ್ಯರ್ಥಿಗಳು ಬಂದಿದ್ದರು.

'ಅಲ್‌ಕೈದಾ' ನಂಟು: ಶಂಕಿತನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲ್‌ಕೈದಾ' ಉಗ್ರ ಸಂಘಟನೆಗೆ ನೇಮಕವಾಗಿ ಅಫ್ಗಾನಿಸ್ತಾನಕ್ಕೆ ಹೋಗಲು ತಯಾರಾಗಿದ್ದ ಅಖ್ತರ್ ಹುಸೇನ್ ಲಷ್ಕರ್‌ನನ್ನು(24) ನಗರದ ಸಿಸಿಬಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

'ಎರಡು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಅಸ್ಸಾಂನ ಅಖ್ತರ್ ಹುಸೇನ್, ತಿಲಕ್‌ನಗರದ ಬಿಟಿಪಿ ಪ್ರದೇಶದಲ್ಲಿ ಸ್ನೇಹಿತರ ಜೊತೆ ವಾಸವಿದ್ದ. ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ಈತನನ್ನು ಬಂಧಿಸಿ ಹೆಚ್ಚಿನ ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.



ಅಖ್ತರ್ ಹುಸೇನ್

'ರಾಷ್ಟ್ರೀಯ ತನಿಖಾ ದಳ (ಎನ್‌ಐಎ), ಕೇಂದ್ರ ಗುಪ್ತದಳ ಅಧಿಕಾರಿಗಳ ಸಮೇತ ಜಂಟಿ ಕಾರ್ಯಾಚರಣೆ ನಡೆಸಿ ಅಖ್ತರ್‌ನನ್ನು ಬಂಧಿಸಲಾಗಿದೆ. ಈತನ ಜೊತೆ ಮೂವರು ಸ್ನೇಹಿತರನ್ನೂ ವಶಕ್ಕೆ ಪಡೆಯಲಾಗಿತ್ತು. ಕೃತ್ಯದಲ್ಲಿ ಅವರ ಪಾತ್ರ ಇಲ್ಲದಿರುವುದರಿಂದ ಬಿಟ್ಟು ಕಳುಹಿಸಲಾಗಿದೆ' ಎಂದೂ ತಿಳಿಸಿವೆ.

10ನೇ ತರಗತಿಗೆ ಶಾಲೆ ಬಿಟ್ಟಿದ್ದ: 'ಬಡ ಕುಟುಂಬದಲ್ಲಿ ಬೆಳೆದಿದ್ದ ಅಖ್ತರ್, 10ನೇ ತರಗತಿಗೆ ಶಾಲೆ ಬಿಟ್ಟಿದ್ದ. ಧಾರ್ಮಿಕ ಕೇಂದ್ರಗಳಲ್ಲಿ ಹೆಚ್ಚು ಕಾಲ ಕಳೆಯುತ್ತಿದ್ದ. ಅಲ್‌ಕೈದಾ ಉಗ್ರರನ್ನು ಸಂಪರ್ಕಿಸಿ, ಸಂಘಟನೆ ಸೇರಲು ಮುಂದಾಗಿದ್ದ. ಈತನ ಬಗ್ಗೆ ಸ್ಥಳೀಯ ಪೊಲೀಸರಿಗೆ ಅನುಮಾನ ಬಂದಿತ್ತು. ಆಗಲೇ ಅಖ್ತರ್, ಊರು ಬಿಟ್ಟು 2020ರಲ್ಲಿ ಬೆಂಗಳೂರಿಗೆ ಬಂದಿದ್ದ' ಎಂದಿವೆ.

ಮಾತುಕತೆಗೆ ಫೇಸ್‌ಬುಕ್, ಟೆಲಿಗ್ರಾಂ: 'ಅಲ್‌ಕೈದಾ ಸಂಘಟನೆಗೆ ಸೇರಲು ಕೆಲ ಯುವಕರು, ಫೇಸ್‌ಬುಕ್ ಹಾಗೂ ಟೆಲಿಗ್ರಾಮ್ ಆ್ಯಪ್‌ಗಳಲ್ಲಿ ಗ್ರೂಪ್ ರಚಿಸಿಕೊಂಡಿದ್ದಾರೆ. ಹೈದರ್ ಈಗಲ್, ಬಾಂಗ್ಲಾ ಹೈದರ್, ಅಫ್ಗಾನ್ ಈಗಲ್ ಸೇರಿದಂತೆ ಹಲವು ಹೆಸರಿನ ಗ್ರೂಪ್‌ಗಳಿವೆ. ಇವುಗಳಲ್ಲಿ ಅಖ್ತರ್ ಹೆಚ್ಚು ಸಕ್ರಿಯನಾಗಿದ್ದ'

ಇನ್ನೊಂದು ಸುದ್ದಿ 4A



30ರಂದು ಸಿಇಟಿ ಫಲಿತಾಂಶ

ಬೆಂಗಳೂರು: 'ಎಂಜಿನಿಯರಿಂಗ್ ಸಹಿತ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶವನ್ನು ಇದೇ 30ರಂದು ಪ್ರಕಟಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಜೂನ್ 16 ಮತ್ತು 17ರಂದು ಸಿಇಟಿ, 18ರಂದು ಹೊರನಾಡು ಹಾಗೂ ಗಡಿಭಾಗದ ವಿದ್ಯಾರ್ಥಿಗಳಿಗೆ ಕನ್ನಡ ಪರೀಕ್ಷೆಯನ್ನು ನಡೆಸಿತ್ತು.

'ಸಿಇಟಿ ನಡೆಸುವಾಗ ಸಿಬಿಎಸ್‌ಸಿ ಮತ್ತು ಐಸಿಎಸ್‌ಇ ಪಠ್ಯಕ್ರಮದಲ್ಲಿ 12ನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಿಗೂ ಅವಕಾಶ ನೀಡಲಾಗಿತ್ತು. ಅವರ ಫಲಿತಾಂಶ ಈಗ ಬಂದಿದೆ. ಸಿಇಟಿ ಬರೆದಿದ್ದ ಈ ವಿದ್ಯಾರ್ಥಿಗಳು ಕೆಇಎ ವೆಬ್‌ಸೈಟ್‌ನಲ್ಲಿ ತಮ್ಮ ಅಂಕಗಳನ್ನು ಮಂಗಳವಾರ (ಜುಲೈ 26) ಸಂಜೆಯ ಒಳಗೆ ಅಪ್ಲೋಡ್ ಮಾಡಬೇಕು' ಎಂದು ಅವರು ಹೇಳಿದ್ದಾರೆ.

ಉನ್ನತ ಹುದ್ದೆಗಳಿಗೆ ₹100 ಕೋಟಿ: ವಂಚಕರ ಜಾಲ ಭೇದಿಸಿದ ಸಿಬಿಐ

ನವದೆಹಲಿ (ಪಿಟಿಐ): ರಾಜ್ಯಪಾಲರ ಹುದ್ದೆ ಕೊಡಿಸುವ ಹಾಗೂ ರಾಜ್ಯಸಭಾ ಸದಸ್ಯರನ್ನಾಗಿ ಮಾಡುವುದಾಗಿ ನಂಬಿಸಿ ₹100 ಕೋಟಿ ವಂಚಿಸಲು ಮುಂದಾಗಿದ್ದ ಅಂತರರಾಜ್ಯದ ವಂಚಕರ ಜಾಲವೊಂದನ್ನು ಸಿಬಿಐ ಭೇದಿಸಿದೆ.

'ಪ್ರಕರಣ ಸಂಬಂಧ ಕರ್ನಾಟಕ, ನವದೆಹಲಿ, ಮಹಾರಾಷ್ಟ್ರ ಹಾಗೂ ಉತ್ತರಪ್ರದೇಶದ ಏಳು ಸ್ಥಳಗಳಲ್ಲಿ ಇತ್ತೀಚೆಗೆ ಶೋಧ ನಡೆಸಲಾಗಿತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸದ್ಯ ಕರ್ನಾಟಕದ ಬೆಳಗಾವಿಯಲ್ಲಿ ವಾಸವಿರುವ ರವೀಂದ್ರ ವಿಠಲ ನಾಯ್ಕ, ಮಹಾರಾಷ್ಟ್ರದ ಲಾತೂರಿನ ಕಮಲಾಕರ ಪ್ರೇಮಕುಮಾರ್ ಬಾಂದಗರ, ದೆಹಲಿಯ ಮಹೇಂದ್ರ ಪಾಲ್ ಅರೋರಾ, ಅಭಿಷೇಕ್ ಬೂರಾ ಅವರನ್ನು ಬಂಧಿಸಲಾಗಿದೆ. ಶೋಧ ಕಾರ್ಯದ ವೇಳೆ, ಸಿಬಿಐ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ್ದನೆನ್ನಲಾದ ಆರೋಪಿ ಮೊಹಮ್ಮದ್ ಏಜಾಜ್ ಖಾನ್ ಪರಾರಿಯಾಗಿದ್ದಾನೆ. ಈ ಸಂಬಂಧ ಆತನ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಿಸಲಾಗಿದೆ' ಎಂದೂ ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ಐವರ ವಿರುದ್ಧವೂ ಎಫ್‌ಐಆರ್ ದಾಖಲಿಸಲಾಗಿದೆ. ಆದರೆ ಬಂಧನಕ್ಕೊಳಗಾದ ನಾಲ್ವರು ಆರೋಪಿಗಳಿಗೆ ಸಿಬಿಐ ವಿಶೇಷ ಕೋರ್ಟ್ ಜಾಮೀನು ಮಂಜೂರು ಮಾಡಿದೆ.

10ನೇ ಪುಟ ನೋಡಿ

ಜಮೀರ್‌ಗೆ ಹೈಕಮಾಂಡ್ ಎಚ್ಚರಿಕೆ

ಬೆಂಗಳೂರು: ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆಯನ್ನು 'ಸಾಮೂಹಿಕ ನಾಯಕತ್ವ'ದಲ್ಲಿ ಎದುರಿಸಬೇಕು ಎಂದು ಸ್ಪಷ್ಟ ನಿರ್ದೇಶನ ನೀಡಿದ ಬಳಿಕವೂ, 'ಸಿದ್ದರಾಮಯ್ಯ ಅವರೇ ಮತ್ತೆ ರಾಜ್ಯದ ಮುಖ್ಯಮಂತ್ರಿ ಆಗಬೇಕು ಎನ್ನುವುದು ಜನರ ಆಸೆ. ರಾಜ್ಯಕ್ಕೆ ಅವರ ಅಗತ್ಯವಿದೆ' ಎಂದು ಬಹಿರಂಗವಾಗಿ ಅಭಿಪ್ರಾಯ ವ್ಯಕ್ತಪಡಿಸುತ್ತಿರುವ ಶಾಸಕ ಜಮೀರ್ ಅಹಮದ್ ಖಾನ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಸೋಮವಾರ ಎಚ್ಚರಿಕೆ ನೀಡಿದೆ.

'ನೀವು ಪಕ್ಷದ ಶಿಸ್ತು ಮತ್ತು ಸಿದ್ಧಾಂತದ 'ಲಕ್ಷ್ಮಣ ರೇಖೆ' ಮೀರಿದ್ದೀರಿ. ಮುಂದಿನ ದಿನಗಳಲ್ಲಿ ಬಹಿರಂಗ ಹೇಳಿಕೆಗಳನ್ನು ನೀಡುವಾಗ ಎಚ್ಚರದಿಂದಿರಿ. ಪಕ್ಷದ ಶಿಸ್ತು ಮತ್ತು ಸಿದ್ಧಾಂತಕ್ಕೆ ಬದ್ಧರಾಗಿರಿ' ಎಂದು ಜಮೀರ್‌ಗೆ ಪಕ್ಷದ ರಾಜ್ಯ ಉಸ್ತುವಾರಿಯೂ ಆಗಿರುವ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಪತ್ರದ ಮೂಲಕ ತಾಕೀತು ಮಾಡಿದ್ದಾರೆ.

ಪತ್ರದಲ್ಲಿ ಸುರ್ಜೇವಾಲಾ, 'ನಿಮ್ಮ ಇತ್ತೀಚಿನ ಬಹಿರಂಗ ಹೇಳಿಕೆಗಳು ಅನಾವಶ್ಯಕ ಮತ್ತು ಕೆಟ್ಟ ಅಭಿರುಚಿಯಿಂದ ಕೂಡಿದೆ. ಅನುಭವಿ ನಾಯಕರಿಂದ ಇಂತಹ ಹೇಳಿಕೆಗಳು ನಿರೀಕ್ಷಿತವಲ್ಲ. ಅನಾವಶ್ಯಕ ಮತ್ತು ಸಂಕುಚಿತ ಸ್ವಭಾವದ ಹೇಳಿಕೆಗಳು ವಿವಾದಕ್ಕೆ ಮತ್ತು ಕಹಿ ವಾತಾವರಣಕ್ಕೆ ಕಾರಣವಾಗುತ್ತದೆ. ಅಲ್ಲದೆ, ಅನಗತ್ಯವಾದ ಹೇಳಿಕೆಗಳು ತಪ್ಪು ಸಂದೇಶವನ್ನು ನೀಡುತ್ತದೆ' ಎಂದೂ ಹೇಳಿದ್ದಾರೆ. ಆ ಮೂಲಕ, ಬಹಿರಂಗ ಹೇಳಿಕೆಗಳನ್ನು ನೀಡದಂತೆ ಸೂಚಿಸಿದ್ದಾರೆ.

6ನೇ ಪುಟ ನೋಡಿ



ಧರ್ಮಪುರ ಹೋಬಳಿಯ ಬೆನಕನಹಳ್ಳಿ ಗ್ರಾಮಕ್ಕಿಲ್ಲ ಬಸ್ ಸೌಲಭ್ಯ

ಶಿಕ್ಷಣಕ್ಕಾಗಿ ನಿತ್ಯ 8 ಕಿ.ಮೀ ಕಾಲ್ನಡಿಗೆ!

• ವಿ.ವೀರಣ್ಣ

ಧರ್ಮಪುರ (ಚಿತ್ರದುರ್ಗ ಜಿಲ್ಲೆ): ಸಮೀಪದ ಬೆನಕನಹಳ್ಳಿಗೆ ಬಸ್ ಸೌಕರ್ಯವೇ ಇಲ್ಲದ್ದರಿಂದ ವಿದ್ಯಾರ್ಥಿಗಳು ನಿತ್ಯ 8 ಕಿ.ಮೀ.ವರೆಗೂ ನಡಿಗೆಯ ಮೂಲಕವೇ ಧರ್ಮಪುರಕ್ಕೆ ಬಂದು ಶಿಕ್ಷಣ ಪಡೆಯಬೇಕಾದ ಅನಿವಾರ್ಯತೆ ಇದೆ.

'ಅತ್ಯಂತ ಹಿಂದುಳಿದ ಗ್ರಾಮ'ವಾಗಿರುವ ಇಲ್ಲಿ ಪರಿಶಿಷ್ಟ ಜಾತಿ/ ಪಂಗಡ, ಕಾಡುಗೊಲ್ಲ ಮತ್ತು ಹಿಂದುಳಿದ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ, ಗ್ರಾಮಕ್ಕೆ ಸಮರ್ಪಕ ರಸ್ತೆ ಇಲ್ಲ. ಧರ್ಮಪುರ ಸಂಪರ್ಕಿಸಲು ಅತ್ಯಂತ ಕಿರಿದಾದ ರಸ್ತೆ ಇದೆ. ರಸ್ತೆಯ ಅಕ್ಕ–ಪಕ್ಕದಲ್ಲಿ ದಟ್ಟವಾಗಿ ಬೆಳೆದ ಜಾಲಿ ಗಿಡಗಳ ನಡುವೆ ವಿದ್ಯಾರ್ಥಿಗಳು ಭಯದಲ್ಲೇ ಹೆಜ್ಜೆ ಹಾಕುವ ಮೂಲಕ, ಧರ್ಮಪುರದಲ್ಲಿರುವ ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪಿಯುಸಿ ಮತ್ತು ಪದವಿ ಕಾಲೇಜು ತಲುಪುತ್ತಿದ್ದಾರೆ.

ಇಲ್ಲಿ ಮೂರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಿವೆ. ಅಲ್ಲಿಂದ ಮುಂದಿನ ಹಂತದ ಶಿಕ್ಷಣ ಪಡೆಯುವುದಕ್ಕೆ ಪಕ್ಕದೂರಿಗೆ ತೆರಳಲು ಬಸ್ ಮತ್ತು ಆಟೊ ಸೇರಿದಂತೆ ಸಾರ್ವಜನಿಕ ಸಾರಿಗೆ ಸೌಲಭ್ಯವಿಲ್ಲ. ಈ ಕಾರಣದಿಂದ ಅನೇಕ ವಿದ್ಯಾರ್ಥಿಗಳು ಓದನ್ನು ನಿಲ್ಲಿಸುತ್ತಿದ್ದಾರೆ.

ಪ್ರಜಾವಾಣಿ ವಿಶೇಷ



ಧರ್ಮಪುರದಲ್ಲಿರುವ ಶಾಲೆ–ಕಾಲೇಜುಗಳಿಗೆ ನಡೆದುಕೊಂಡೇ ಹೋಗುತ್ತಿರುವ ಬೆನಕನಹಳ್ಳಿಯ ವಿದ್ಯಾರ್ಥಿಗಳು

ಬೆಳಿಗ್ಗೆ 8ಗಂಟೆಗೇ ಮನೆಯಿಂದ ಕಾಲ್ನಡಿಗೆಯಲ್ಲಿ ಹೊರಟು ಶಾಲೆ, ಕಾಲೇಜು ಸೇರಿಕೊಳ್ಳಬೇಕು. ಮರಳಿ ಮನೆ ಸೇರುವಷ್ಟೊತ್ತಿಗೆ ಸಂಜೆ 6 ಗಂಟೆಯಾಗುತ್ತದೆ. ನಡೆದು ಹೋಗಿ, ಬರುವ ಮಕ್ಕಳ ಬಗ್ಗೆ ನಿತ್ಯವೂ ಪಾಲಕರಲ್ಲಿ ಆತಂಕ ಇದೆ.

ರಸ್ತೆ ಮತ್ತು ಬಸ್ ಸೌಲಭ್ಯಕ್ಕಾಗಿ 20 ವರ್ಷಗಳಿಂದ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸುತ್ತಿದ್ದು, ಈ ಬಗ್ಗೆ ನೀಡಲಾದ ಆಶ್ವಾಸನೆ ಇದುವರೆಗೆ ಈಡೇರಿಲ್ಲ ಎಂದು ಗ್ರಾಮಸ್ಥರು 'ಪ್ರಜಾವಾಣಿ' ಎದುರು ತಮ್ಮ ಅಳಲು ತೋಡಿಕೊಂಡರು.

> ವಿಶೇಷವಾಗಿ ಹೆಣ್ಣು ಮಕ್ಕಳನ್ನು ಕಾಲೇಜಿಗೆ ಕಳುಹಿಸಲು ಅನೇಕ ಪಾಲಕರು ಹಿಂದೇಟು ಹಾಕುವುದರಿಂದ ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ
> **ಎ.ಶಿವಮೂರ್ತಿ,** ಬೆನಕನಹಳ್ಳಿ ಗ್ರಾಮಸ್ಥ

'ನಮಗೆ ಕಲಿಕೆಯಲ್ಲಿ ಆಸಕ್ತಿ ಇದೆ. ಆದರೆ, ದಿನವೂ ಕಾಲ್ನಡಿಗೆಯಲ್ಲಿಯೇ ಕಾಲೇಜಿಗೆ ಹೋಗಿ, ಬರಬೇಕಾಗಿದ್ದರಿಂದ ಕೆಲವು ಪಾಲಕರು ಮಕ್ಕಳನ್ನು ಕಳಿಸಲು ಹಿಂದೇಟು ಹಾಕುತ್ತಾರೆ. ಸಂಬಂಧಿಸಿದವರು ಗಮನಹರಿಸಿ, ಬಸ್ ಸೌಲಭ್ಯ ಕಲ್ಪಿಸಬೇಕು' ಎಂದು ಪದವಿ ಕಲಿಯುತ್ತಿರುವ ಬಿ.ಆರ್. ಲಕ್ಷ್ಮಿ ಮತ್ತು ಕಾವ್ಯಾ ಕೋರಿದರು.

'ಗ್ರಾಮದ ಸಮಸ್ಯೆ ಕುರಿತು ಮಾಹಿತಿ ಇದೆ. ಕಿರಿದಾದ ರಸ್ತೆ ಇರುವುದರಿಂದ ಬಸ್ ಸೌಲಭ್ಯ ದೊರೆತಿಲ್ಲ. ರಸ್ತೆ ಅಭಿವೃದ್ಧಿ ಕಾರ್ಯ ಆರಂಭವಾಗಿದ್ದು, ಬೇಗನೇ ಸಮಸ್ಯೆ ಪರಿಹರಿಸಲಾಗುವುದು' ಎಂದು ಹಿರಿಯೂರು ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಹೇಳಿದ್ದಾರೆ.


ಚಿನಕುರಳಿ

ಪ್ರಕಾಶ್ ಶೆಟ್ಟಿ



ಪಠ್ಯಪುಸ್ತಕ ಲಭ್ಯ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಮಾರಾಟ ಮಳಿಗೆಯಲ್ಲಿ ವಿವಿಧ ಪದವಿ ತರಗತಿಗಳ ಎರಡನೇ ಸೆಮಿಸ್ಟರ್‌ನ ಕನ್ನಡ ಪಠ್ಯಪುಸ್ತಕಗಳು ದೊರೆಯುತ್ತವೆ ಎಂದು ಪ್ರಸಾರಾಂಗ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬಿ.ಎ. ಕಲಾ ಕನ್ನಡ-2, ಬಿ.ಎಸ್ಸಿ. ವಿಜ್ಞಾನ ಕನ್ನಡ-2, ಬಿ.ಕಾಂ. ವಾಣಿಜ್ಯ ಕನ್ನಡ-2, ಬಿಬಿಎ ವ್ಯವಹಾರ ನಿರ್ವಹಣಾ ಕನ್ನಡ-2, ಬಿಎಚ್‌ಎಂ ಆತಿಥ್ಯ ನಿರ್ವಹಣಾ ಕನ್ನಡ-2 ಲಭ್ಯ ಎಂದು ತಿಳಿಸಿದ್ದಾರೆ. ಜತೆಗೆ, ಆತ್ಮ ಚರಿತ್ರೆಗಳು ಮತ್ತು ವಿಚಾರ ಸಾಹಿತ್ಯ-1 ಪಠ್ಯಪುಸ್ತಕಗಳು ದೊರೆಯುತ್ತವೆ ಎಂದು ಹೇಳಿದ್ದಾರೆ.



ಜಂಕ್ಷನ್ ದಟ್ಟಣೆ: ಹಂತ ಹಂತವಾಗಿ ಸಮಸ್ಯೆ ನಿವಾರಣೆ– ತುಷಾರ್ ಗಿರಿನಾಥ್

ಶೇ 40ರವರೆಗೆ ದಟ್ಟಣೆ ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ಜಂಕ್ಷನ್‌ಗಳಲ್ಲಿ ಹಲವು ರೀತಿಯ ಕೆಲಸಗಳನ್ನು ನಿರ್ವಹಿಸಲಾಗಿದ್ದು, ಸಂಚಾರ ಪೊಲೀಸ್ ಇಲಾಖೆಯ ಪ್ರಾಥಮಿಕ ವರದಿ ಪ್ರಕಾರ ಸಂಚಾರ ದಟ್ಟಣೆ ಶೇ 15ರಿಂದ 40ರಷ್ಟು ಸುಧಾರಣೆ ಕಂಡಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ನಿರ್ವಹಣೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಜೊತೆ ಸೋಮವಾರ ಸಮನ್ವಯ ಸಭೆ ನಡೆಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ನಗರದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳು ಒಟ್ಟಿಗೆ ಸೇರಿ ಸಮನ್ವಯದಿಂದ ಕೆಲಸ ಮಾಡುತ್ತಿವೆ. ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಲಾಗುತ್ತಿದೆ. ಪ್ರಮುಖ ಜಂಕ್ಷನ್‌ಗಳಲ್ಲಿ ದಟ್ಟಣೆ ಕಡಿಮೆಯಾಗಿದ್ದು, ನಿಖರ ವರದಿ ನೀಡಲು ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಗೆ ತಿಳಿಸಲಾಗಿದೆ’ ಎಂದರು.

ಹೆಬ್ಬಾಳ, ಕೆ.ಆರ್.ಪುರ, ಗೊರಗುಂಟೆ ಪಾಳ್ಯ, ಸಾರಕ್ಕಿ, ಸಿಲ್ಕ್ ಬೋರ್ಡ್ ಜಂಕ್ಷನ್‌ಗಳಲ್ಲಿ ವಿವಿಧ ಇಲಾಖೆಗಳಿಂದ ಕೆಲಸ ನಡೆಯುತ್ತಿದೆ. ಬಹುತೇಕ ಕಡೆ ಶೇ 50ರಷ್ಟು ಕೆಲಸ ಪೂರ್ಣಗೊಂಡಿದ್ದು, ಬಾಕಿ ಕೆಲಸ ಮುಗಿದರೆ ದಟ್ಟಣೆ ನಿವಾರಣೆಯಾಗಲಿದೆ ಎಂದು ತಿಳಿಸಿದರು.

ಸಂಚಾರ ಪೊಲೀಸ್ ಇಲಾಖೆಯಿಂದ ಗುರುತಿಸಿರುವ 3,750 ಗುಂಡಿಗಳ ಪೈಕಿ ಸುಮಾರು 3 ಸಾವಿರ ಗುಂಡಿಗಳನ್ನು ಮುಚ್ಚಲಾಗಿದೆ. ಬಾಕಿಯಿರುವ ಗುಂಡಿಗಳನ್ನು ವಾರದೊಳಗಾಗಿ ಮುಚ್ಚಲು ಅಧಿಕಾರಿಗಳಿಗೆ ತಿಳಿಸಲಾಗಿದೆ. ಪೊಲೀಸ್ ಇಲಾಖೆಯಿಂದ ಗುರುತಿಸಿದ್ದ ರಸ್ತೆ ಗುಂಡಿಗಳನ್ನು ಮುಚ್ಚಿರುವ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಹೇಳಿದರು.



ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಮುಖ್ಯ ಎಂಜಿನಿಯರ್ ಹಾಗೂ ಅಧಿಕಾರಿಗಳೊಂದಿಗೆ ನಗರದ ಪ್ರಮುಖ ಜಂಕ್ಷನ್‌ಗಳಲ್ಲಿ ಪರಿಶೀಲನೆ ನಡೆಸಿದರು

ನಿರೀಕ್ಷಿತ ಮಟ್ಟ ತಲುಪದ ಟಿವಿಸಿಸಿ

‘ಆಯುಕ್ತರ ತಾಂತ್ರಿಕ ತನಿಖಾ ಕೋಶ (ಟಿವಿಸಿಸಿ) ತನಿಖೆಗಾಗಿ ಬೇಕಾಗಿರುವ ಯಾವುದೇ ಉಪಕರಣ ಇಲ್ಲ ಎನ್ನುವಂತಿಲ್ಲ. ಆ ಉಪಕರಣ ಯಾರ ಹತ್ತಿರ ಇದ್ದರೂ ಅದನ್ನು ಬಾಡಿಗೆಗೆ ಪಡೆದು ಕಾರ್ಯನಿರ್ವಹಿಸಬೇಕು ಎಂದು ಮುಖ್ಯ ಎಂಜಿನಿಯರ್‌ಗೆ ಸೂಚಿಸಿದ್ದೇವೆ. ಆದರೆ, ನಮ್ಮ ಅಪೇಕ್ಷೆಯ ಮಟ್ಟಕ್ಕೆ ಅಲ್ಲಿ ಕೆಲಸ ಆಗುತ್ತಿಲ್ಲ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

‘ಬಿಬಿಎಂಪಿ ಹಣಕಾಸಿನ ವಿಶೇಷ ಆಯುಕ್ತರು ಕಾಮಗಾರಿಗಳನ್ನು ಪರಿಶೀಲನೆ ಮಾಡುತ್ತಿದ್ದಾರೆ. ಆದರೆ, ಯಾವ ವಿಧಾನ ಅಳವಡಿಸಿಕೊಂಡು ಈ ಕೆಲಸ ಮಾಡಬೇಕು ಎಂಬ ಕುರಿತು ಟಿವಿಸಿಸಿ ಮುಖ್ಯ ಎಂಜಿನಿಯರ್ ಅವರು ವಿಶೇಷ ಆಯುಕ್ತರೊಂದಿಗೆ ಮಾತುಕತೆ ನಡೆಸಬೇಕು. ಇನ್ನೊಂದು ವಾರದಲ್ಲಿ ಎಲ್ಲವನ್ನೂ ಕಾರ್ಯಗತಗೊಳಿಸಲು ಸೂಚಿಸಲಾಗಿದೆ’ ಎಂದರು.

ಬೀಡಾಡಿ ಹಸು: ಹೆಚ್ಚಿನ ದಂಡ

‘ನಗರದಲ್ಲಿ ಬೀಡಾಡಿ ಹಸುಗಳಿಂದ ಸಂಚಾರಕ್ಕೆ ಸಮಸ್ಯೆ ಆಗುತ್ತಿರುವುದು ನಿಜ. ನಾವು ದಂಡ ಹೆಚ್ಚಿಗೆ ಮಾಡುವ ಜೊತೆಗೆ ದೂರದ ಪ್ರದೇಶಕ್ಕೆ ಆ ಹಸುಗಳನ್ನು ತೆಗೆದುಕೊಂಡು ಹೋಗಲು ಆಲೋಚಿಸುತ್ತಿದ್ದೇವೆ’ ಎಂದರು.

‘ಒಂದಷ್ಟು ದಂಡ ಪಾವತಿಸಿ ಹಸು ಬಿಡಿಸಿಕೊಂಡು ಹೋಗುತ್ತಾರೆ. ಮತ್ತೆ ರಸ್ತೆಗೆ ಬಿಡುತ್ತಾರೆ. ಹೀಗಾಗಿ ಹಸು ರಕ್ಷಿಸುವ ಈಗಿರುವ ಒಂದು ತಾಣಕ್ಕೆ ಬೀಡಾಡಿ ದನಗಳನ್ನು ಸಾಗಿಸಲಾಗುವುದು. ಇನ್ನೊಂದೆರಡು ಸಂರಕ್ಷಣಾ ತಾಣಗಳನ್ನು ನಗರದಾಚೆ ನಿರ್ಮಿಸಿ, ಅಲ್ಲಿಗೆ ಈ ಬೀಡಾಡಿ ಹಸುಗಳನ್ನು ತೆಗೆದುಕೊಂಡು ಹೋಗಿ ಬಿಡುವ ಉದ್ದೇಶವೂ ಇದೆ. ಮಾಲೀಕರು ಅಲ್ಲಿಗೇ ಹೋಗಿ, ಹೆಚ್ಚಿನ ದಂಡ ಪಾವತಿಸಿ ಬಿಡಿಸಿಕೊಂಡು ತರಬೇಕು’ ಎಂದು ಮಾಹಿತಿ ನೀಡಿದರು.



ವಿದ್ಯಾರ್ಥಿಗಳು ಆವಿಷ್ಕರಿಸಿದ ಆಟೊರಿಕ್ಷಾವನ್ನು ಇಸ್ರೊ ಅಧ್ಯಕ್ಷ ಡಾ.ಎಸ್. ಸೋಮನಾಥ್ ಚಲಾಯಿಸಿದರು. ಡಾ.ಸಿ.ಎನ್. ಅಶ್ವತ್ಥನಾರಾಯಣ ಇದ್ದಾರೆ



ಸೈಕಲ್ಲಿನ ಪೆಡಲ್ ತುಳಿಯುವ ಮೂಲಕ ನೀರನ್ನು ಶುದ್ಧೀಕರಿಸುತ್ತಿರುವ ವಿದ್ಯಾರ್ಥಿಗಳು

ಒಂದೇ ಸೂರಿನಡಿ ಆವಿಷ್ಕಾರಗಳ ಅನಾವರಣ

ವಿವಿಧ ಕಾಲೇಜಿನ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಂದ ಮಾದರಿಗಳ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುರಂಗಗಳಲ್ಲಿ ಅಪಾಯ ಪತ್ತೆಗೆ ಡ್ರೋನ್, ಸೈಕಲ್ ನೆರವಿನಿಂದ ನೀರಿನ ಶುದ್ಧೀಕರಣ, ಸೌರಶಕ್ತಿ ಆಧಾರಿತ ಆಟೊರಿಕ್ಷಾ, ಮಾರುತಿ 800 ಕಾರಿನ ಎಂಜಿನ್‌ನಿಂದ ಹೆಲಿಕಾಪ್ಟರ್... ಹೀಗೆ ತಂತ್ರಜ್ಞಾನಗಳ ನೆರವಿಂದ ನಿರುಪಯುಕ್ತ ವಸ್ತುಗಳಿಗೂ ಜೀವ ತುಂಬುವ ಕೆಲಸವನ್ನು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಮಾಡಿದ್ದಾರೆ.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ನಗರದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ‘ಸೃಷ್ಟಿ 2022‘ ಮೇಳದಲ್ಲಿ ವಿದ್ಯಾರ್ಥಿಗಳು ಕೈಗೊಂಡ ಆವಿಷ್ಕಾರಗಳು ಒಂದೇ ಸೂರಿನಡಿ ಅನಾವರಣಗೊಂಡಿವೆ. ವಿವಿಧ ಕಾಲೇಜುಗಳ ಎಂಜಿನಿಯರಿಂಗ್ ವಿದ್ಯಾರ್ಥಿಗಳ 265 ಮಳಿಗೆಗಳು ಮೇಳದಲ್ಲಿವೆ. ಇಸ್ರೋ ಅಧ್ಯಕ್ಷ ಡಾ.ಎಸ್. ಸೋಮನಾಥ್ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಮೇಳಕ್ಕೆ ಸೋಮವಾರ ಚಾಲನೆ ನೀಡಿ, ವಿದ್ಯಾರ್ಥಿಗಳು ಆವಿಷ್ಕರಿಸಿದ ಮಾದರಿಗಳನ್ನು ವೀಕ್ಷಿಸಿದರು.

1,500ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಮೇಳದಲ್ಲಿ ಭಾಗವಹಿಸಿದ್ದಾರೆ. ವಿದ್ಯಾರ್ಥಿಗಳು ರಚಿಸಿದ ಕಲಾಕೃತಿಗಳನ್ನೂ ಪ್ರದರ್ಶನಕ್ಕೆ ಇರಿಸಲಾಗಿದೆ. ಪ್ರಕೃತಿಯ ವಿಸ್ಮಯ, ಗ್ರಾಮೀಣ ಜನಜೀವನವು ಕಲಾಕೃತಿಗಳಲ್ಲಿ ಅರಳಿವೆ.

ಹುಬ್ಬಳ್ಳಿಯ ಜೈನ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜಿನ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಮಣ್ಣು ಮಿಶ್ರಿತ ಹಾಗೂ ಗಡಸು ನೀರನ್ನು ಶುದ್ಧೀಕರಣಗೊಳಿಸುವ ಸಾಧನವನ್ನು ಆವಿಷ್ಕಾರ ಮಾಡಿದ್ದಾರೆ. ನೀರನ್ನು ಶುದ್ಧೀಕರಣ ಮಾಡುವ ಸಾಧನ ಹಾಗೂ ನೀರನ್ನು ಎತ್ತುವ ಯಂತ್ರವನ್ನು ಸೈಕಲ್‌ಗೆ ಅಳವಡಿಸಿದ್ದಾರೆ. ಇದಕ್ಕೆ ಡಿ.ಸಿ. ಮೋಟರ್ ಅನ್ನೂ ಅಳವಡಿಕೆ ಮಾಡಲಾಗಿದೆ. ಇದರಿಂದಾಗಿ ಸೈಕಲ್ಲಿನ ಪೆಡಲ್ ತುಳಿದಂತೆ ನೀರು ಆರ್.ಒ. ಫಿಲ್ಟರ್ ಮೂಲಕ ಶುದ್ಧೀಕರಣಗೊಳ್ಳಲಿದೆ.

‘ಈ ಆವಿಷ್ಕಾರಕ್ಕೆ ಐದು ತಿಂಗಳು ತಗುಲಿವೆ. ₹ 16 ಸಾವಿರ ವೆಚ್ಚವಾಗಿದೆ. ಈ ಸಾಧನದಲ್ಲಿ ಎರಡು ಹಂತದಲ್ಲಿ ನೀರು ಶುದ್ಧೀಕರಣಗೊಳ್ಳಲಿದೆ. ಮಣ್ಣು ಮಿಶ್ರಿತ ನೀರಿನ ಶುದ್ಧೀಕರಣದಲ್ಲಿ ಮೊದಲು ಮಣ್ಣಿನ ಅಂಶ ಹಾಗೂ ಕಸ ಬೇರ್ಪಡಲಿದೆ. ನಂತರ ನೀರು ಆರ್.ಒ. ಫಿಲ್ಟರ್ ಮೂಲಕ ಶುದ್ಧೀಕರಣವಾಗುತ್ತದೆ. ಇದರಿಂದ ಈ ಸಾಧನ ಹೆಚ್ಚು ದಿನ ಬಾಳಿಕೆ ಬರಲಿದೆ’ ಎಂದು ಸಾಧನವನ್ನು ಆವಿಷ್ಕಾರ ಮಾಡಿದ ವಿದ್ಯಾರ್ಥಿಗಳಲ್ಲಿ ಒಬ್ಬರಾದ ವಿಶ್ವನಾಥ್ ತಿಳಿಸಿದರು.

ಔಷಧ ಸಿಂಪಡಿಸಲು ಡ್ರೋನ್: ಮಂಗಳೂರು ತಂತ್ರಜ್ಞಾನ ಮತ್ತು ಎಂಜಿನಿಯರಿಂಗ್ ಸಂಸ್ಥೆಯ ವಿದ್ಯಾರ್ಥಿಗಳು ‘ಪಿಎಫ್-12’ ಹೆಸರಿನ ಡ್ರೋನ್ ಪರಿಚಯಿಸಿದ್ದಾರೆ. ಇದು ಕೃಷಿ ಬೆಳೆಗಳಿಗೆ ಔಷಧ ಸಿಂಪಡಿಸಲು ಸಹಕಾರಿಯಾಗಿದೆ. 12 ಲೀ. ಟ್ಯಾಂಕ್ ಹೊಂದಿರುವ ಈ ಡ್ರೋನ್, ಕೇವಲ 7 ನಿಮಿಷಗಳಲ್ಲಿ ಒಂದು ಎಕರೆ ಭೂಮಿಯಲ್ಲಿನ ಬೆಳೆಗಳಿಗೆ ಔಷಧ ಸಿಂಪಡಿಸಲಿದೆ.

‘ಒಂದು ಎಕರೆಗೆ ಔಷಧ ಸಿಂಪಡಿಸಲು ಕೆಲಸಗಾರರೊಬ್ಬರಿಗೆ ಎರಡರಿಂದ ಮೂರು ಗಂಟೆಗಳು ಬೇಕಾಗುತ್ತವೆ. ಅದೇ ಡ್ರೋನ್‌ನಿಂದ ಕೆಲವೇ ನಿಮಿಷಗಳಲ್ಲಿ ಸಿಂಪಡಿಸಬಹುದು. 2 ವರ್ಷಗಳಲ್ಲಿ ಸಾವಿರಕ್ಕೂ ಅಧಿಕ ಎಕರೆಗಳಿಗೆ, 20ಕ್ಕೂ ಅಧಿಕ ಬೆಳೆಗಳಿಗೆ ಔಷಧ ಸಿಂಪಡಿಸಿದ್ದೇವೆ. ರೈತರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ. ಬಾಡಿಗೆ ಆಧಾರದಲ್ಲಿ ನೀಡಲಾಗುತ್ತಿದ್ದು, ಒಂದು ಎಕರೆಗೆ ₹ 550 ಪಡೆಯುತ್ತಿದ್ದೇವೆ. ಡ್ರೋನ್ ನಿರ್ಮಾಣಕ್ಕೆ ₹ 5 ಲಕ್ಷ ವೆಚ್ಚವಾಗಿದೆ. ಸರ್ಕಾರದಿಂದಲೂ ಈ ಯೋಜನೆಗೆ ಪ್ರೋತ್ಸಾಹ ದೊರೆತಿದೆ’ ಎಂದು ನವೋದ್ಯಮಿ ಮನೋಜ್ ವಿವರಿಸಿದರು.

ಚಲಿಸುವಾಗಲೇ ಚಾರ್ಜ್ ಆಗಲಿದೆ ಆಟೊರಿಕ್ಷಾ

ಬೆಂಗಳೂರಿನ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಸಂಸ್ಥೆಯ ಐವರು ವಿದ್ಯಾರ್ಥಿಗಳು ಸೇರಿ ₹ 1.5 ಲಕ್ಷದಲ್ಲಿ ಎಲೆಕ್ಟ್ರಿಕ್ ಆಟೊರಿಕ್ಷಾ ಆವಿಷ್ಕಾರ ಮಾಡಿದ್ದಾರೆ. ಈ ಆಟೊರಿಕ್ಷಾಕ್ಕೆ ಸೌರಶಕ್ತಿ ಫಲಕಗಳನ್ನೂ ಅಳವಡಿಸಲಾಗಿದೆ. ಇದರಿಂದಾಗಿ ಚಲಿಸುವಾಗಲೇ ಚಾರ್ಜ್ ಆಗಲಿದೆ. ಸ್ವಯಂಚಾಲಿತ ದೀಪ (ಹೆಡ್ ಲೈಟ್), ಬ್ರೇಕ್ ಕೂಡ ಇದೆ. ಹಿತೇಶ್, ವಿಜಯ್, ಹೇಮಂತ್, ಲಿಖಿತಾ ಹಾಗೂ ಧೃತಿ ಈ ಆವಿಷ್ಕಾರ ಮಾಡಿದ್ದು, ನಾಗರತ್ನಾ ಕೆ. ಎನ್ನುವವರು ಮಾರ್ಗದರ್ಶನ ನೀಡಿದ್ದಾರೆ.

‘ಈ ಆಟೊರಿಕ್ಷಾವು ಒಮ್ಮೆ ಪೂರ್ಣ ಚಾರ್ಜ್ ಆದರೆ 90 ಕಿ.ಮೀ. ಚಲಿಸಲಿದೆ. ಗಂಟೆಗೆ 35 ಕಿ.ಮೀ. ವೇಗದಲ್ಲಿ ಕ್ರಮಿಸಲಿದೆ. ಹಿಂದಿನ ಆಸನಗಳನ್ನು ಮಡಚುವ ಆಯ್ಕೆಯಿದೆ. ಇದರಿಂದ ಸರಕನ್ನೂ ಸಾಗಿಸಬಹುದು’ ಎಂದು ವಿದ್ಯಾರ್ಥಿಗಳು ವಿವರಿಸಿದರು.

ಮಂಡ್ಯದ ಜಿ. ಮಾದೇಗೌಡ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯ ವಿದ್ಯಾರ್ಥಿಗಳು ಮಾರುತಿ 800 ಕಾರಿನ ಎಂಜಿನ್ ಬಳಸಿ, ಹೆಲಿಕಾಪ್ಟರ್ ಆವಿಷ್ಕಾರ ಮಾಡಿದ್ದಾರೆ. ಇದಕ್ಕೆ ವಿದ್ಯಾರ್ಥಿಗಳು ₹ 75 ಸಾವಿರ ವೆಚ್ಚ ಮಾಡಿದ್ದಾರೆ. ಇದು ಇನ್ನೂ ಪ್ರಯೋಗದ ಹಂತದಲ್ಲಿದೆ.

ನಿಧನ ವಾರ್ತೆ

ಬಿ.ಟಿ. ಪುಟ್ಟಪ್ಪ



ಬೆಂಗಳೂರು: ಭಾರತ್ ಹೌಸಿಂಗ್ ಸೊಸೈಟಿ ಲಿ. ಹಾಗೂ ದಿ ಭಾರತಿ ಕೋಆಪ್ ಕ್ರೆಡಿಟ್ ಸೊಸೈಟಿ ನಿರ್ದೇಶಕರಾಗಿದ್ದ ಬಿ.ಟಿ. ಪುಟ್ಟಪ್ಪ (75) ಹೃದಯಾಘಾತದಿಂದ ಭಾನುವಾರ ಅಪೊಲೊ ಆಸ್ಪತ್ರೆಯಲ್ಲಿ ನಿಧನರಾದರು.

ಪುಟ್ಟಪ್ಪ ನಾಲ್ಕು ದಶಕಗಳ ಕಾಲ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಪುಟ್ಟಪ್ಪ ಅವರ ದೇಹವನ್ನು ನಗರದ ಎಂ.ಎಸ್. ಆಸ್ಪತ್ರೆಗೆ ದಾನ ಮಾಡಲಾಗಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಶಾಲೆಯಲ್ಲಿ ವಚನ ಶ್ರಾವಣ

ಬೆಂಗಳೂರು: ವಿದ್ಯಾರ್ಥಿಗಳಲ್ಲಿ ವಚನಗಳ ಕುರಿತು ಹೆಚ್ಚಿನ ತಿಳಿವಳಿಕೆ ಮೂಡಿಸಲು ಶಾಲೆಗಳಲ್ಲಿ ‘ವಚನ ಶ್ರಾವಣ’ ನಡೆಸಲಾಗುತ್ತಿದೆ ಎಂದು ವಚನಜ್ಯೋತಿ ಬಳಗದ ಪಿನಾಕಪಾಣಿ ತಿಳಿಸಿದ್ದಾರೆ. ಜುಲೈ 29ರಿಂದ ಆಗಸ್ಟ್ 27ರವರೆಗೆ ಶಾಲೆಗಳಲ್ಲಿ ‘ವಚನ ಶ್ರಾವಣ’ ನಡೆಯಲಿದೆ. ನಂತರ ಡಿಸೆಂಬರ್‌ನಲ್ಲಿ ‘ಮಕ್ಕಳ ವಚನ ಮೇಳ’ ನಡೆಸಲಾಗುತ್ತದೆ ಎಂದಿದ್ದಾರೆ. ಮಾಹಿತಿಗೆ: 98451 84267.

31ರ ವರೆಗೆ ಇಂಡಿಯನ್ ಸಿಲ್ಕ್ ಗ್ಯಾಲರಿ ಎಕ್ಸ್‌ಪೋ

ಬೆಂಗಳೂರು: ಇಂಡಿಯನ್ ಸಿಲ್ಕ್ ಗ್ಯಾಲರಿ ವತಿಯಿಂದ ಕರಕುಶಲ ಸೀರೆಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಜುಲೈ 31ರ ವರೆಗೆ ಜೆ.ಪಿ. ನಗರದ ಶುಭ್ ಕನ್ವೆನ್ಷನ್ ಹಾಲ್‌ನಲ್ಲಿ ಆಯೋಜಿಸಲಾಗಿದೆ.

ಹ್ಯಾಂಡ್ ಬ್ಲಾಕ್ ಪ್ರಿಂಟ್ ಸೀರೆಗಳು, ಸೂಟ್ ಮತ್ತು ಸಿಲ್ಕ್ ಡಿಸೈನರ್ ಡ್ರೆಸ್ ಮೆಟೀರಿಯಲ್ಸ್ ಮತ್ತು ಬಾರ್ಡರ್, ಕುರ್ತೀಸ್, ಅಸ್ಸಾಂ ಮುಗಾ ಫ್ಯಾಬ್ರಿಕ್ಸ್, ಬಲೂಚಾರಿ, ಢಾಕಾ ಮಸ್ಲಿ, ಗಿಚಾ ಸೀರೆಗಳು, ಬುಟಿಕ್ ಸೀರೆಗಳು, ಕಾಂತ ಸೀರೆಗಳು, ಭಾಗಲ್ಪುರ್ ಸೂಟ್‌ಗಳು, ಮುದ್ರಿತ ರೇಷ್ಮೆ ಸೀರೆಗಳು, ಬನಾರಸಿ, ಕಾಂಚೀವರಂ, ಮಹೇಶ್ವರಿ, ಚಂದೇರಿ ಸಿಲ್ಕ್ ಸೀರೆಗಳು, ಸೂಟ್ ಮತ್ತು ಕೋಟಾ ಸಿಲ್ಕ್, ಬನಾರಸ್ ಜಮ್ದಾನಿ, ನೇಯ್ದ ಸೀರೆಗಳನ್ನು ಪ್ರದರ್ಶನ ಮಾಡಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಿಸಿ: 9573553337.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ನಗರದ ವಿವಿಧೆಡೆ ಇದೇ 27ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸ್ಥಳಗಳು: ಲಕ್ಷ್ಮಿ ಲೇಔಟ್, ಸೌತ್‌ಸಿಟಿ ಅಪಾರ್ಟ್‌ಮೆಂಟ್‌ಗಳು, ಕಮ್ಮನಹಳ್ಳಿ, ಶಾಂತಿನಿಕೇತನ, ದೊಡ್ಡಮ್ಮ ಲೇಔಟ್, ಪಾಂಡುರಂಗನಗರ ಲೇಔಟ್, ಗುಡ್ ಹೋಮ್ಸ್, ಅರಕೆರೆ ಮೈಕೋ ಲೇಔಟ್, ಸಿಂಡಿಕೇಟ್ ಬ್ಯಾಂಕ್ ಕಾಲೊನಿ, ತಿಮ್ಮಪ್ಪ ರೆಡ್ಡಿ ಲೇಔಟ್, ಬೃಂದರಾಮಯ್ಯ ಲೇಔಟ್, ವಿಜಯಕರಮಯ್ಯ ಲೇಔಟ್, ಸನ್ ಸಿಟಿ, ಸಾಯಿ ಎನ್‌ಕ್ಲೇವ್, ಕ್ಲಾಸಿಕ್ ಆರ್ಕಿಡ್, ವೆಂಕಟೇಶ್ವರ ಬಿಡಿಎ ಲೇಔಟ್, ಬಿ.ಕೆ. ಸರ್ಕಲ್, ಜಂಬೂ ಸವಾರಿ ದಿನ್ನೆ, ಗೊಟ್ಟಿಗೆರೆ, ಸೌತ್ ಅವೆನ್ಯೂ ಲೇಔಟ್, ಪವಮಾನ ನಗರ, ಕೆಂಬತ್ತಳ್ಳಿ ಸುತ್ತಮುತ್ತಲಿನ ಪ್ರದೇಶಗಳು.

ಜುಲೈ 16ರಂದು 5.17 ಲಕ್ಷ ಮಂದಿ ಪ್ರಯಾಣ, ಎಲ್ಲ ಪ್ರವೇಶ ದ್ವಾರಗಳ ಬಾಗಿಲು ತೆರೆಯಲು ಆಗ್ರಹ

ಮೆಟ್ರೊ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆ

• ಆದಿತ್ಯ ಕೆ.ಎ.

ಬೆಂಗಳೂರು: ಮೆಟ್ರೊ ರೈಲು ಅವಲಂಬಿಸುವ ಪ್ರಯಾಣಿಕರ ಸಂಖ್ಯೆಯಲ್ಲಿ ಮತ್ತೆ ಏರಿಕೆಯಾಗಿದ್ದು, ಕೋವಿಡ್ ಬಳಿಕ ಜುಲೈನಲ್ಲಿ ಗರಿಷ್ಠ ಪ್ರಯಾಣಿಕರು ಓಡಾಟ ನಡೆಸಿದ್ದಾರೆ. ಇದರಿಂದ ಆದಾಯ ವೃದ್ಧಿಯ ಜತೆಗೆ ವಿಸ್ತರಣೆ ಕಾಮಗಾರಿ ವೇಗಕ್ಕೂ ಅನುಕೂಲವಾಗಲಿದೆ.

ಕೋವಿಡ್ ಸಾಂಕ್ರಾಮಿಕದ ಮೊದಲ ಅಲೆಯಲ್ಲಿ ಮೆಟ್ರೊ ರೈಲು ಸಂಚಾರ ಸ್ಥಗಿತಗೊಂಡಿದ್ದರೆ, 2ನೇ ಅಲೆಯ ವೇಳೆ ಪ್ರಯಾಣಿಕರಿಗೆ ಹಲವು ನಿರ್ಬಂಧ ವಿಧಿಸಲಾಗಿತ್ತು. ಪ್ರಯಾಣಿಕರೂ ಹೆದರಿ ಮೆಟ್ರೊ ಪ್ರಯಾಣ ಬಿಟ್ಟು ಸ್ವಂತ ವಾಹನಗಳಲ್ಲಿ ಓಡಾಟ ನಡೆಸುತ್ತಿದ್ದರು.

ಈಗ ಮಾಸ್ಕ್ ಹೊರತುಪಡಿಸಿ ಬೇರೆ ಯಾವ ನಿರ್ಬಂಧವೂ ಇಲ್ಲ. ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆಯಲ್ಲಿ ನಿಧಾನವಾಗಿ ಮತ್ತೆ ಚೇತರಿಕೆ ಕಾಣಿಸುತ್ತಿದೆ. ರೈಲುಗಳ ಸಂಚಾರ ಹೆಚ್ಚಿಸಬೇಕೆಂಬುದು ಪ್ರಯಾಣಿಕರ ಆಗ್ರಹವಾಗಿದೆ.

ಜುಲೈ 16ರಂದು (ಶನಿವಾರ) ಒಂದೇ ದಿನ 5.17 ಲಕ್ಷ ಪ್ರಯಾಣಿಕರು ಹಸಿರು, ನೇರಳೆ ಮಾರ್ಗದಲ್ಲಿ ಪ್ರಯಾಣಿಸಿದ್ದು, ಕೋವಿಡ್ ನಂತರದ ದಿನಗಳಲ್ಲಿ ಇದು ದಾಖಲೆಯಾಗಿದೆ.



ಮೆಟ್ರೊ ನಿಲ್ದಾಣದಲ್ಲಿ ಪ್ರಯಾಣಿಕರು

ಈ ತಿಂಗಳ ವಾರಾಂತ್ಯದಲ್ಲೂ ಇದೇ ಸ್ಥಿತಿಯಿತ್ತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳಿದರು. 'ಸದ್ಯಕ್ಕೆ ರೈಲು ಓಡಾಟದ ಸಂಖ್ಯೆ ಹೆಚ್ಚಿಸುವ ಆಲೋಚನೆ ಇಲ್ಲ' ಎಂದೂ ಅವರು ಪ್ರತಿಕ್ರಿಯಿಸಿದರು.

'ಕೋವಿಡ್‌ಪೂರ್ವ ಅವಧಿಯಲ್ಲಿ ದಿನವೊಂದರಲ್ಲಿ 6.1 ಲಕ್ಷ ಪ್ರಯಾಣಿಕರು ಮೆಟ್ರೊದಲ್ಲಿ ಸಂಚರಿಸಿದ್ದು ದಾಖಲೆ ಆಗಿತ್ತು. ಕೋವಿಡ್ ನಂತರ ಚೇತರಿಕೆ ಕಾಣಿಸಿದ್ದರೂ ನಿರೀಕ್ಷೆಯ ಮಟ್ಟ ತಲುಪಿಲ್ಲ. ಎರಡೂ ಮಾರ್ಗಗಳಲ್ಲಿ ವಾರದ ದಿನಗಳಲ್ಲಿ ಸರಾಸರಿ 4.6 ಲಕ್ಷ ಜನರು ಪ್ರಯಾಣಿಸುತ್ತಿದ್ದಾರೆ' ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಯಶವಂತ್ ಚವಾಣ್ ತಿಳಿಸಿದರು.

ಹೊರ ಊರುಗಳಿಂದ ನಗರದ ಹೃದಯ ಭಾಗಕ್ಕೆ ಬರುವವರು, ನಗರದಿಂದ ಹೊರ ವಲಯಕ್ಕೆ ತೆರಳುವವರು ಮೆಟ್ರೊ ಅವಲಂಬಿಸುವುದು ಈಗ ಹೆಚ್ಚುತ್ತಿದೆ.

ಕೋವಿಡ್ ವೇಳೆ ಕೆಲವು ನಿಲ್ದಾಣಗಳ ದ್ವಾರಗಳನ್ನು ಬಂದ್ ಮಾಡಲಾಗಿತ್ತು. ಈಗಲೂ ಅದೇ ಸ್ಥಿತಿಯಿದೆ. ಈಗ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆಯಾಗಿದ್ದು, ನಿರ್ಬಂಧ ತೆರವು ಮಾಡುವಂತೆ ಪ್ರಯಾಣಿಕರು ಕೋರಿದ್ದಾರೆ. ಮೆಜೆಸ್ಟಿಕ್‌ನಲ್ಲಿ ಕೆಎಸ್‌ಆರ್‌ಟಿಸಿ ಕಡೆಯಿಂದ ಬರುವ ಪ್ರವೇಶ ದ್ವಾರ, ಸಿಟಿ ಸೆಂಟ್ರಲ್ ನಿಲ್ದಾಣ, ಕಬ್ಬನ್ ಪಾರ್ಕ್ ನಿಲ್ದಾಣದಲ್ಲಿ ಕೆಲವು ಪ್ರವೇಶ ದ್ವಾರಗಳನ್ನು ಮುಚ್ಚಲಾಗಿದೆ.

2ನೇ ಹಂತದ ಕಾಮಗಾರಿ ಚುರುಕು: ಮೆಟ್ರೊ ರೈಲು ಮಾರ್ಗದ 2ನೇ ಹಂತದ ಕಾಮಗಾರಿಗಳು ಅತ್ಯಂತ ವೇಗವಾಗಿ ನಡೆಯುತ್ತಿವೆ. ಸಿಲ್ಕ್‌ಬೋರ್ಡ್–ಕೆ.ಆರ್.ಪುರ, ಕೆ.ಆರ್.ಪುರ–ಹೆಬ್ಬಾಳ, ಹೆಬ್ಬಾಳ–ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ತನಕ ಸಂಪರ್ಕ ಕಲ್ಪಿಸಲು ಕಾಮಗಾರಿ ಪ್ರಗತಿಯಲ್ಲಿದೆ. ಈ ಮಾರ್ಗದಲ್ಲಿ ಸಂಚಾರ ಆರಂಭವಾದರೆ ವಾಹನ ದಟ್ಟಣೆಯ ಕಿರಿಕಿರಿಗೆ ಮುಕ್ತಿ ಸಿಗಲಿದೆ. ಈ ಭಾಗದಲ್ಲಿ ಐಟಿ ಕಂಪನಿಗಳು ಹೆಚ್ಚಾಗಿದ್ದು, ಬಹುಬೇಗ ಕಾಮಗಾರಿ ಪೂರ್ಣಗೊಳಿಸಲಿ ಎಂಬುದು ಐಟಿ–ಬಿಟಿ ಉದ್ಯೋಗಿಗಳ ಬೇಡಿಕೆ.

ನಿಲ್ದಾಣಕ್ಕೆ ರಸ್ತೆ: ಸಮ್ಮತಿ

ಬಹುಬೇಡಿಕೆಯ ನಾಗಸಂದ್ರ– ಬಿಐಇಸಿ (ರೀಚ್– 3 ವಿಸ್ತರಣೆ) ತನಕದ 3.14 ಕಿ.ಮೀ. ಮಾರ್ಗದಲ್ಲಿ ಭೂಸ್ವಾಧೀನ ಸಮಸ್ಯೆಗೆ ಪರಿಹಾರ ಸಿಕ್ಕಿದೆ.

ಜಿಂದಾಲ್–ಪ್ರೆಸ್ಟೀಜ್ ಲೇಔಟ್ ಮೂಲಕ ಅಂಚೆಪಾಳ್ಯ ಹಾಗೂ ಚಿಕ್ಕಬಿದರಕಲ್ಲು ಮೆಟ್ರೊ ನಿಲ್ದಾಣಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲು ಹೆಚ್ಚುವರಿ ಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ರದ್ದುಗೊಂಡಿತ್ತು. ಈಗ ಪ್ರೆಸ್ಟೀಜ್ ಸಂಸ್ಥೆಯು ತನ್ನ ಪ್ರದೇಶದಲ್ಲಿ 12.5 ಅಡಿ ಅಗಲದ ರಸ್ತೆ ನಿರ್ಮಿಸಿ ಸಾರ್ವಜನಿಕರ ಬಳಕೆಗೆ ನೀಡುವುದಾಗಿ ತಿಳಿಸಿದೆ. ಸಮಸ್ಯೆ ಇತ್ಯರ್ಥವಾಗಿದೆ. ಈ ಮಾರ್ಗದಲ್ಲಿ ರೈಲು ಓಡಾಟ ಆರಂಭವಾದರೆ ಸಾವಿರಾರು ಪ್ರಯಾಣಿಕರಿಗೆ ಅನುಕೂಲ ಆಗಲಿದೆ.

'ನೈಸ್ ರಸ್ತೆ ಸೇರಿ ಹಲವು ಅಡ್ಡಿ–ಆತಂಕಗಳು ಎದುರಾಗಿದ್ದವು. ಒಂದೊಂದೇ ಸಮಸ್ಯೆಯನ್ನು ಪರಿಹರಿಸಲಾಗುತ್ತಿದೆ. ಈ ವರ್ಷಾಂತ್ಯದಲ್ಲಿ ನಾಗಸಂದ್ರ– ಬಿಐಇಸಿ ನಡುವೆ ಮೆಟ್ರೊ ಸಂಚಾರ ಆರಂಭಗೊಳ್ಳುವ ನಿರೀಕ್ಷೆ ಇದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೊ: ದಿನವೊಂದರಲ್ಲಿ ಓಡಾಟ ನಡೆಸಿದ ಪ್ರಯಾಣಿಕರ ಸಂಖ್ಯೆ

6.1 ಲಕ್ಷ
ಕೋವಿಡ್‌ಪೂರ್ವ

80 ಸಾವಿರ
ಕೋವಿಡ್ 2ನೇ ಅಲೆ

5.7 ಲಕ್ಷ
ಕಳೆದ ಜೂನ್ 4ರಂದು

5.17 ಲಕ್ಷ
ಇದೇ ಜುಲೈ 16ರಂದು

ಕೋವಿಡ್ ಬಳಿಕ ಪ್ರಯಾಣಿಕರ ಸಂಖ್ಯೆ ಶೇ 80ರಷ್ಟು ಮಾತ್ರ ಸುಧಾರಣೆ ಕಂಡಿದೆ. 2020ರಲ್ಲಿ ಇದ್ದ ಸಂಖ್ಯೆಗೆ ಇನ್ನೂ ತಲುಪಲು ಸಾಧ್ಯವಾಗಿಲ್ಲ.

ಯಶವಂತ್ ಚವಾಣ್
ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ, ಬಿಎಂಆರ್‌ಸಿಎಲ್

2 ತಿಂಗಳಲ್ಲಿ ತಮಿಳುನಾಡಿಗೆ 75 ಟಿಎಂಸಿ ಅಡಿ ನೀರು

ಮೆಟ್ಟೂರು ಜಲಾಶಯಕ್ಕೆ ನಿಗದಿಗಿಂತ 40 ಟಿಎಂಸಿ ಅಡಿ ಹೆಚ್ಚುವರಿ ನೀರು ಹರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜುಲೈನಲ್ಲಿ ಉತ್ತಮ ಮಳೆಯಾದ ಕಾರಣ ಎರಡು ತಿಂಗಳ (ಜೂನ್ ಮತ್ತು ಜುಲೈ) ಅವಧಿಯಲ್ಲಿ ಸುಮಾರು 75 ಟಿಎಂಸಿ ಅಡಿಗಳಷ್ಟು ನೀರು ತಮಿಳುನಾಡಿನ ಮೆಟ್ಟೂರು ಜಲಾಶಯಕ್ಕೆ ಹರಿದು ಹೋಗಿದೆ.

ಜೂನ್‌ನಲ್ಲಿ ನಿಗದಿತ ಸಮಯಕ್ಕೆ ಮಳೆ ಬಾರದ ಕಾರಣ ಈ ಬಾರಿ ರಾಜ್ಯ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇತ್ತು. ಆದರೆ, ಜುಲೈನಲ್ಲಿ ವಾಡಿಕೆಗಿಂತಲೂ ಅಧಿಕ ಮಳೆಯಾಗಿದ್ದರಿಂದ ತಮಿಳುನಾಡಿಗೆ ಹರಿಸಬೇಕಾದ ಪ್ರಮಾಣಕ್ಕಿಂತ ಹೆಚ್ಚು ನೀರು ಹರಿದು ಹೋಗಿದೆ. ಸುಪ್ರೀಂಕೋರ್ಟ್ ತೀರ್ಪಿನ ಅನ್ವಯ ಜೂನ್ ಮತ್ತು ಜುಲೈ ನಲ್ಲಿ ತಮಿಳುನಾಡಿಗೆ 35 ಟಿಎಂಸಿ ಅಡಿಗಳಷ್ಟು ನೀರು ಬಿಡಬೇಕು. ಜುಲೈನಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗಿದ್ದರಿಂದ ಈ ಎರಡು ತಿಂಗಳಲ್ಲಿ 75 ಟಿಎಂಸಿ ಅಡಿಗಳಷ್ಟು ನೀರು ತಮಿಳುನಾಡಿಗೆ ಹರಿದು ಹೋಗಿದೆ. ಆಗಸ್ಟ್‌ನಲ್ಲಿ 50 ಟಿಎಂಸಿ ಅಡಿಯಷ್ಟು ನೀರು ಬಿಡಬೇಕು. ಒಂದು ವೇಳೆ ಆಗಸ್ಟ್‌ನಲ್ಲಿ ಮಳೆ ಕಡಿಮೆಯಾದರೂ ಜುಲೈನಲ್ಲಿ ಹೆಚ್ಚು ನೀರು ಬಿಟ್ಟಿರುವುದರಿಂದ ಲೆಕ್ಕಾಚಾರ ಸರಿದೂಗಿಸಿದಂತಾಗುತ್ತದೆ ಎಂದು ಹಿರಿಯ ಅಧಿಕಾರಿ ತಿಳಿಸಿದರು.

ಕಾವೇರಿ ಜಲಾನಯದ ನಾಲ್ಕು ಜಲಾಶಯಗಳ ನೀರು ಸಂಗ್ರಹದ ಒಟ್ಟು ಸಾಮರ್ಥ್ಯ 114.57 ಟಿಎಂಸಿ ಅಡಿಗಳು ಇದ್ದು, ಸೋಮವಾರ (ಜುಲೈ 25) ಒಟ್ಟು 113.40 ಟಿಎಂಸಿ ಅಡಿ ನೀರು ಸಂಗ್ರಹವಿತ್ತು. ಕಳೆದ ವರ್ಷ ಇದೇ ಅವಧಿಯಲ್ಲಿ 86.74 ಟಿಎಂಸಿ ಅಡಿ ನೀರು ಸಂಗ್ರಹವಿತ್ತು. ಈ ಜಲಾಶಯಗಳಲ್ಲಿ ನೀರಿನ ಒಳಹರಿವು 29,051 ಕ್ಯೂಸೆಕ್ ಇದ್ದರೆ, ಹೊರ ಹರಿವು 21,718 ಕ್ಯೂಸೆಕ್‌ಗಳಿವೆ. ಜುಲೈ 1 ರಿಂದ ಇಲ್ಲಿಯವರೆಗೆ ಸಂಚಿತ ಒಳಹರಿವು 161 ಟಿಎಂಸಿ ಅಡಿಗಳು ಮತ್ತು ಇದೇ ಅವಧಿಯಲ್ಲಿ ಸಂಚಿತ ಹೊರ ಹರಿವು 110 ಟಿಎಂಸಿ ಅಡಿಗಳು ಎಂದು ಜಲಸಂಪನ್ಮೂಲ ಇಲಾಖೆಯ ಮೂಲಗಳು ಹೇಳಿವೆ.

ಕಾವೇರಿ ಜಲಾನಯನ ಪ್ರದೇಶದ ಪ್ರಮುಖ ಜಲಾಶಯಗಳಾದ ಹಾರಂಗಿಯಲ್ಲಿ 7.91 ಟಿಎಂಸಿ ಅಡಿ, ಹೇಮಾವತಿಯಲ್ಲಿ 37.10 ಟಿಎಂಸಿ ಅಡಿ, ಕೆಆರ್‌ಎಸ್‌ನಲ್ಲಿ 49.28 ಟಿಎಂಸಿ ಅಡಿ ಮತ್ತು ಕಬಿನಿಯಲ್ಲಿ 19.40 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಉತ್ತಮ ಫಸಲು ನಿರೀಕ್ಷೆ: ಕಳೆದ ಕೆಲವು ದಿನಗಳಿಂದ ಮಳೆ ಬಿಡುವು ಕೊಟ್ಟಿರುವುದರಿಂದ ರೈತರಿಗೆ ಅನುಕೂಲವೇ ಆಗಿದೆ. ಮಳೆ ಮುಂದುವರಿದಿದ್ದರೆ ಕೃಷಿಕರಿಗೆ ಸಂಕಷ್ಟ ಎದುರಾಗುತ್ತಿತ್ತು. ಬೆಳೆಯ ಮೇಲೆ ದುಷ್ಪರಿಣಾಮದ ಸಾಧ್ಯತೆ ಇತ್ತು. ಜೂನ್‌ನಲ್ಲಿ ಕೆಲವು ತಾಲ್ಲೂಕುಗಳಲ್ಲಿ ಮಳೆಯ ಕೊರತೆಯಿಂದ ಬಿತ್ತನೆಗೆ ಯಡವಟ್ಟು ಆಗಿದ್ದು ನಿಜ. ಜುಲೈನಲ್ಲಿ ಸರಿ ಹೋಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ನಿವೃತ್ತ ನಿರ್ದೇಶಕ ಶ್ರೀನಿವಾಸರೆಡ್ಡಿ ತಿಳಿಸಿದ್ದಾರೆ.

ಸಕ್ರಿಯ ಪ್ರಕರಣ 7,547ಕ್ಕೆ ಏರಿಕೆ

ಬೆಂಗಳೂರು: ನಗರದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿದ್ದು, ಸೋಂಕಿತರ ಸಂಖ್ಯೆ 7,547ಕ್ಕೆ ತಲುಪಿದೆ.

ಸೋಮವಾರ 813 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕಿತರಲ್ಲಿ ಹೊಸದಾಗಿ 999 ಮಂದಿ ಚೇತರಿಸಿಕೊಂಡಿದ್ದಾರೆ. 76 ವರ್ಷದ ವೃದ್ಧರೊಬ್ಬರು ಮೃತಪಟ್ಟಿದ್ದಾರೆ. ಅವರು ತೀವ್ರ ಉಸಿರಾಟದ ಸಮಸ್ಯೆಯನ್ನು ಎದುರಿಸುತ್ತಿದ್ದರು.

ಸೋಂಕಿತರಲ್ಲಿ ಸದ್ಯ 34 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. 28 ಮಂದಿ ಸಾಮಾನ್ಯ ಹಾಸಿಗೆ ಹಾಗೂ ಆರು ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಉಳಿದವರು ಮನೆ ಆರೈಕೆಯಲ್ಲಿಯೇ ಚೇತರಿಸಿಕೊಳ್ಳುತ್ತಿದ್ದಾರೆ.

ನಗರದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 18.28 ಲಕ್ಷಕ್ಕೆ ತಲುಪಿದೆ. ಅವರಲ್ಲಿ ಈಗಾಗಲೇ 18.03 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಸೋಂಕಿತರಲ್ಲಿ ಮೃತರ ಸಂಖ್ಯೆ 16,973ಕ್ಕೆ ಏರಿಕೆಯಾಗಿದೆ.

ನಕಲಿ ಮದ್ಯ ಸೇವಿಸಿ 10 ಮಂದಿ ಸಾವು

ಬೊಟಾಡ, ಗುಜರಾತ್ (ಪಿಟಿಐ): 'ನಕಲಿ ಮದ್ಯ ಸೇವಿಸಿ 10 ಮಂದಿ ಮೃತಪಟ್ಟಿದ್ದು, 20 ಜನರನ್ನು ಚಿಕಿತ್ಸೆಗಾಗಿ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಈ ಸಂಬಂಧ ಮೂವರನ್ನು ಬಂಧಿಸಲಾಗಿದೆ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಆಶಿಶ್ ಭಾಟಿಯಾ ಹೇಳಿದ್ದಾರೆ.

'ಬೊಟಾಡ ಜಿಲ್ಲೆಯ ರೋಜಿದಾ ಗ್ರಾಮದಲ್ಲಿ ಸೋಮವಾರ ಈ ಘಟನೆ ನಡೆದಿದೆ' ಎಂದು ತಿಳಿಸಿದ್ದಾರೆ.

'ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ರೋಜಿದಾ ಹಾಗೂ ಸುತ್ತಲಿನ ಕೆಲ ಗ್ರಾಮಗಳ ಜನರು ಬೆಳಿಗ್ಗೆ ಬರ್ವಾಲಾ ಹಾಗೂ ಬೊಟಾಡದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ದಾಖಲಾಗಿದ್ದರು. ಈ ಪೈಕಿ ಇಬ್ಬರು ಬೆಳಿಗ್ಗೆಯೇ ಸಾವಿಗೀಡಾಗಿದ್ದರು. ರಾತ್ರಿ ವೇಳೆಗೆ ಹತ್ತು ಮಂದಿ ಮೃತಪಟ್ಟಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

'ಭಾನುವಾರ ರಾತ್ರಿ ಅಂಗಡಿಯೊಂದರಲ್ಲಿ ಮದ್ಯ ಖರೀದಿಸಿದ್ದೆವು. ಅದನ್ನು ಸೇವಿಸಿದ ಬಳಿಕ ಸುಮಾರು 15 ಮಂದಿಯ ಆರೋಗ್ಯ ಹದಗೆಟ್ಟಿತ್ತು. ಸೋಮವಾರ ಬೆಳಿಗ್ಗೆ ನಮ್ಮನ್ನೆಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು' ಎಂದು ಹಿಮ್ಮತ್ ಭಾಯ್ ಎಂಬುವರು ಹೇಳಿದ್ದಾರೆ. ಇವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಪ್ರಕರಣದ ತನಿಖೆಗೆ ಡಿವೈಎಸ್‌ಪಿ ದರ್ಜೆಯ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿದೆ. ಈ ತಂಡ ಶೀಘ್ರವೇ ತಪ್ಪಿತಸ್ಥರನ್ನು ಪತ್ತೆಹಚ್ಚಲಿದೆ' ಎಂದು ಭಾವ್‌ನಗರದ ಐಜಿಪಿ ಅಶೋಕ್ ಕುಮಾರ್ ಯಾದವ್ ತಿಳಿಸಿದ್ದಾರೆ.



ಫೆಮಿನಾ ಮಿಸ್ ಇಂಡಿಯಾ

ನಗರಕ್ಕೆ ಆಗಮಿಸಿದ್ದ ಫೆಮಿನಾ ಮಿಸ್ ಇಂಡಿಯಾ ವರ್ಲ್ಡ್ ಸಿನಿ ಶೆಟ್ಟಿ ಹೋಟೆಲ್‌ವೊಂದರಲ್ಲಿ ಕ್ಯಾಮೆರಾಗೆ ಪೋಸು ನೀಡಿದ್ದು ಹೀಗೆ

ಬೇಡ ಜಂಗಮರಿಗೆ ಎಸ್‌ಸಿ ಸೌಲಭ್ಯ: 28ಕ್ಕೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಯ ಮೀಸಲಾತಿ ಸೌಲಭ್ಯಕ್ಕೆ ಅನ್ಯ ಸಮುದಾಯಗಳು ಕನ್ನ ಹಾಕುತ್ತಿವೆ. ಮೀಸಲಾತಿ ವ್ಯವಸ್ಥೆ ಕಳೆದುಹೋಗುವ ಅಪಾಯ ಎದುರಾಗಿದೆ' ಎಂದು ಪರಿಶಿಷ್ಟ ಜಾತಿ, ಪಂಗಡಗಳ ಸುಳ್ಳು ಜಾತಿ ಪ್ರಮಾಣಪತ್ರ ವಿರೋಧಿ ಹೋರಾಟ ಸಮಿತಿ ಹೇಳಿದೆ.

'ಬೇಡ ಜಂಗಮ ಸಮುದಾಯದ ಅನೇಕರು ಪರಿಶಿಷ್ಟ ಜಾತಿ ಮೀಸಲಾತಿ ಸೌಲಭ್ಯ ಪಡೆಯುತ್ತಿದ್ದಾರೆ. ಶೋಷಣೆಗೆ ಗುರಿಯಾದ ಸಮುದಾಯದ ಸೌಲಭ್ಯ ಕಬಳಿಸುವ ಹುನ್ನಾರ ನಡೆಯುತ್ತಿದೆ. ಇದನ್ನು ವಿರೋಧಿಸಿ ಜುಲೈ 28ರಂದು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಭೀಮವಾದ) ರಾಜ್ಯ ಸಂಚಾಲಕ ಆರ್. ಮೋಹನರಾಜ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಅಖಿಲ ಕರ್ನಾಟಕ ಬೇಡ ಜಂಗಮ ಸಂಘಟನೆಗಳ ಒಕ್ಕೂಟವನ್ನು ರಚಿಸಿಕೊಂಡು ಮೀಸಲಾತಿ ಸೌಲಭ್ಯವನ್ನು ಕದಿಯುತ್ತಿದ್ದಾರೆ. ಈ ಅಪರಾಧವನ್ನು ಮುಚ್ಚಲು ಹೋರಾಟ ನಡೆಸುತ್ತಿರುವ ಪದಾಧಿಕಾರಿಗಳ ವಿರುದ್ಧ ಸರ್ಕಾರ ಪರಿಶಿಷ್ಟ ಜಾತಿ ಪರಿಶಿಷ್ಟ ಮತ್ತು ಪಂಗಡಗಳ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಅಖಿಲ ಕರ್ನಾಟಕ ಬೇಡ ಜಂಗಮ ಸಂಘಟನೆಗಳ ಒಕ್ಕೂಟ ರಚಿಸಿಕೊಂಡು ತಾವೇ ಬೇಡ ಜಂಗಮರು ಎಂದು ಸುಳ್ಳು ಪ್ರತಿಪಾದಿಸಿ, ಸಾಮಾಜಿಕ ನ್ಯಾಯಕ್ಕೆ ದ್ರೋಹ ಬಗೆಯುತ್ತಿದ್ದಾರೆ. ಪರಿಶಿಷ್ಟರ ತಟ್ಟೆಗೆ ಕೈ ಹಾಕಿ ಮೀಸಲಾತಿ ಎಂಬ ಅನ್ನದ ಅಗುಳನ್ನು ಕಿತ್ತುಕೊಳ್ಳುವ ಹುನ್ನಾರ ನಡೆಸುತ್ತಿರುವುದು ಖಂಡನೀಯ' ಎಂದು ಅವರು ತಿಳಿಸಿದರು.

'ಬೇಡ ಜಂಗಮರು ನಿಜವಾಗಲೂ ಪರಿಶಿಷ್ಟ ಜಾತಿಯವರಾಗಿದ್ದರೆ ಪರಿಶಿಷ್ಟ ಜಾತಿ ಮತ್ತು ಪಂಗಡದವರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಲಿ' ಎಂದು ಹೋರಾಟ ಸಮಿತಿ ಮುಖಂಡ ಹೆಣ್ಣೂರು ಶ್ರೀನಿವಾಸ ಸವಾಲು ಎಸೆದರು.

'ಕನ್ನಡ ಭವನಕ್ಕೆ ಜೋಳಿಗೆ ಹಿಡಿಯಲು ಸಿದ್ಧ'

ಬೆಂಗಳೂರು: 'ನನ್ನ ಮಠಕ್ಕಾಗಿ ನಾನು ಎಂದೂ ಗೋವಾದಲ್ಲಿ ಜೋಳಿಗೆ ಹಿಡಿದವನಲ್ಲ. ಆದರೆ, ಗೋವಾದಲ್ಲಿ ಕನ್ನಡ ಭವನ ನಿರ್ಮಾಣಕ್ಕಾಗಿ ನಾನು ಜೋಳಿಗೆ ಹಿಡಿಯಲೂ ಸಿದ್ಧ' ಎಂದು ಹುಕ್ಕೇರಿ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಗೋವಾದ ಪಣಜಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೋವಾ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು. 'ಒಂದು ವರ್ಷದೊಳಗೆ ಗೋವಾ ನೆಲದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಬೇಕು. ಇನ್ನೊಂದು ತಿಂಗಳೊಳಗೆ ಕನ್ನಡ ಭವನ ನಿರ್ಮಾಣಕ್ಕಾಗಿ ಬೇಕಾದ ಜಾಗ ಖರೀದಿಯಾಗಲೇಬೇಕು' ಎಂದು ಹೇಳಿದರು.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, 'ಗೋವಾ ನೆಲದಲ್ಲಿ ಕನ್ನಡ ಭವನ ನಿರ್ಮಾಣವಾಗಬೇಕಿದೆ. ಕನ್ನಡ ಭವನ ನಿರ್ಮಿಸಲು ಕರ್ನಾಟಕ ಸರ್ಕಾರ ಆರ್ಥಿಕ ನೆರವು ನೀಡುವ ಭರವಸೆ ನೀಡಿದೆ. ಭವನ ನಿರ್ಮಾಣಕ್ಕೆ ಜಾಗ ನೀಡುವಂತೆ ಗೋವಾ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಗೋವಾದ ಜನಪ್ರತಿನಿಧಿಗಳೊಂದಿಗೆ ಪರಿಷತ್ತು ಚರ್ಚೆ ನಡೆಸಿದೆ' ಎಂದು ತಿಳಿಸಿದರು.

ಪರಿಷತ್ತಿನ ಗೋವಾ ಘಟಕದ ಅಧ್ಯಕ್ಷ ಸಿದ್ಧಣ್ಣ ಮೇಟಿ, 'ಗೋವಾದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಸಾಕಷ್ಟು ಪ್ರಯತ್ನ ನಡೆಸಲಾಗುತ್ತಿದೆ. ಕನ್ನಡ ಭವನ ನಿರ್ಮಾಣಕ್ಕೆ ಜಾಗ ಖರೀದಿಸಲು ಹುಕ್ಕೇರಿ ಶ್ರೀಗಳು ಜೋಳಿಗೆ ಹಿಡಿದು ಬಂದರೆ, ನಾನು ಆ ಜೋಳಿಗೆಗೆ ₹ 10 ಲಕ್ಷ ದೇಣಿಗೆ ರೂಪದಲ್ಲಿ ನೀಡಲಿದ್ದೇನೆ' ಎಂದು ಘೋಷಿಸಿದರು.



ದಯಾನಂದ ಸಾಗರ್ ವಿಶ್ವವಿದ್ಯಾಲಯದಲ್ಲಿ ಸೋಮವಾರ ಆಯೋಜಿಸಿದ್ದ ಆರ್. ದಯಾನಂದ ಸಾಗರ್ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಸನ್ಮಾನಿಸಲಾಯಿತು.

'ಈಶ್ವರಪ್ಪಗೆ ಕ್ಲೀನ್‌ಚಿಟ್: ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಕೆ.ಎಸ್. ಈಶ್ವರಪ್ಪ ಅವರಿಗೆ ರಾಜ್ಯ ಸರ್ಕಾರ 'ಬಿ' ರಿಪೋರ್ಟ್ ನೀಡಿರುವುದರ ವಿರುದ್ಧ ನಾವು ದೊಡ್ಡ ಹೋರಾಟ ಮಾಡುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈಶ್ವರಪ್ಪ ಅವರನ್ನು ಪ್ರಕರಣದಿಂದ ಕೈ ಬಿಡಲು ಸರ್ಕಾರ ಮೊದಲೇ ಯೋಜನೆ ರೂಪಿಸಿತ್ತು. 'ಬಿ' ರಿಪೋರ್ಟ್, ಪೊಲೀಸರ ತನಿಖೆ ಬಗ್ಗೆ ಕಾನೂನು ತಜ್ಞರ ಜೊತೆ ಚರ್ಚಿಸಿದ್ದೇವೆ. ತನಿಖೆ ವೇಳೆ ಬಹಳ ಲೋಪದೋಷ ಆಗಿವೆ' ಎಂದರು.

'ರಾಜ್ಯದಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಚರ್ಚೆ ನಡೆಸಲು ಸಿದ್ಧ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಸವಾಲೆಸೆದಿದ್ದಾರೆ. ಆದರೆ, ಈ ಚರ್ಚೆಯನ್ನು ಅವರ ಪಕ್ಷದ ಅಧ್ಯಕ್ಷರ ಜತೆ ಮಾಡಬೇಕೋ, ಮಾಜಿ ಮುಖ್ಯಮಂತ್ರಿ ಜತೆ ಮಾಡಬೇಕೋ ಎಂದು ತೀರ್ಮಾನಿಸುತ್ತೇವೆ' ಎಂದು ಅವರು ಹೇಳಿದರು.

'ಸರ್ಕಾರ ಆರಂಭದಲ್ಲೇ ಕ್ಲೀನ್ ಚಿಟ್ ನೀಡಿದರೆ ಪೊಲೀಸ್ ಅಧಿಕಾರಿಗಳು ಹೇಗೆ ಕೆಲಸ ಮಾಡಲು ಸಾಧ್ಯ' ಎಂದೂ ಪ್ರಶ್ನಿಸಿದರು.

'ಯಶಸ್ಸಿಗಿಂತ ಸಾಧನೆ ಮುಖ್ಯ'

ಬೆಂಗಳೂರು: ಯಶಸ್ಸಿಗಿಂತ ಸಾಧನೆ ಮುಖ್ಯ. ಯಶಸ್ಸು ಇನ್ನಷ್ಟು ವ್ಯಕ್ತಿಗಳ ಸಾಧನೆಗೆ ಕಾರಣವಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ದಯಾನಂದ ಸಾಗರ್ ವಿಶ್ವವಿದ್ಯಾಲಯ ಆಯೋಜಿಸಿದ್ದ 'ಆರ್. ದಯಾನಂದ ಸಾಗರ್ ಅವರ ಜನ್ಮಶತಮಾನೋತ್ಸವ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಾವಿನ ನಂತರವೂ ಬದುಕುವವನು ಸಾಧಕ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ನಾವು ಇಲ್ಲದಿರುವಾಗಲೂ ಜನ ನಮ್ಮ ಕೆಲಸಗಳಿಂದ ನಮ್ಮನ್ನು ನೆನಪಿಸಿಕೊಳ್ಳುವಂತಹ ಸಾಧನೆ ಮಾಡಬೇಕು' ಎಂದರು.

'ದಯಾನಂದ ಸಾಗರ್ ಅವರು ಕಲೆ, ಸಂಸ್ಕೃತಿಯನ್ನು ಬೆಳೆಸಲು ಹಲವಾರು ಸಂಘ ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಅವರೊಬ್ಬ ಸಾಂಸ್ಥಿಕ ವ್ಯಕ್ತಿ, ಹೀಗಾಗಿಯೇ ಅವರ ಹೆಸರು ಅಚ್ಚಳಿಯದೆ ಉಳಿದಿದೆ. ಅವರು ಸ್ಥಾಪಿಸಿದ ಶೈಕ್ಷಣಿಕ ಸಂಸ್ಥೆಗಳಿಂದ ಪ್ರತಿವರ್ಷ 28 ಸಾವಿರ ವಿದ್ಯಾರ್ಥಿಗಳು ಜ್ಞಾನವನ್ನು ಪಡೆದುಕೊಂಡು ತೆರಳುವ ಸಂದರ್ಭದಲ್ಲಿ ದಯಾನಂದ ಸಾಗರ್ ಅವರನ್ನು ನೆನೆಸಿಕೊಳುತ್ತಾರೆ' ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮಾತನಾಡಿದರು. ಸಚಿವ ಆರ್. ಅಶೋಕ್, ಹೇಮಚಂದ್ರ ಸಾಗರ್, ಪ್ರೇಮಚಂದ್ರ ಸಾಗರ್ ಇದ್ದರು.

ಕ್ಷೇಮ ಕುಶಲ



ತಲೆಸುತ್ತಿನ ಸುತ್ತಮುತ್ತ...

ಮನುಷ್ಯಜೀವಿ ಮೂಲತಃ ಚತುಷ್ಪಾದಿಗಳಿಂದ ವಿಕಾಸವಾದರೂ ಎರಡು ಕಾಲಿನ ಮೇಲೆ ನಿಲ್ಲುವ, ನಡೆಯುವ ಹಂತಕ್ಕೆ ಏರಿದ ಪ್ರಾಣಿ. ಇದರ ಲಾಭಗಳೂ ಕೆಲವು; ಅಪಾಯಗಳೂ ಹಲವು.


ಡಾ. ಕಿರಣ್ ವಿ. ಎಸ್.

'ರಾತ್ರಿ ಮಲಗಿದಾಗ ಚೆನ್ನಾಗಿಯೇ ಇದ್ದೆ. ಬೆಳಗ್ಗೆ ಎದ್ದರೆ ತಲೆಯೆಲ್ಲ ಹಗುರವಾದ ಹಾಗಿತ್ತು; ಕಣ್ಣು ಮಂಜಾಗಿತ್ತು; ಸುತ್ತಮುತ್ತಲಿನ ಗೋಡೆಗೆಲ್ಲ ಗಿರಕಿ ಹೊಡೆಯುತ್ತಿದ್ದವು. ಹೊಟ್ಟೆ ತೊಳಸಿದಂತಾಯಿತು. ಹೆಜ್ಜೆ ಇಟ್ಟರೆ ಬಿದ್ದುಬಿಡುತ್ತೇನೆಂಬ ಭಯ. ಕಣ್ಣು ಮುಚ್ಚಿಕೊಂಡು ಹಾಗೆಯೇ ಮಂಚದ ಮೇಲೆ ಕೂರುವಂತಾಯಿತು. ಸ್ವಲ್ಪ ಕಾಲ ಕುಳಿತ ನಂತರ ಕಣ್ಣು ತೆರೆದಾಗ ತಲೆಸುತ್ತಿನ ಅನುಭವ ಕಡಿಮೆ ಆಯಿತಾದರೂ ಇನ್ನೂ ಪೂರ್ತಿಯಾಗಿ ವಾಸಿಯಾಗಿಲ್ಲ'. ಜೀವನದಲ್ಲಿ ಒಮ್ಮೆಯಾದರೂ ಈ ಅನುಭವ ಆಗದವರು ವಿರಳ.

ತಲೆಸುತ್ತು, ತಲೆತಿರುಗುವಿಕೆ, ತಲೆ ಗಿರಕಿ ಹೊಡೆದ ಅನುಭವ, ಶಿರೋಭ್ರಮಣ ಮುಂತಾದ ಹೆಸರುಗಳಿಂದ ಕರೆಯಲ್ಪಡುವ 'ವರ್ಟೈಗೊ' (Vertigo) ಸಮಸ್ಯೆ ಬಹಳ ಸಾಮಾನ್ಯ. ಬಹುತೇಕ ಮಂದಿಗೆ ಇದು ತಾತ್ಕಾಲಿಕ ಅನುಭವ. ಆದರೆ ಈ ಸಮಸ್ಯೆ ಗಂಭೀರವಾದರೆ ದೀರ್ಘಕಾಲಿಕವಾಗಿಯೂ ಕಾಡಬಹುದು. ತಲೆಸುತ್ತಿನ ವೇಳೆ ಸುಮ್ಮನೆ ಒಂದೆಡೆ ನಿಂತಿದ್ದರೂ ನಾವೇ ತಿರುಗುತ್ತಿರುವಂತೆ ಅನಿಸಬಹುದು; ಇಲ್ಲವೇ, ನಮ್ಮ ಸುತ್ತಮುತ್ತಲಿನ ಗೋಡೆಗಳು, ವಸ್ತುಗಳು ಗಿರಕಿ ಹೊಡೆಯುತ್ತಿರುವಂತೆ ಭಾಸವಾಗಬಹುದು. ವಯಸ್ಸಾದಂತೆಲ್ಲಾ ಈ ಸಮಸ್ಯೆ ಅಧಿಕವಾಗುತ್ತದೆ. ತಲೆಸುತ್ತು ಬಂದಾಗ ಕೆಲವೊಮ್ಮೆ 'ಸ್ವಲ್ಪ ನಡೆದರೆ ತಂತಾನೇ ಸರಿಹೋಗುತ್ತದೆ' ಎಂದು ಭಾವಿಸಿ, ಕೆಲ ಹೆಜ್ಜೆಗಳನ್ನಿಟ್ಟು, ಪ್ರಜ್ಞೆತಪ್ಪಿ ಬಿದ್ದು ಗಾಯಗೊಂಡವರಿದ್ದಾರೆ. ಸುಲಭವಾಗಿ ನಿರ್ಲಕ್ಷಿಸಲಾಗದ, ಉಪೇಕ್ಷೆ ಮಾಡಬಾರದಾದ ಸಮಸ್ಯೆಗಳಲ್ಲಿ ತಲೆಸುತ್ತು ಒಂದು.

ಮನುಷ್ಯಜೀವಿ ಮೂಲತಃ ಚತುಷ್ಪಾದಿಗಳಿಂದ ವಿಕಾಸವಾದರೂ ಎರಡು ಕಾಲಿನ ಮೇಲೆ ನಿಲ್ಲುವ, ನಡೆಯುವ ಹಂತಕ್ಕೆ ಏರಿದ ಪ್ರಾಣಿ. ಇದರ ಲಾಭಗಳೂ ಕೆಲವು; ಅಪಾಯಗಳೂ ಹಲವು. ನಾಲ್ಕು ಚಕ್ರದ ಕಾರು ಓಡಿಸುವಾಗ ನಮಗೆ ಸಮತೋಲನದ ಅಗತ್ಯ ಇರುವುದಿಲ್ಲ. ಆದರೆ ಎರಡು ಚಕ್ರದ ಬೈಸಿಕಲ್ ಅಥವಾ ಬೈಕ್ ಓಡಿಸುವವರಿಗೆ ಬೀಳದಂತೆ ಸಮತೋಲನವನ್ನು ನಿರ್ವಹಿಸುವುದು ಮುಖ್ಯ. ಅದೇ ರೀತಿಯಲ್ಲಿ ದ್ವಿಪಾದಿಯಾದ ಮನುಷ್ಯರಲ್ಲಿ ಬೀಳದಂತೆ ಸಮತೋಲನ ಕಾಯ್ದುಕೊಳ್ಳುವುದು ಅಗತ್ಯ. ಇದನ್ನು ನಿರ್ವಹಿಸಲು ನಮ್ಮ ಶರೀರ ಹಲವಾರು ತಯಾರಿ ಮಾಡಿಕೊಂಡಿದೆ. ಶರೀರದ ಸಮತೋಲನವನ್ನು ಕಾಯ್ದುಕೊಳ್ಳುವ ಪ್ರಮುಖ ಅಂಗಗಳು ನಮ್ಮ ಒಳಕಿವಿಯಲ್ಲಿವೆ. ಪರಸ್ಪರ ಲಂಬಕೋನದಲ್ಲಿರುವ, ತಮ್ಮ ಒಡಲಿನ ಸ್ವಲ್ಪಭಾಗದಲ್ಲಿ ದ್ರವ ತುಂಬಿರುವ ಮೂರು ಅರ್ಧವರ್ತುಲಾಕಾರದ ಕೊಳವೆಗಳು, ಅದರ ಬದಿಯ ಎರಡು ಗಟ್ಟಿ ಚೀಲಗಳು, ಇವುಗಳಿಂದ ಮಾಹಿತಿಯನ್ನು ಒಯ್ಯುವ ನರಗಳು ದೇಹದ ಸಮತೋಲನ ನಿರ್ವಹಣೆಯ ಮುಖ್ಯ ಭಾಗಗಳು. ಅರ್ಧವರ್ತುಲಾಕಾರದ ಕೊಳವೆಗಳಲ್ಲಿನ ದ್ರವದ ಮಟ್ಟವನ್ನು ಗ್ರಹಿಸುವ ನರಗಳು, ವ್ಯಕ್ತಿಯ ತಲೆ ಯಾವ ಕೋನದಲ್ಲಿ ನಿಂತಿದೆ ಎಂದು ಮಿದುಳಿಗೆ ತಿಳಿಸುತ್ತವೆ. ಇಂತಹ ವಿಶಿಷ್ಟ ಮಾಹಿತಿಯನ್ನು ಕ್ರೋಡೀಕರಿಸುವ ಮಿದುಳಿನ ಭಾಗಕ್ಕೆ ಮತ್ತಷ್ಟು ಮಾಹಿತಿ ಕಣ್ಣುಗಳಿಂದ ಮತ್ತು ದೇಹದ ಕೀಲುಗಳಿಂದ ಬರುತ್ತದೆ. ಇವೆಲ್ಲವನ್ನೂ ಸಂಸ್ಕರಿಸುವ ಮಿದುಳು ಶರೀರದ ಸ್ಥಿತಿಯನ್ನು ಕ್ಷಣಮಾತ್ರದಲ್ಲಿ ನಿರ್ಧರಿಸಿ, ಯಾವುದೇ ಅಸಮತೋಲನವನ್ನು ಸರಿಪಡಿಸುವ ಸೂಚನೆಗಳನ್ನು ದೇಹದ ಮಾಂಸಖಂಡಗಳಿಗೆ ನೀಡುತ್ತದೆ. ಅದಕ್ಕೇ, ದೇಹ ಆಯ ತಪ್ಪಿ ಒಂದೆಡೆ ವಾಲಿದರೆ ಕೂಡಲೇ ಆ ಬದಿಯ ಕೈ ದೂರಕ್ಕೆ ಚಲಿಸಿ, ಭುಜದ ಮಾಂಸಖಂಡಗಳು ಗಟ್ಟಿಯಾಗಿ, ಹಸ್ತದ ಭಾಗ ಅಗಲವಾಗುತ್ತದೆ. ಇದು ಮಿದುಳಿನ ಮಿಂಚಿನ ವೇಗದ ಮಾಹಿತಿ ಸಂಸ್ಕರಣೆಗೆ ಸಾಕ್ಷಿ.

ಸಮತೋಲನ ನಿರ್ವಹಿಸುವ ಕಿವಿಯ ಅಂಗಗಳು ಅಥವಾ ಅದನ್ನು ಸಂಸ್ಕರಿಸುವ ಮಿದುಳಿನ ಭಾಗದಲ್ಲಿ ಏರುಪೇರಾದರೆ ತಲೆಸುತ್ತು ಬರುತ್ತದೆ. ಒಳಕಿವಿಯ ಭಾಗಗಳಲ್ಲಿ ಸಮಸ್ಯೆ ಉಂಟಾದರೆ ಕಿವಿಯಲ್ಲಿ 'ಗುಂಯ್' ಸದ್ದು, ತಾತ್ಕಾಲಿಕ ಕಿವುಡು, ಹೊಟ್ಟೆ ತೊಳಸುವುದು, ವಾಂತಿ, ಕಣ್ಣಿನ ಪಾಪೆಗಳ ವೇಗದ ಚಲನೆ, ಅಸಮರ್ಪಕ ನಡಿಗೆ ಮೊದಲಾದವು ಕಾಣುತ್ತವೆ. ಆರಂಭದಲ್ಲಿ ಇವು ತೀವ್ರ ಸಮಸ್ಯೆ ತಂದೊಡ್ಡುತ್ತವೆ. ಆದರೆ ಮಿದುಳು ಈ ಸಮಸ್ಯೆಯನ್ನು ಗ್ರಹಿಸಿ, ಇತರ ಮೂಲಗಳಿಂದ ಅಧಿಕ ಮಾಹಿತಿ ಸಂಗ್ರಹಿಸಿ, ಪರಿಸ್ಥಿತಿಯನ್ನು ತಿಳಿಗೊಳಿಸುವ ಪ್ರಯತ್ನ ಮಾಡುತ್ತದೆ. ಈ ವೇಳೆಗೆ ಒಳಕಿವಿಯ ತಾತ್ಕಾಲಿಕ ಸಮಸ್ಯೆ ಪರಿಹಾರವಾದರೆ ತಲೆಸುತ್ತು ತಾನಾಗಿಯೇ ನಿಲ್ಲುತ್ತದೆ. ಕೆಲವೊಮ್ಮೆ ಇದರ ಪರಿಹಾರಕ್ಕೆ ಕೆಲವು ಮನೆಮದ್ದು, ಔಷಧಗಳು, ಸಾಕಷ್ಟು ವಿಶ್ರಾಂತಿ ನೆರವಾಗುತ್ತವೆ. ಆದರೆ, ಒಳಕಿವಿಯ ಸಮಸ್ಯೆ ತೀವ್ರ ಸ್ವರೂಪದ್ದಾಗಿದ್ದಲ್ಲಿ, ಅಥವಾ ಸಮತೋಲನ ನಿರ್ವಹಣೆಯ ಅಂಗಗಳ, ನರಗಳ ಕಾಯಿಲೆಗೆ ಸಂಬಂಧಿಸಿದ್ದಾಗಿದ್ದಲ್ಲಿ, ಇಲ್ಲವೇ ಮಿದುಳಿನ ಮಾಹಿತಿ ಸಂಸ್ಕರಣೆಯ ಭಾಗ ತೊಂದರೆಗೆ ಒಳಗಾಗಿದ್ದಲ್ಲಿ ತಲೆಸುತ್ತು ಪರಿಹಾರವಾಗುವುದಿಲ್ಲ; ಬದಲಿಗೆ ಉಲ್ಬಣಿಸಬಹುದು. ಅನತಿಕಾಲದಲ್ಲಿ ಪರಿಹಾರವಾಗದ ಅಥವಾ ಪದೇ ಪದೇ ಕಾಡುವ ತಲೆಸುತ್ತನ್ನು ನಿರ್ಲಕ್ಷಿಸುವಂತಿಲ್ಲ. ಇದರ ಕಾರಣವನ್ನು ಹುಡುಕಿ, ಸೂಕ್ತ ಪರಿಹಾರ ಕಂಡುಕೊಳ್ಳಲು ಮೊದಲು ಕಿವಿಯ ತಜ್ಞರನ್ನು, ಅಗತ್ಯವಾದರೆ ಮಿದುಳಿನ ತಜ್ಞವೈದ್ಯರನ್ನು ಕಾಣಬೇಕು. ತಲೆಸುತ್ತಿನ ನಿಖರ ಕಾರಣವನ್ನು ಪತ್ತೆ ಮಾಡಬಲ್ಲ ಹಲವಾರು ಪರೀಕ್ಷೆಗಳಿವೆ. ಇವನ್ನು ಅಗತ್ಯಾನುಸಾರ ತಜ್ಞವೈದ್ಯರು ಮಾಡಿಸುತ್ತಾರೆ. ತಲೆಸುತ್ತಿನ ಕಾರಣ ಪತ್ತೆಯಾದ ನಂತರ ಅದರ ಚಿಕಿತ್ಸೆಗೆ ವೈಜ್ಞಾನಿಕ ವಿಧಾನಗಳಿವೆ.




ನೀರಿನ ಸೇವನೆ

ನಮ್ಮ ಶರೀರದ ಬಹುತೇಕ ಭಾಗ ನೀರು. ದೇಹದ ನೀರಿನ ಮಟ್ಟ ಕುಸಿದರೆ ಇಡೀ ವ್ಯವಸ್ಥೆ ಏರುಪೇರಾಗುತ್ತದೆ. ಹೀಗಾಗಿ ಸೂಕ್ತ ಪ್ರಮಾಣದಲ್ಲಿ ನೀರನ್ನು ಸೇವಿಸುವುದು ಬಹಳ ಅಗತ್ಯ. ನಾಲಿಗೆಯ ಚಪಲಕ್ಕೆ, ಸಾಮಾಜಿಕ ಒತ್ತಡಕ್ಕೆ, ಸೋಮಾರಿತನಕ್ಕೆ ಒಳಗಾಗಿ ನೀರಿನ ಬದಲಿಗೆ ಕಾಫಿ, ಚಹಾ, ಕೋಲಾಗಳಂತಹ ಸಕ್ಕರೆಯುಕ್ತ ರಾಸಾಯನಿಕ ಪೇಯಗಳನ್ನು ಸೇವಿಸುವುದು ದೇಹದ ನೀರಿನ ಅಂಶವನ್ನು ಅಸಹಜ ಸ್ಥಿತಿಗೆ ದೂಡುತ್ತದೆ. ಈ ಪೇಯಗಳು ಶರೀರದಿಂದ ಮತ್ತಷ್ಟು ನೀರಿನ ಅಂಶವನ್ನು ಹೊರಹಾಕುತ್ತವೆ. ಇಂತಹುದೇ ಪರಿಣಾಮವನ್ನು ಮದ್ಯಪಾನ ಮಾಡುವವರಲ್ಲಿ ಸಹ ನೋಡಬಹುದು. ಇದರಿಂದ ಉಂಟಾಗುವ ನಿರ್ಜಲೀಕರಣದಿಂದ ತಲೆಸುತ್ತು ಬರುತ್ತದೆ. ಹೀಗಾಗಿ, ತಲೆಸುತ್ತಿನ ಪ್ರಥಮ ಚಿಕಿತ್ಸೆಯಲ್ಲಿ ಸರಳ ದ್ರವಾಹಾರದ ಸಾಕಷ್ಟು ಬಳಕೆ ಉಪಯುಕ್ತ. ಸಂಚಾರದ ವೇಳೆ ಪುಸ್ತಕ ಓದುವುದು, ಫೋನು ನೋಡುವುದು, ಗಣಕದಲ್ಲಿ ಕೆಲಸ ಮಾಡುವುದು ಮೊದಲಾದ ಚಟುವಟಿಕೆಗಳು ಕೂಡ ತಲೆಸುತ್ತು ಉಂಟು ಮಾಡುತ್ತವೆ. ಅರಿವಿಗೆ ಬರುವ ಇಂತಹ ಕಾರಣಗಳನ್ನು ಪ್ರಜ್ಞಾಪೂರ್ವಕವಾಗಿ ತಡೆಯಬೇಕು. ಈ ರೀತಿಯ ತಲೆಸುತ್ತು ಬಂದ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ ಅದನ್ನು ಬಾರದಂತೆ ನಿರ್ವಹಿಸುವುದು ಒಳ್ಳೆಯದು.

ಕಾರಣಗಳು ಹಲವು

ತಲೆಸುತ್ತಿನ ಕಾರಣ ಕೇವಲ ಒಳಕಿವಿ ಅಥವಾ ಮಿದುಳಿನ ಸಮಸ್ಯೆಯೇ ಆಗಬೇಕೆಂದಿಲ್ಲ. ಕೆಲವು ಸಂದರ್ಭಗಳಲ್ಲಿ ಶರೀರದ ಇತರ ಸಮಸ್ಯೆಗಳಿಂದಲೂ ತಲೆಸುತ್ತು ಆಗಬಹುದು. ಮಧುಮೇಹಿಗಳಲ್ಲಿ ರಕ್ತದಲ್ಲಿನ ಸಕ್ಕರೆಯ ಅಂಶದಲ್ಲಿ ಏರುಪೇರಾದಾಗ ತಲೆಸುತ್ತು ಕಾಣುತ್ತದೆ. ಅಂತಹ ವೇಳೆಯಲ್ಲಿ ಕೂಡಲೇ ರಕ್ತದ ಸಕ್ಕರೆಯ ಮಟ್ಟವನ್ನು ಪರಿಶೀಲಿಸಿ, ಪರಿಹಾರ ಕಂಡುಕೊಳ್ಳಬೇಕು. ದೇಹದಲ್ಲಿ ನೀರಿನ ಅಂಶ ಕಡಿಮೆಯಾಗಿ, ರಕ್ತದ ಒತ್ತಡ ಇಳಿದಾಗ, ಮಿದುಳಿಗೆ ಸಾಕಷ್ಟು ರಕ್ತ ಹರಿಯದೆ ತಲೆಸುತ್ತು ಉಂಟಾಗಬಹುದು. ಈ ನಿರ್ಜಲೀಕರಣವನ್ನು ತೊಡೆಯಲು ಸಾಕಷ್ಟು ಪ್ರಮಾಣದ ದ್ರವಗಳು, ಎಳನೀರು, ಓ.ಆರ್.ಎಸ್. ಪಾನಕ, ನೀರುಮಜ್ಜಿಗೆಗಳನ್ನು ಬಳಸಬೇಕು. ಈಚೆಗೆ ಶರೀರದ ತೂಕವನ್ನು ಶೀಘ್ರವಾಗಿ ಕಡಿಮೆ ಮಾಡಲು ಅನೇಕ ಅವೈಜ್ಞಾನಿಕ ವಿಧಾನಗಳಿಗೆ ಶರಣು ಹೋಗುವವರಿದ್ದಾರೆ. ಅಂತಹವರು ತಮ್ಮ ಆಹಾರ ಸೇವನೆಯಲ್ಲಿ ಹಠಾತ್ ಬದಲಾವಣೆ ಮಾಡಿಕೊಳ್ಳುತ್ತಾರೆ. ಇದನ್ನು ಶರೀರದ ವ್ಯವಸ್ಥೆ ಸಹಿಸಲು ಸಾಧ್ಯವಾಗದೆ ಹೋದರೆ ಆಗಾಗ ತಲೆಸುತ್ತು ಕಾಣುತ್ತದೆ. ಇಂತಹವರು ವೈದ್ಯರಲ್ಲಿಗೆ ಹೋದಾಗ ತಮ್ಮ ಹೊಸ ಆಹಾರಪದ್ಧತಿಯ ಬಗ್ಗೆ ಅವರಿಗೆ ಮಾಹಿತಿ ನೀಡಬೇಕು. ಇಲ್ಲವಾದರೆ ತಲೆಸುತ್ತಿಗೆ ಅನೇಕ ಪರೀಕ್ಷೆಗಳನ್ನು ಮಾಡಿದರೂ ವೈದ್ಯರಿಗೆ ಕಾರಣ ತಿಳಿಯದೇ ಹೋಗಬಹುದು.

ಡೆಂಗಿ ಜ್ವರ ಎಲ್ಲ ಜ್ವರಗಳಂತಲ್ಲ!



ಡಾ. ಶ್ರೀನಿವಾಸ ಹರಪನಹಳ್ಳಿ

ಮಳೆಗಾಲ ಆರಂಭವಾದೊಡನೆಯೇ ಎಲ್ಲೆಡೆ ಹಸಿರು ಮೂಡಲಾರಂಭಿಸುತ್ತದೆ. ನದಿ-ಝರಿಗಳು ಮೈತುಂಬಿ ಹರಿಯತೊಡಗುತ್ತವೆ. ಬಿಸಿಲಿನ ಬೇಗೆಯಿಂದ ಬಸವಳಿದಿದ್ದ ಜನರ ಮನಸ್ಸು ಕೂಡ ಉಲ್ಲಸಿತವಾಗುತ್ತದೆ. ಆದರೆ ಮಳೆಗಾಲ ಕೆಲವು ರೋಗ-ರುಜಿನಗಳನ್ನು ಕೂಡ ಹೊತ್ತು ತರುತ್ತದೆ. ಅಬಾಲವೃದ್ಧಾದಿಯಾಗಿ ಎಲ್ಲರನ್ನೂ ಒಂದಲ್ಲ ಒಂದು ರೀತಿಯ ಜ್ವರ ಕಾಡಲಾರಂಭಿಸುತ್ತದೆ. ಶೀತ, ಕೆಮ್ಮು ಮತ್ತು ಜ್ವರದಿಂದ ಬಳಲುತ್ತಿರುವ ಅನೇಕ ರೋಗಿಗಳು ವೈದ್ಯರ ಕ್ಲಿನಿಕ್ಕಿನಲ್ಲಿ ಕಾಯುತ್ತಿರುವುದು ದಿನನಿತ್ಯದ ನೋಟವಾಗಿರುತ್ತದೆ.

ಸಾಮಾನ್ಯವಾಗಿ ಫ್ಲೂದಂತಹ ಜ್ವರ ಬಹುತೇಕ ಮಂದಿಗೆ ಬಂದು ಕೆಲವು ದಿನಗಳಲ್ಲಿ ಗುಣವಾಗಿಬಿಡುತ್ತಾರೆ. ಆದಾಗ್ಯೂ ಕೆಲವೊಂದು ತರಹದ ಜ್ವರಗಳ ಬಗ್ಗೆ ನಾವು ಎಚ್ಚರದಿಂದಿರುವುದು ಒಳ್ಳೆಯದು. ಇದರಲ್ಲಿ ಅತಿ ಮುಖ್ಯವಾದುದೆಂದರೆ ಡೆಂಗಿ ಜ್ವರ.

ಡೆಂಗಿ ಜ್ವರ ಕೂಡ ವೈರಾಣುವಿಂದಲೇ ಬರುತ್ತದೆ. ಆದರೆ ಈ ವೈರಾಣು ಉಳಿದ ಫ್ಲೂ ವೈರಾಣುಗಳಿಂತ ಭಿನ್ನ. ಫ್ಲೂ ಜ್ವರದ ವೈರಾಣು ನಾವು ಉಸಿರಾಡುವ ಗಾಳಿಯ ಮೂಲಕ ನಮ್ಮ ದೇಹವನ್ನು ಪ್ರವೇಶಿಸಿದರೆ, ಡೆಂಗಿ ಜ್ವರದ ವೈರಾಣು ಸೊಳ್ಳೆಗಳ ಕಡಿತದಿಂದ ದೇಹದೊಳಗೆ ಪ್ರವೇಶಿಸುತ್ತದೆ. ಅನಾಫಿಲಿಸ್ ಸೊಳ್ಳೆಗಳ ಕಡಿತದಿಂದ ಮಲೇರಿಯಾ ಹರಡುತ್ತದೆಯೆಂದು ನಮಗೆಲ್ಲ ಗೊತ್ತೇ ಇದೆ. ಅದೇ ರೀತಿ ಡೆಂಗಿ ವೈರಾಣು ಕೂಡ 'ಏಡಿಸ್ ಈಜಿಪ್ಟಿ' ಎಂಬ ಇನ್ನೊಂದು ಪ್ರಭೇದದ ಸೊಳ್ಳೆಗಳ ಕಡಿತದಿಂದ ನಮ್ಮ ದೇಹದೊಳಗೆ ಪ್ರವೇಶಿಸುತ್ತದೆ. (ಅಪರೂಪದ ಸಂದರ್ಭಗಳಲ್ಲಿ ರಕ್ತಪೂರಣ ಅಥವಾ ಅಂಗದಾನದ ಮೂಲಕವೂ ವೈರಾಣು ನಮ್ಮ ದೇಹವನ್ನು ಪ್ರವೇಶಿಸಬಹುದು.)

> ಎಲ್ಲರೂ ಸಂಘಟಿತರಾಗಿ ನಮ್ಮ ಸುತ್ತಮುತ್ತಲಿನ ನೈರ್ಮಲ್ಯವನ್ನು ಕಾಪಾಡಿಕೊಂಡರೆ ನಾವು ಡೆಂಗಿಯನ್ನು ಖಂಡಿತ ತಹಬಂದಿಗೆ ತರಬಹುದು. ಮೇ 16ನ್ನು 'ರಾಷ್ಟ್ರೀಯ ಡೆಂಗಿ ದಿನ'ವಾಗಿ ಭಾರತದಲ್ಲಿ ಘೋಷಿಸಲಾಗಿದೆ. ಡೆಂಗಿ ಬಗ್ಗೆ ಮತ್ತು ಪ್ರತಿಬಂಧಕೋಪಾಯಗಳ ಬಗ್ಗೆ ಜನಜಾಗೃತಿ ಮೂಡಿಸುವುದು ಇದರ ಉದ್ದೇಶ.

ಏಡಿಸ್ ಈಜಿಪ್ಟಿ ಸೊಳ್ಳೆಗಳ ವಿಶೇಷತೆಯೇನೆಂದರೆ, ಇವು ನಮ್ಮನ್ನು ಹೆಚ್ಚಾಗಿ ಬೆಳಿಗ್ಗೆ ಮತ್ತು ಸಾಯಂಕಾಲದ ಹೊತ್ತಿನಲ್ಲಿ ಕಚ್ಚುತ್ತವೆ. ಅಲ್ಲದೆ ಇವು ನೆಲದಿಂದ ಒಂದೆರಡು ಅಡಿ ಎತ್ತರದಲ್ಲೇ ಹಾರಾಡುವುದರಿಂದ ಕಾಲಿಗೆ ಕಚ್ಚುವ ಮೂಲಕ ವೈರಾಣುಗಳನ್ನು ನಮ್ಮ ದೇಹದಲ್ಲಿ ಹರಡುತ್ತವೆ. ವೈರಾಣುಗಳು ಒಮ್ಮೆ ದೇಹದೊಳಕ್ಕೆ ಹೊಕ್ಕರೆ ಅವು ಚರ್ಮದಲ್ಲಿರುವ ಕೆಲವು ಜೀವಕೋಶಗಳಲ್ಲಿ ಸೇರಿಕೊಂಡು ತಮ್ಮ ಸಂಖ್ಯೆಯನ್ನು ವೃದ್ಧಿಸಿಕೊಳ್ಳುತ್ತಾ ಹೋಗುತ್ತವೆ. ಅವು ನಿಧಾನವಾಗಿ ದೇಹದ ತುಂಬೆಲ್ಲಾ ಹಬ್ಬುತ್ತಿದಂತೆ ನಮ್ಮಲ್ಲಿ ರೋಗಲಕ್ಷಣಗಳು ಕಾಣತೊಡಗುತ್ತವೆ. ಏಕೆಂದರೆ ವೈರಾಣು ದೇಹವನ್ನು ಹೊಕ್ಕಕೂಡಲೇ ನಮ್ಮ ಜೀವಕಣಗಳು ಪ್ರತಿರೋಧವನ್ನು ಒಡ್ಡುತ್ತವೆ. ಪ್ರತಿಕಾಯಗಳು (ಆ್ಯಂಟಿಬಾಡಿ) ಉತ್ಪತ್ತಿಯಾಗಿ ವೈರಾಣುಗಳೊಂದಿಗೆ ಸೆಣಸಾಡುವಾಗ ಅನೇಕ ರಾಸಾಯನಿಕಗಳು ಬಿಡುಗಡೆಯಾಗುತ್ತವೆ. ಈ ರಾಸಾಯನಿಕಗಳೇ ರೋಗಲಕ್ಷಣಗಳಿಗೆ ಮುಖ್ಯಕಾರಣ. ಇಷ್ಟೆಲ್ಲಾ ಆಗಲು ಸುಮಾರು 3-14 ದಿನಗಳು ಬೇಕಾಗಬಹುದು.

ರೋಗಲಕ್ಷಣಗಳು: ಜ್ವರವೇ ಡೆಂಗಿಯ ಪ್ರಮುಖ ಲಕ್ಷಣ. ಇದು ಹೆಚ್ಚಾಗಿ ದಿನ ಬಿಟ್ಟು ದಿನ ಬರುತ್ತದೆ. ಬಹುತೇಕ ರೋಗಿಗಳಲ್ಲಿ ಮೈ-ಕೈ ನೋವು, ಕಣ್ಣುರಿ ಹಾಗೂ ಹೊಟ್ಟೆನೋವು ಕಾಣಿಸಿಕೊಳ್ಳುತ್ತವೆ. ಕೆಂಪು ಗುಳ್ಳೆಗಳು ದೇಹದ ತುಂಬೆಲ್ಲ ವ್ಯಾಪಿಸಬಹುದು. ದೇಹದಾದ್ಯಂತ ನವೆಯಾಗುವುದು ಕೂಡ ಉಂಟು. ಹೀಗೆಂದು, ನಮ್ಮನ್ನು ಕಾಡುವ ಜ್ವರಗಳೆಲ್ಲಾ ಡೆಂಗಿ ಆಗಿರಲೇಬೇಕಂತಿಲ್ಲ. ಡೆಂಗಿ ಜ್ವರ ಕೂಡ ಅನೇಕ ಬಾರಿ (ಶೇ. 80) ಸೌಮ್ಯಸ್ಥಿತಿಯಲ್ಲಿದ್ದು ಕೊಂಚ ವಿಶ್ರಾಂತಿ ಮತ್ತು ಜ್ವರದ ಮಾತ್ರೆಗಳಿಂದಲೇ ವಾಸಿಯಾಗುತ್ತದೆ. ಕೆಲವೊಮ್ಮೆ ಮಾತ್ರ ಇದು ಮುಂದಿನ ಹಂತಕ್ಕೆ ತಲುಪಿ ರೋಗಿಯಲ್ಲಿ ರಕ್ತಸ್ರಾವದ ಚಿಹ್ನೆಗಳು ಕಾಣಿಸಿಕೊಳ್ಳಬಹುದು. ಇದನ್ನು 'ಡೆಂಗಿ ಹೆಮೊರೇಜಿಕ್ ಫೀವರ್' ಎಂದು ಕರೆಯುತ್ತಾರೆ. ಈ ಹಂತದಲ್ಲಿ ರಕ್ತದಲ್ಲಿ ಪ್ಲೇಟೆಲೆಟ್ ಕಣಗಳು ತುಂಬಾ ಕಡಿಮೆಯಾಗಿ ಚರ್ಮದಲ್ಲಿ, ಸಂದುಗಳಲ್ಲಿ ಹಾಗೂ ದೇಹದ ಇನ್ನಿತರ ಭಾಗಗಳಲ್ಲಿ ರಕ್ತಸ್ರಾವವಾಗುತ್ತದೆ. ರೋಗ ಇನ್ನೂ ಉಲ್ಬಣಾವಸ್ಥೆಗೆ ತಲುಪಿದಾಗ ರಕ್ತಸ್ರಾವದ ಜೊತೆ ರೋಗಿಯ ಬಿಪಿ ತೀರಾ ಕಡಿಮೆಯಾಗಿ ಉಸಿರಾಟದ ತೊಂದರೆ, ಅರೆಪ್ರಜ್ಞಾವಸ್ಥೆ ಉಂಟಾಗಬಹುದು. ಇದನ್ನು 'ಡೆಂಗ್ಯೂ ಶಾಕ್ ಸಿಂಡ್ರೋಮ್' ಎಂದು ಕರೆಯುತ್ತಾರೆ. ಈ ಹಂತ ರೋಗಿಯ ಜೀವಕ್ಕೆ ಅತ್ಯಂತ ಹೆಚ್ಚು ಅಪಾಯಕಾರಿ.

ಚಿಕಿತ್ಸೆ: ಮೇಲೆ ತಿಳಿಸಿದಂತಹ ರೋಗಲಕ್ಷಣಗಳು ಯಾವುದೇ ರೋಗಿಗೆ ಕಂಡುಬಂದಲ್ಲಿ ತಕ್ಷಣವೇ ವೈದ್ಯರ ಬಳಿ ಕರೆದೊಯ್ದು ತಪಾಸಣೆ ಮಾಡಿಸಬೇಕು. ಡೆಂಗಿ ಜ್ವರದ ಲಕ್ಷಣಗಳು ಇದ್ದರೆ ವೈದ್ಯರು ರಕ್ತತಪಾಸಣೆಯನ್ನು ಮಾಡಿಸುತ್ತಾರೆ. ರಕ್ತದಲ್ಲಿ ಡೆಂಗಿ ವೈರಾಣುವಿನ ವಿರುದ್ಧ ಹೋರಾಡುವ ಪ್ರತಿಕಾಯಗಳು ಉತ್ಪತ್ತಿಯಾಗಿವೆಯೇ? ಹಾಗೂ ರಕ್ತದಲ್ಲಿ ಪ್ಲೇಟೆಲೆಟ್ ಸಂಖ್ಯೆ ಕ್ಷೀಣಿಸಿದೆಯೇ? – ಎಂದು ಪರೀಕ್ಷಿಸುವುದೇ ಈ ರಕ್ತತಪಾಸಣೆಯ ಉದ್ದೇಶ.

ಡೆಂಗಿ ವೈರಾಣುವನ್ನೇ ಸದೆಬಡಿಯಲು ಸದ್ಯಕ್ಕೆ ಯಾವುದೇ ಔಷಧ ಇಲ್ಲ. ಆದ್ದರಿಂದ ಪ್ಯಾರಸಿಟಮಾಲ್ ಜ್ವರನಿವಾರಕ ಮಾತ್ರೆ, ವಿಶ್ರಾಂತಿ ಮತ್ತು ನಿರ್ಜಲೀಕರಣವಾಗದಂತೆ ಯಥೇಚ್ಛವಾಗಿ ನೀರು ಕುಡಿಯುವುದೇ ಚಿಕಿತ್ಸೆಯ ಮುಖ್ಯ ಅಂಶಗಳು. (ಬೇರೆ ಜ್ವರ/ನೋವು ನಿವಾರಕ ಮಾತ್ರೆಗಳು ಕೆಲವೊಮ್ಮೆ ರಕ್ತಸ್ರಾವವನ್ನು ಹೆಚ್ಚು ಮಾಡುವುದರಿಂದ ಈ ಸಂದರ್ಭದಲ್ಲಿ ಅಂತಹ ಮಾತ್ರೆಗಳ ಸೇವನೆ ಅಪಾಯಕಾರಿಯಾಗಬಹುದು.)

ರೋಗಿಯ ಪ್ಲೇಟೆಲೆಟ್ ಸಂಖ್ಯೆ ತೀರಾ ಕಡಿಮೆಯಾದರೆ ರಕ್ತಪೂರಣದ ಮೂಲಕ ಸರಿಪಡಿಸಬೇಕಾಗುತ್ತದೆ. ಕಾಯಿಲೆಯ ಆರಂಭಿಕ ಹಂತದಲ್ಲಿಯೇ ಸೂಕ್ತ ಚಿಕಿತ್ಸೆ ನೀಡಿದರೆ ನಂತರದ ಹಂತಗಳಾದ ಡೆಂಗಿ ಹೆಮೊರೇಜಿಕ್ ಫೀವರ್ ಮತ್ತು ಡೆಂಗ್ಯೂ ಶಾಕ್ ಸಿಂಡ್ರೋಮ್‌ಗಳನ್ನು ಬಹುಮಟ್ಟಿಗೆ ತಪ್ಪಿಸಬಹುದು.

ಪ್ರತಿಬಂಧಕೋಪಾಯಗಳು

- ಸೊಳ್ಳೆಗಳ ನಿರ್ಮೂಲನೆಯೇ ಇಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಮನೆಗಳ, ಇನ್ನಿತರ ಕಟ್ಟಡಗಳ ಸುತ್ತ ನಿಯಮಿತವಾಗಿ ಫಾಗ್ಗಿಂಗ್ ಮಾಡಿಸುತ್ತಿರಬೇಕು.
- ನಮ್ಮ ಮನೆಗಳ ಸುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಮನೆಗಳಲ್ಲಿ ಕೂಡ ಅಲಂಕಾರಿಕ ನೀರಿನ ಹೊಂಡಗಳನ್ನು ಅಥವಾ ಹೂಕುಂಡಗಳನ್ನು ವಾರಕ್ಕೆ ಒಂದು ಬಾರಿಯಾದರೂ ಸ್ವಚ್ಛಗೊಳಿಸಬೇಕು.
- ಸೊಳ್ಳೆಕಡಿತದಿಂದ ಪಾರಾಗಲು ನಾವು ಸೂಕ್ತ ಬಟ್ಟೆಗಳನ್ನು, ಅದರಲ್ಲೂ ಕಾಲುಗಳನ್ನು ಮುಚ್ಚುವ ದಿರಿಸನ್ನೇ ಹಾಕಬೇಕು. ಕಿಟಕಿಗೆ ಸೊಳ್ಳೆಪರದೆ, ಕೋಣೆಗಳಲ್ಲಿ ಸೊಳ್ಳೆ ಕಾಯಿಲ್‌ಗಳನ್ನು ಬಳಸಬೇಕು.
- ಉತ್ತಮ ಆಹಾರವನ್ನು ಸೇವಿಸುತ್ತಾ ನಮ್ಮ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಪಪ್ಪಾಯಿ, ಕಿವಿ ಮತ್ತಿತರೇ ಕೆಲವು ಹಣ್ಣುಗಳು ಕೆಲಮಟ್ಟಿಗೆ ಪರಿಣಾಮಕಾರಿಯಾಗಿವೆ.
- ಡೆಂಗಿ ಜ್ವರಕ್ಕೆ ಕೆಲವು ದೇಶಗಳಲ್ಲಿ ಲಸಿಕೆ ಲಭ್ಯವಿದೆಯಾದರೂ ಅದಿನ್ನೂ ಸಂಪೂರ್ಣ ಪರಿಣಾಮಕಾರಿಯಾಗಿಲ್ಲ. ಹಾಗಾಗಿ ಭಾರತದಲ್ಲಿ ಅದರ ಬಳಕೆಗೆ ಅನುಮತಿ ಇನ್ನೂ ಸಿಕ್ಕಿಲ್ಲ.



ಸಾರ್ಕೋಪೀನಿಯಾ: ಸ್ನಾಯುಗಳ ಸವೆತ

ಡಾ. ವೀಣಾ ಎಸ್. ಭಟ್

'**ಕುಳಿತುಕೊಳ್ಳಲು** ಸಾಧ್ಯವಿದ್ದರೆ ಮಲಗಬೇಡಿ, ನಿಲ್ಲಲು ಸಾಧ್ಯವಿದ್ದರೆ ಕುಳಿತುಕೊಳ್ಳಬೇಡಿ'. ಇದು ಗಾದೆ ಎಂದು ಅನಿಸುತ್ತಿದೆಯೆ? ಕಿವಿಮಾತು ಎಂದೇ ತಿಳಿದುಕೊಳ್ಳಿ. ಕಾರಣ ಇಷ್ಟೇ: ನಿಮ್ಮ ಕ್ರಿಯಾತ್ಮಕ ಸ್ನಾಯುಗಳನ್ನು ನಿಧಾನವಾಗಿ ಬಳಸುತ್ತಾ ಇರಿ. ಯಾಕೆ ಈ ಸಲಹೆ ಎಂದಿರಾ?

ಕಚೇರಿಗೆ ಓಡಾಡುತ್ತಿದ್ದಾಗ ಮೆಟ್ಟಲುಗಳನ್ನು ಸರಾಗವಾಗಿ ಹತ್ತಿ ಇಳಿಯುತ್ತಿದ್ದ ವೆಂಕಟೇಶ್, ಸ್ವಯಂ ನಿವೃತ್ತಿ ಪಡೆದು ಕಳೆದ 10 ವರ್ಷಗಳಿಂದ ಮನೆಯಲ್ಲೇ ಇದ್ದರು. ಇತ್ತೀಚೆಗೆ ಆಸ್ಪತ್ರೆಯಲ್ಲಿ ತಪಾಸಣೆಗೊಳಗಾದಾಗ ಬಿ.ಪಿ., ಶುಗರ್ ಎಲ್ಲಾ ಹೆಚ್ಚೇ ಇದೆ ಎಂದೂ, ದೇಹದ ತೂಕವನ್ನು ಕಡಿಮೆಮಾಡಿಕೊಳ್ಳಿ ಎಂದೂ ವೈದ್ಯರು ಸಲಹೆ ಕೊಟ್ಟರು. ಯೋಗ ಕ್ಲಾಸ್‌ಗೆ ಸೇರಿದರೆ ಮೈ-ಕೈ ಎಲ್ಲಾ ನೋವು. ವಾಕಿಂಗ್ ಮಾಡಲು ಹೊರಟರೆ ಕಾಲುನೋವು, ಮಂಡಿನೋವು. ಕುಳಿತರೆ ಏಳುವುದು ಕಷ್ಟ, ನಿಂತರೆ ಕುಳಿತುಕೊಳ್ಳುವುದು ಕಷ್ಟ. ಇಳಿ ವಯಸ್ಸಿನಲ್ಲಿ ಇಂತಹ ದುರ್ಬಲತೆಗೆ ಸ್ನಾಯುಮೂಳೆಗಳ ಸವೆತವೇ ಕಾರಣ. ಹೆಚ್ಚಿನವರಿಗೆ ಮೂಳೆಸವೆತ ಅಥವಾ ಜೊಳ್ಳೆಲುಬು (ಅಸ್ಟಿಯೋಪೊರೋಸಿಸ್) ಬಗ್ಗೆ ತಿಳಿದಿರುತ್ತದೆ. ಆದರೆ ಸ್ನಾಯುಸವೆತದ ಬಗ್ಗೆ ಹೆಚ್ಚಿನವರಿಗೆ ತಿಳಿದಿರುವುದಿಲ್ಲ. ಸ್ನಾಯುಸವೆತವನ್ನು 'ಸಾರ್ಕೋಪೀನಿಯಾ' ಎನ್ನುತ್ತೇವೆ.

ಏನಿದು ಸಾರ್ಕೋಪೀನಿಯಾ?

ಸಾರ್ಕೋಪೀನಿಯಾ ಎಂದರೆ ಗ್ರೀಕ್‌ನಲ್ಲಿ ಸ್ನಾಯುಸವೆತ ಎಂದರ್ಥ. ವಯೋಸಹಜವಾಗಿ ಸ್ನಾಯುಗಳ ಮೊತ್ತ ಹಾಗೂ ಕ್ರಿಯಾಶೀಲತೆ ಕಡಿಮೆಯಾಗುವುದು. 30ರಿಂದ 40 ವರ್ಷಗಳ ನಂತರ ಸಾರ್ಕೋಪೀನಿಯಾ ಆರಂಭವಾಗಿ ಪ್ರತಿ ದಶಕದಲ್ಲಿ ಶೇ.3ರಿಂದ 5ರಷ್ಟು ಸ್ನಾಯುಮೊತ್ತ ಕಡಿಮೆಯಾಗುತ್ತದೆ. ಪುರುಷರಲ್ಲಿ 'ಟೆಸ್ಟೋಸ್ಟಿರಾನ್' ಹಾರ್ಮೋನು ಪ್ರಭಾವದಿಂದ ಈ ಪ್ರಕ್ರಿಯೆ ಸ್ವಲ್ಪ ತಡವಾಗಿಯೇ ಆದರೂ ಮಹಿಳೆಯರಲ್ಲಂತು ಮುಟ್ಟು ನಿಂತು ಐದಾರು ವರ್ಷಗಳಲ್ಲಿ ಶೇ.25ರಿಂದ 30ರಷ್ಟು ಸ್ನಾಯುಮೊತ್ತ ಕಡಿಮೆಯಾಗುತ್ತದೆ.

ಸ್ನಾಯುಗಳು ಅಸ್ಥಿವ್ಯವಸ್ಥೆಯ ಜೊತೆಗೂಡಿ ಮನುಷ್ಯನ ಚಲನಶೀಲತೆ ನಿರ್ಧಾರವಾಗುತ್ತದೆ. ಸ್ನಾಯುಮೂಳೆ ನರಗಳ ಜೊತೆಗೂಡಿ ನಿರಂತರ ಮಿದುಳಿಗೆ ಸಂದೇಶ ಹೋಗುತ್ತಲಿದ್ದು ನರ ಹಾಗೂ ಸ್ನಾಯುಅಸ್ಥಿ ವ್ಯವಸ್ಥೆಗಳೊಡನೆ ನಿರಂತರ ಸಂಯೋಜನೆ ನಡೆದು ಸ್ನಾಯುಗಳ ಬುಗುಪು ಅಥವಾ 'ಟೋನ್' ಕಾಪಾಡಲ್ಪಡುತ್ತದೆ. ಸ್ವಯಂಚಾಲಿತ ಕಾರ್ಯ ನಡೆದುಕೊಂಡು ಹೋಗಲು ಸಹಾಯಕ. ಸ್ನಾಯುಗಳು ಶರೀರದ ಉಷ್ಣತೆಯನ್ನು (ಚಳಿಯಾದಾಗ ನಡುಕಬಂದು ಸ್ನಾಯುಗಳ ಚಲನೆಯಾಗಿ ಶರೀರ ಬೆಚ್ಚಗೆಯಾಗುತ್ತದೆ) ಕಾಪಾಡುತ್ತವೆ. ಕಣಕಾಲಿನ (ಮೀನಖಂಡ) ಸ್ನಾಯುಗಳು ನಿರಂತರ ಕೆಲಸಮಾಡಿ ಸಿರೆಗಳ ಮೇಲೆ ಒತ್ತಡ ಹಾಕಿ ಹೃದಯದಿಂದ ಕಾಲುಗಳಿಗೆ ಬಂದ ರಕ್ತವನ್ನು ಗುರುತ್ವಾಕರ್ಷಣೆಗೆ ವಿರುದ್ಧವಾಗಿ ಮೇಲಕ್ಕೆ ಚಲಿಸಲು ಸಹಾಯಮಾಡುತ್ತವೆ. ಇವುಗಳನ್ನು ಎರಡನೇ ಹೃದಯವೆಂದು ಕರೆಯುತ್ತೇವೆ. 600ಕ್ಕೂ ಹೆಚ್ಚು ಸ್ನಾಯುಗಳಿಂದಾದ ನಮ್ಮ ಶರೀರದ ಶೇ.40ರಷ್ಟು ತೂಕವನ್ನು ಸ್ನಾಯುಗಳೇ ಭರಿಸುತ್ತವೆ. ಸಾರ್ಕೋಪೀನಿಯಾದಲ್ಲಿ ವೇಗದ ಸ್ನಾಯುತಂತುಗಳು ಕ್ಷೀಣಿಸುತ್ತಾ ಬಂದು ಸ್ನಾಯು ಒಳಗಿನ ಕೊಬ್ಬಿನಾಂಶ ಶೇಖರಣೆ ಹೆಚ್ಚುತ್ತದೆ. ಇನ್ಸುಲಿನ್ ನಿರೋಧತೆಯೂ ಹೆಚ್ಚಾಗಿ ಮಧುಮೇಹ ಸಾಧ್ಯತೆಯೂ ಹೆಚ್ಚುತ್ತದೆ. ಸ್ನಾಯು ಅಂಗಾಂಶದ ಉತ್ಪಾದನೆಗೆ ಬೇಕಾದ ಧನಾತ್ಮಕ ಪ್ರೊಟೀನ್ ಅಂಶ ಕಡಿಮೆಯಾಗುತ್ತಾ ಸಾರ್ಕೋಪೀನಿಯಾ ಉಂಟಾಗತ್ತದೆ. ಇದು ವಯೋ ಸಹಜವಾಗಿ ಆಗುವಂತಹ ಪ್ರಕ್ರಿಯೆ.

ವಯಸ್ಸಾದ ಹಾಗೆ ಕಡಿಮೆಯಾಗುವ ಗ್ರೋತ್‌ಹಾರ್ಮೋನು, ಟೆಸ್ಟೋಸ್ಟಿರಾನ್ ಹಾರ್ಮೋನು, ಐ.ಜಿ.ಎಫ್. ಇನ್ನಿತರ ಸಂಗತಿಗಳು. ಇದಕ್ಕೆ ಪೂರಕವಾಗಿ ವ್ಯಾಯಾಮವಿಲ್ಲದ, ಚಲನಶೀಲರಹಿತ ಜೀವನಶೈಲಿ, ಬೊಜ್ಜು, ಪೌಷ್ಟಿಕ ಸಮತೋಲನ ಆಹಾರವನ್ನು ಸೇವಿಸದೇ ಇರುವುದು, ಮಧುಮೇಹ, ಲಿವರ್, ಮೂತ್ರಪಿಂಡ, ಹೃದಯದ ಕಾಯಿಲೆಗಳು, ಸಂಧಿವಾತ, ನರದೌರ್ಬಲ್ಯ, ದೀರ್ಘಾವಧಿ ಜೀರ್ಣಾಂಗದ ಸಮಸ್ಯೆ, ಕ್ಯಾನ್ಸರ್ ಇತ್ಯಾದಿಗಳೆಲ್ಲಾ ಸ್ನಾಯುಸವೆತದ ವೇಗವರ್ಧನೆಯನ್ನು ಉಂಟುಮಾಡುತ್ತದೆ. ಮಹಿಳೆಯರಲ್ಲಂತೂ ಮುಟ್ಟು ನಿಂತಮೇಲೆ ಸಾರ್ಕೋಪೀನಿಯಾ ಬಹುಬೇಗನೆ ಆಕ್ರಮಿಸುತ್ತದೆ. ಸ್ನಾಯುಸವೆತದ ಜೊತೆಗೆ ಮೂಳೆಸವೆತವೂ ಸೇರಿ ಜೊತೆಗೆ ಸಂಧಿವಾತವೂ ಜೊತೆಗೂಡಿದರೆ ಜೀವನಮಟ್ಟವೇ ಕುಸಿದು ಹೋಗುತ್ತದೆ.

ಪರಿಹಾರೋಪಾಯಗಳೇನು?

ಕೇವಲ ಹದಿವಯಸ್ಸಿನಲ್ಲಿ ಜಿಮ್, ಏರೋಬಿಕ್ಸ್‌ಗಳನ್ನು ಮಾಡಿ ಹಾಗೆ ಬಿಟ್ಟುಬಿಡುವುದಲ್ಲ. 30 ವರ್ಷಗಳ ನಂತರವೂ ಕ್ರಿಯಾಶೀಲರಾಗಿದ್ದು ನಿರಂತರವಾಗಿ ನಿಯಮಿತವಾಗಿ ಬಲಶಕ್ತಿಯ ಅಭ್ಯಾಸದ ವ್ಯಾಯಾಮಗಳನ್ನು ಮಾಡಬೇಕು. ಒಂದು ವಸ್ತುವನ್ನು ವಿರುದ್ಧ ದಿಕ್ಕಿಗೆ ತಳ್ಳುವುದು, ಎಳೆಯುವುದು, ಗುದ್ದುವುದು, ಸಣ್ಣಪುಟ್ಟ ಭಾರವನ್ನು ಎತ್ತುತ್ತಿರುವುದು ಇವೆಲ್ಲವೂ ಮಾಂಸಖಂಡಗಳ ಬಲವರ್ಧಿಸಲು ಸಹಾಯಕ. ಕುರ್ಚಿಯ ಮೇಲೆ ಕುಳಿತುಕೊಂಡು ಕಾಲಿನ ಮಂಡಿಯ ಕೀಲುಗಳನ್ನು ಚಲಿಸಿದರೆ ತೊಡೆಯ ಮಾಂಸಖಂಡ ಶಕ್ತಿಯುತವಾಗುತ್ತದೆ. ವಯಸ್ಸಾದಮೇಲಂತೂ ತೂಕ ಕಡಿಮೆಮಾಡುವುದು ಸುಲಭದ ಕೆಲಸವಲ್ಲ. ಕೇವಲ ಆಹಾರ ನಿಯಂತ್ರಣವಲ್ಲದೆ ನಿಯಮಿತ ದೈಹಿಕ ವ್ಯಾಯಾಮವೂ ಅತ್ಯವಶ್ಯ.

- ನಡೆಯಿರಿ ನಡೆಯಿರಿ; ಸಾಧ್ಯವಾದಷ್ಟು ನಡೆಯುವಾಗ ಹಿಮ್ಮಡಿ ಮೊದಲು ಊರಿ ನಡೆಯಿರಿ.
- ದಿನಕ್ಕೆ 25 ರಿಂದ 30 ಬಾರಿಯಾದರೂ ಸ್ಕ್ವಾಟ್ ಮಾಡಿ – ಅಂದರೆ ನಮ್ಮ ಭಾರತೀಯ ಶೌಚಪದ್ಧತಿಯಲ್ಲಿ ಮಲಮೂತ್ರ ವಿಸರ್ಜನೆಯನ್ನು ಚಿಕ್ಕವಯಸ್ಸಿನಿಂದಲೇ ರೂಢಿಸಿಕೊಂಡು, ವಯಸ್ಸಾದ ಮೇಲೂ ಮುಂದುವರೆಸಿ ಕಮೋಡ್‌ನ ಬಳಕೆ ಅತಿ ಅನಿವಾರ್ಯವಾದಗಲಷ್ಟೇ ಮಾಡಿ.
- ಸಾಧ್ಯವಾದಷ್ಟು ಮೆಟ್ಟಲುಗಳನ್ನು ಹತ್ತಿ ಇಳಿಯಿರಿ, ಲಿಫ್ಟ್ ಅನಿವಾರ್ಯವಾದಾಗ ಮಾತ್ರ ಬಳಸಿ.
- ರಿಮೋಟ್ ಬಳಸದೇ ನೀವೇ ಎದ್ದು ಹೋಗಿ ಟಿವಿಯ ಸ್ವಿಚ್ ಆನ್-ಆಫ್ ಮಾಡಿ.
- ಊಟ–ತಿಂಡಿ ತಿಂದಮೇಲೆ ಮೇಲೆ ಆಚೀಚೇ ನೂರಾರು ಹೆಜ್ಜೆ ಓಡಾಡಿ.
- ಮೊಬೈಲ್ ಬಳಸುವಾಗ ಅತ್ತಿಂದಿತ್ತ ಓಡಾಡುತ್ತಾ ಮಾತನಾಡಿ.
- ಕಚೇರಿಯಲ್ಲಿ ಕುಳಿತಲ್ಲೇ ಕಾಲುಗಳನ್ನು ಅಲ್ಲಾಡಿಸುವುದು, ಕೈಗಳನ್ನು ಉಜ್ಜುವುದು, ಅಲ್ಲಾಡಿಸುವುದು – ಇಂಥವನ್ನು ಮಾಡುತ್ತಿರಿ.
- ದೀರ್ಘವಾಗಿ ಶ್ವಾಸೋಚ್ಛ್ವಾಸಗಳನ್ನು ಮಾಡುತ್ತಾ, ಕೈಗಳನ್ನು ವಿಸ್ತರಿಸುವುದು, ಜೋಡಿಸುವುದು ಆಗಾಗ್ಗೆ ಮಾಡುತ್ತಿರಿ.

ಚಟುವಟಿಕೆಗಳಿಂದ ಸದಾ ಕ್ರಿಯಾಶೀಲರಾಗಿರುವುದು, ಎಲ್ಲಾ ವಯಸ್ಸಿನಲ್ಲೂ ಅತಿಮುಖ್ಯ. ಅದಕ್ಕಾಗಿಯೇ ಹೇಳಿದ್ದು: ನಿಮಗೆ ಕುಳಿತುಕೊಳ್ಳಲು ಸಾಧ್ಯವಿದ್ದರೆ (ರಾತ್ರಿ ನಿದ್ದೆ ಮಾಡುವ ಸಮಯ ಬಿಟ್ಟು ಬೇರೆ ಸಮಯದಲ್ಲಿ) ಮಲಗಬೇಡಿ. ನಿಂತುಕೊಳ್ಳಲು ಸಾಧ್ಯವಿದ್ದರೆ ಓಡಾಡುತ್ತಿರಿ.



ಎನ್‌ಐಎ, ಕೇಂದ್ರ ಗುಪ್ತದಳ ನೇತೃತ್ವದಲ್ಲಿ ಜಂಟಿ ಕಾರ್ಯಾಚರಣೆ

ರಾತ್ರಿಯಷ್ಟೇ ಶಂಕಿತ ಉಗ್ರನ ಓಡಾಟ: ಕಾದು ಹಿಡಿದ ಸಿಸಿಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲ್‌ಕೈದಾ' ಉಗ್ರ ಸಂಘಟನೆ ಸದಸ್ಯನಾಗಿ ಭಯೋತ್ಪಾದನಾ ಕೃತ್ಯ ಎಸಗಲು ಸಿದ್ಧನಾಗಿದ್ದ ಅಖ್ತರ್ ಹುಸೇನ್ ಲಷ್ಕರ್, ಕೇಂದ್ರ ಹಾಗೂ ರಾಜ್ಯದ ತನಿಖಾ ಸಂಸ್ಥೆಗಳಿಗೆ ಸುಳಿವು ಸಿಗಬಾರದೆಂದು ರಾತ್ರಿ ಮಾತ್ರ ನಗರದಲ್ಲಿ ಓಡಾಡುತ್ತಿದ್ದ. ಈತನ ಹೆಜ್ಜೆ ಗುರುತುಪತ್ತೆಮಾಡಿದ್ದಕೇಂದ್ರ ಗುಪ್ತದಳ ಹಾಗೂ ಬೆಂಗಳೂರು ಸಿಸಿಬಿ ಅಧಿಕಾರಿಗಳು, ವಾರವಿಡೀ ಅಖ್ತರ್‌ನನ್ನು ಹಿಂಬಾಲಿಸಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ರಾಷ್ಟ್ರೀಯ ತನಿಖಾ ದಳ (ಎನ್‌ಐಎ), ಕೇಂದ್ರ ಹಾಗೂ ರಾಜ್ಯ ಗುಪ್ತದಳ ಅಧಿಕಾರಿಗಳ ಜೊತೆ ಜಂಟಿ ಕಾರ್ಯಾಚರಣೆ ನಡೆಸಿ ಅಖ್ತರ್‌ನನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ಕಸ್ಟಡಿಗೆ ಪಡೆದು ಅಜ್ಞಾತ ಸ್ಥಳದಲ್ಲಿ ವಿಚಾರಣೆ ನಡೆಸುತ್ತಿದ್ದಾರೆ.

'ತಿಲಕ್‌ನಗರ ಬಿಟಿಪಿ ಪ್ರದೇಶದ ಬಹುಮಹಡಿ ಕಟ್ಟಡದ ಎರಡನೇ ಮಹಡಿಯಲ್ಲಿದ್ದ ಕೊಠಡಿಯಲ್ಲಿ ಅಖ್ತರ್ ಹಾಗೂ ಸ್ನೇಹಿತರು ನೆಲೆಸಿದ್ದರು. ರಾತ್ರಿ



ಮಾತ್ರ ಮನೆಯಿಂದ ಹೊರಗೆ ಬರುತ್ತಿದ್ದರು. ಡೆಲಿವರಿ ಬಾಯ್ ಆಗಿ ನಗರದಲ್ಲಿ ರಾತ್ರಿಯಿಡೀ ಓಡಾಡಿ, ನಸುಕಿನಲ್ಲಿ ಮನೆಗೆ ವಾಪಸು ಹೋಗುತ್ತಿದ್ದರು. ಹಗಲೆಲ್ಲ ಮನೆಯಲ್ಲೇ ಕಾಲ ಕಳೆಯುತ್ತಿದ್ದರು' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಅಖ್ತರ್ ಹಾಗೂ ಸ್ನೇಹಿತರನ್ನು ಸ್ಥಳೀಯರು ಹೆಚ್ಚಾಗಿ ನೋಡಿಲ್ಲ. ಬಾಡಿಗೆಯನ್ನೂ ಅಖ್ತರ್, ಕಟ್ಟಡದ ಮಾಲೀಕನ ಖಾತೆಗೆ ಪ್ರತಿ ತಿಂಗಳು ನಿಗದಿತ ದಿನದಂದು ಪಾವತಿ ಮಾಡುತ್ತಿದ್ದರು. ಹೀಗಾಗಿ, ಮಾಲೀಕರು ಸಹ ಶಂಕಿತನ ಬಗ್ಗೆ ಹೆಚ್ಚು ವಿಚಾರಿಸಿರಲಿಲ್ಲ' ಎಂದಿವೆ.

'ಅಖ್ತರ್ ಕೃತ್ಯದ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಎನ್‌ಐಎ ಹಾಗೂ ಕೇಂದ್ರ ಗುಪ್ತದಳದ ಅಧಿಕಾರಿಗಳು, ಕರ್ನಾಟಕದ ಪೊಲೀಸರಿಗೆ ಸುಳಿವು ನೀಡಿದ್ದರು. ಅದರಂತೆ ಸಿಸಿಬಿ ಭಯೋತ್ಪಾದನಾ ವಿಭಾಗದ ಅಧಿಕಾರಿಗಳು, ಅಖ್ತರ್ ಬೆನ್ನು ಬಿದ್ದಿದ್ದರು. ಒಂದು ವಾರ ಚಲನವಲನ ಗಮನಿಸಿ, ಭಾನುವಾರ ಸಂಜೆ 6 ಗಂಟೆಗೆ ಬಂಧಿಸಿದರು' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಯುಎಪಿ ಕಾಯ್ದೆಯಡಿ ಎಫ್‌ಐಆರ್: 'ಕರ್ನಾಟಕ, ತಮಿಳುನಾಡು ಹಾಗೂ ಕೇರಳದ ಹಲವು ಯುವಕರು ಸಂಘಟಿತರಾಗಿ ಅಲ್‌ಕೈದಾ ಉಗ್ರ ಸಂಘಟನೆ ಸೇರಲು ಹೊರಟಿದ್ದರು. ಅದರ ಜೊತೆಯಲ್ಲೇ ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದರು. ಈ ಪೈಕಿ ಅಖ್ತರ್‌ನನ್ನು ಮಾತ್ರ ಸದ್ಯ ಬಂಧಿಸಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆಯಡಿ (ಯುಎಪಿ) ಅಖ್ತರ್ ಹುಸೇನ್ ಹಾಗೂ ಇತರರ ವಿರುದ್ಧ ತಿಲಕ್‌ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಪ್ರಕರಣದ ತನಿಖೆಯ ಹೊಣೆಯನ್ನು ಸಿಸಿಬಿ ಎಸಿಪಿ ನೇತೃತ್ವದ ತಂಡಕ್ಕೆ ವಹಿಸಲಾಗಿದೆ. ಇತರೆ ಆರೋಪಿಗಳ ಬಂಧನಕ್ಕೂ ತನಿಖೆ ಮುಂದುವರಿದಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಇತ್ತೀಚೆಗಷ್ಟೇ ಸಿಕ್ಕಿಬಿದ್ದಿದ್ದ ಎಬಿಟಿ ಉಗ್ರ

'ಬಾಂಗ್ಲಾದೇಶದ ಬ್ಲಾಗರ್ ಅನಂತ್ ವಿಜಯ್ ದಾಸ್ (32) ಅವರನ್ನು ಹತ್ಯೆ ಮಾಡಿ ಪರಾರಿಯಾಗಿದ್ದ 'ಅನ್ಸರುಲ್ಲಾ ಬಾಂಗ್ಲಾ ಟೀಮ್ (ಎಬಿಟಿ)' ಉಗ್ರ ಸಂಘಟನೆ ಸದಸ್ಯ ಫೈಜಲ್ ಅಹ್ಮದ್, ಕೃತ್ಯ ನಡೆಸಿ ಏಳು ವರ್ಷಗಳ ಬಳಿಕ ಇತ್ತೀಚೆಗಷ್ಟೇ ಬೆಂಗಳೂರಿನಲ್ಲಿ ಸಿಕ್ಕಿಬಿದ್ದಿದ್ದ. ಈತನೂ ಅಖ್ತರ್ ಹುಸೇನ್ ಲಷ್ಕರ್ ಜೊತೆ ಒಡನಾಟ ಹೊಂದಿದ್ದ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾಂಗ್ಲಾ ನಿವಾಸಿ ಫೈಜಲ್, ವೈದ್ಯಕೀಯ ವಿದ್ಯಾರ್ಥಿ. 2015ರ ಮೇ 12ರಂದು ಅನಂತ್ ವಿಜಯ್ ದಾಸ್ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದ. ಸಾಹೀದ್ ಮಜುಂದಾರ್ ಹೆಸರಿನಲ್ಲಿ ಬೊಮ್ಮನಹಳ್ಳಿಯಲ್ಲಿ ನೆಲೆಸಿ, ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಈತನಿಗೂ ಅಲ್‌ಕೈದಾ ಉಗ್ರ ಸಂಘಟನೆ ನಂಟಿತ್ತು' ಎಂದೂ ಅವರು ತಿಳಿಸಿವೆ.



'ಚಿಟ್ ಫಂಡ್ ಮೇಲಿನ ಸರಕು ಸೇವಾ ತೆರಿಗೆಯನ್ನು (ಜಿಎಸ್‌ಟಿ) ರದ್ದುಪಡಿಸಬೇಕು' ಎಂದು ಆಗ್ರಹಿಸಿ ಕರ್ನಾಟಕ ಚಿಟ್‌ಸ್ಟರ್ಸ್ ಒಕ್ಕೂಟದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಕರ್ನಾಟಕ ಚಿಟ್‌ಸ್ಟರ್ಸ್ ಒಕ್ಕೂಟದಿಂದ ಪ್ರತಿಭಟನೆ

ಜಿಎಸ್‌ಟಿ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿಟ್ ಫಂಡ್ ಪ್ರವರ್ತಕರು ನೀಡುವ ಸೇವೆಗಳ ಮೇಲಿನ ಸರಕು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಸಂಪೂರ್ಣವಾಗಿ ರದ್ದುಪಡಿಸಬೇಕು' ಎಂದು ಆಗ್ರಹಿಸಿ ಕರ್ನಾಟಕ ಚಿಟ್‌ಸ್ಟರ್ಸ್ ಒಕ್ಕೂಟದ ಸದಸ್ಯರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ಎಲ್ಲ ಜಿಲ್ಲೆಗಳಿಂದ ಬಂದಿದ್ದ ಚಿಟ್ ಫಂಡ್ ಪ್ರವರ್ತಕರು ಹಾಗೂ ಉದ್ಯೋಗಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಇದು ಸಾಂಕೇತಿಕ ಪ್ರತಿಭಟನೆ. ಬೇಡಿಕೆ ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದು ಪ್ರತಿಭಟನಕಾರರು ಎಚ್ಚರಿಸಿದರು.

ಒಕ್ಕೂಟದ ಅಧ್ಯಕ್ಷ ಎಸ್. ಬಸವಲಿಂಗಪ್ಪ, 'ಚಿಟ್ ಮೇಲೆ ಇದುವರೆಗೂ ಶೇ 12ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿತ್ತು. ಇದನ್ನು ಹಿಂಪಡೆಯುವಂತೆ ಹಲವು ಬಾರಿ ಮನವಿ ಸಲ್ಲಿಸಿದರೂ ಸರ್ಕಾರ ಸ್ಪಂದಿಸಿಲ್ಲ. ಇದರ ನಡುವೆಯೇ ಜಿಎಸ್‌ಟಿ ದರವನ್ನು ದಿಢೀರ್ ಶೇ 18ಕ್ಕೆ ಏರಿಸಲಾಗಿದೆ. ಇದು, ಚಿಟ್ ವಂತಿಗೆದಾರರು ಹಾಗೂ ಚಿಟ್ ಸಂಸ್ಥೆಗಳ ಮುಖ್ಯಸ್ಥರಿಗೆ ಆಘಾತವನ್ನುಂಟು ಮಾಡಿದೆ' ಎಂದು ತಿಳಿಸಿದರು.

ಒಕ್ಕೂಟದ ಖಜಾಂಚಿ ಟಿ.ಸಿ. ವಿಜಯಕುಮಾರ್, 'ರಾಜ್ಯದಲ್ಲಿ 1,750 ಚಿಟ್ ಫಂಡ್ ಪ್ರವರ್ತಕರಿದ್ದು, ಲಕ್ಷಾಂತರ ಮಂದಿ ಹೂಡಿಕೆದಾರರಿದ್ದಾರೆ. ಈ ಕ್ಷೇತ್ರವನ್ನೇ ನಂಬಿಕೊಂಡು 10 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳು ಬದುಕು ಕಟ್ಟಿಕೊಂಡಿದ್ದಾರೆ. ಜಿಎಸ್‌ಟಿ ಹೆಚ್ಚಳ ಮಾಡಿರುವುದು, ಇವರೆಲ್ಲರ ಜೀವನದ ಮೇಲೆ ಬರೆ ಎಳೆದಂತಾಗಿದೆ' ಎಂದು ದೂರಿದರು.

ಮುಖ್ಯಮಂತ್ರಿಗೆ ಮನವಿ ಸಲ್ಲಿಕೆ: ಪ್ರತಿಭಟನೆ ಬಳಿಕ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಹಾಗೂ ಜಿಎಸ್‌ಟಿ ಆಯುಕ್ತರ ಕಚೇರಿಗೆ ಪ್ರತಿಭಟನಕಾರರು ಮನವಿ ಸಲ್ಲಿಸಿದರು.

ಕಮಿಷನರ್ ಕಚೇರಿ ಎದುರು ಆತ್ಮಹತ್ಯೆಗೆ ಯತ್ನ

ಬೆಂಗಳೂರು: ನಗರ ಪೊಲೀಸ್ ಕಮಿಷನರ್ ಕಚೇರಿ ಎದುರೇ ಸಿದ್ಧರಾಮಗೌಡ ಎಂಬುವರು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದು, ಅಸ್ವಸ್ಥಗೊಂಡಿರುವ ಅವರಿಗೆ ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

'ವಿಜಯಪುರ ನಿವಾಸಿ ಸಿದ್ಧರಾಮಗೌಡ ಸೋಮವಾರ ಮಧ್ಯಾಹ್ನ ಕಮಿಷನರ್ ಕಚೇರಿಗೆ ಬಂದಿದ್ದರು. ಪ್ರವೇಶ ದ್ವಾರದಲ್ಲೇ ಏಕಾಏಕಿ ಕ್ರಿಮಿನಾಶಕ ಸೇವಿಸಿ ಕುಸಿದು ಬಿದ್ದಿದ್ದರು. ಅದನ್ನು ನೋಡಿದ್ದ ಸಿಬ್ಬಂದಿ, ಆಟೊದಲ್ಲಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಿದ್ಧರಾಮಗೌಡ ಮಗಳಿಗೆ ಪತಿ ವರದಕ್ಷಿಣೆ ಕಿರುಕುಳ ನೀಡಿದ್ದರು. ಈ ಬಗ್ಗೆ ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆದರೆ, ಪೊಲೀಸರು ಆರೋಪಿಗಳ ವಿರುದ್ಧ ಕ್ರಮ ಕೈಗೊಂಡಿರಲಿಲ್ಲ. ಇದರಿಂದ ಬೇಸತ್ತು ಸಿದ್ಧರಾಮಗೌಡ ಕಮಿಷನರ್ ಅವರಿಗೆ ದೂರು ನೀಡಲು ಬಂದಿದ್ದರು. ಅವರ ಪ್ರಕರಣದ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ' ಎಂದೂ ತಿಳಿಸಿವೆ.



ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ದಾಸರವಾಡಿಯಲ್ಲಿ ಪಿಎಸ್‌ಐ ಅವಿನಾಶ ಅವರ ಅಂತ್ಯಕ್ರಿಯೆ ಸೋಮವಾರ ನಡೆಯಿತು

ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಆಂಧ್ರ ಪ್ರದೇಶದ ಚಿತ್ತೂರ ಬಳಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟ ಪಿಎಸ್‌ಐ ಅವಿನಾಶ ಕಾಶಿನಾಥ (28) ಅವರ ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮ ತಾಲ್ಲೂಕಿನ ದಾಸರವಾಡಿಯಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ಬೆಂಗಳೂರಿನ ಶಿವಾಜಿನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಅವಿನಾಶ ಜುಲೈ 24ರಂದು ಗಾಂಜಾ ಮಾರಾಟಗಾರರ ಪತ್ತೆಗೆ ತೆರಳಿದ್ದ ವೇಳೆ ಅಪಘಾತ ಸಂಭವಿಸಿತ್ತು. ಇವರೊಂದಿಗೆ ಇನ್ನಿಬ್ಬರು ಸಾವನ್ನಪ್ಪಿದ್ದರು.

ದಾಸರವಾಡಿಯಲ್ಲಿನ ಅವರ ಹೊಲದಲ್ಲಿ ಅಂತ್ಯಕ್ರಿಯೆ ನೆರವೇರಿತು. ಪೊಲೀಸರು ಮೂರು ಸುತ್ತು ಗುಂಡು ಹಾರಿಸಿ ಗೌರವ ಸಲ್ಲಿಸಿದರು.

ಐಜಿಪಿ ಮನೀಷ ಕರ್ಬಿಕರ್, ಶಾಸಕರಾದ ರಾಜಶೇಖರ ಪಾಟೀಲ, ಶರಣು ಸಲಗರ, ವಿಧಾನ ಪರಿಷತ್ ಮಾಜಿ ಸದಸ್ಯ ವಿಜಯಸಿಂಗ್ ಮತ್ತು ಗ್ರಾಮಸ್ಥರು ಇದ್ದರು.

ಅಪರಾಧ ಸುದ್ದಿಗಳು

ನೋಂದಣಿ ಫಲಕ ಬಣ್ಣ ಬದಲಿಸಿ ವಾಹನ ಮಾರಾಟ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುವ ದ್ವಿಚಕ್ರ ವಾಹನಗಳನ್ನು ಕದ್ದು ಮಾರುತ್ತಿದ್ದ ಮೂವರು ಆರೋಪಿಗಳನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

'ಲಿಂಗರಾಜಪುರ ಆಯಿಲ್ ಮಿಲ್ ರಸ್ತೆಯ ಸಾಲೋಮನ್ ಅಲಿಯಾಸ್ ಅಪ್ಪಿ (20), ಮೊಹಮ್ಮದ್ ಉಮರ್ ಪಾಷಾ (19) ಹಾಗೂ ಕೊತ್ತನೂರು ನಾಗೇನಹಳ್ಳಿ ದಿಣ್ಣೆಯ ಮಣಿಕಂಠನ್ (33) ಬಂಧಿತರು. ಇವರಿಂದ ₹4 ಲಕ್ಷ ಮೌಲ್ಯದ 6 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ದ್ವಿಚಕ್ರ ವಾಹನ ಕಳ್ಳತನವಾಗಿತ್ತು. ಈ ಬಗ್ಗೆ ದಾಖಲಾದ ದೂರಿನಡಿ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು. ಹಲವು ತಿಂಗಳಿನಿಂದ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿಗಳು, ಅವುಗಳ ಬಣ್ಣ ಹಾಗೂ ನೋಂದಣಿ ಸಂಖ್ಯೆ ಫಲಕ ಬದಲಿಸಿ ಕಡಿಮೆ ಬೆಲೆಗೆ ಮಾರುತ್ತಿದ್ದರು. ಬಂದ ಹಣವನ್ನು ಹಂಚಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದು ತಿಳಿಸಿದರು.

ಕದ್ದ ವಾಹನ ಮಾರಲು ಬಾಲಕನ ಬಳಕೆ

ಬೆಂಗಳೂರು: ಕದ್ದ ವಾಹನಗಳನ್ನು ಬಾಲಕನ ಮೂಲಕ ಮಾರಾಟ ಮಾಡುತ್ತಿದ್ದ ಜಾಲವನ್ನು ಸುಬ್ರಮಣ್ಯನಗರ ಪೊಲೀಸರು ಭೇದಿಸಿದ್ದು, ₹3.50 ಲಕ್ಷ ಮೌಲ್ಯದ 7 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

'ಆರ್.ಪಿ. ರಸ್ತೆಯಲ್ಲಿ ಬಾಲಕ ದ್ವಿಚಕ್ರ ವಾಹನ ಚಲಾಯಿಸಿಕೊಂಡು ಹೊರಟಿದ್ದ. ಆತನ ಬಗ್ಗೆ ಅನುಮಾನಗೊಂಡಿದ್ದ ಗಸ್ತು ಸಿಬ್ಬಂದಿ, ತಡೆದು ತಪಾಸಣೆ ನಡೆಸಿದ್ದರು. ವಾಹನಗಳ ಬಗ್ಗೆ ಸೂಕ್ತ ಮಾಹಿತಿ ನೀಡದಿದ್ದರಿಂದ ಠಾಣೆಗೆ ಕರೆತಂದು ವಿಚಾರಿಸಿದಾಗಲೇ ಜಾಲದ ಕೃತ್ಯ ಬಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾಲಕನಿಂದಲೇ 7 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಈತನನ್ನು ವಶಕ್ಕೆ ಪಡೆದು ಬಾಲ ನ್ಯಾಯ ಮಂಡಳಿ ಎದುರು ಹಾಜರುಪಡಿಸಲಾಗಿದೆ. ಈತನ ಮೂಲಕ ವಾಹನ ಮಾರಾಟ ಮಾಡಿಸುತ್ತಿದ್ದ ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ತಿಳಿಸಿವೆ.

ಸೀರೆ ಅಂಗಡಿಯಲ್ಲಿ ಕಳವು: ಬಂಧನ

ಬೆಂಗಳೂರು: ಹಲಸೂರು ಗೇಟ್ ಠಾಣೆ ವ್ಯಾಪ್ತಿಯ ಸೀರೆ ಅಂಗಡಿಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಯಾಸೀನ್ ಖಾನ್ ಅಲಿಯಾಸ್ ಚೋರ್ (33) ಎಂಬುವವನ್ನು ಪೊಲೀಸರು ಬಂಧಿಸಿದ್ದಾರೆ.

'ಮೈಸೂರಿನ ವಾಲ್ಮೀಕಿನಗರದ ಯಾಸೀನ್, ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ. ಈತನನ್ನು ಬಂಧಿಸಿ ಎರಡೂವರೆ ಕೆ.ಜಿ ಬೆಳ್ಳಿ ಹಾಗೂ ₹ 39 ಸಾವಿರ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಪ್ಪಾಜಿರಾವ್ ರಸ್ತೆಯಲ್ಲಿರುವ ಹನುಮಾನ್ ಸಿಲ್ಕ್ ಮಳಿಗೆಯಲ್ಲಿ ಏಪ್ರಿಲ್ 14ರಂದು ಕಳ್ಳತನ ನಡೆದಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ, ಯಾವುದೇ ಸುಳಿವು ಸಿಕ್ಕಿರಲಿಲ್ಲ. ಇತ್ತೀಚೆಗೆ ಲಭ್ಯವಾಗಿದ್ದ ಮಾಹಿತಿ ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

'ಕಬ್ಬಿಣದ ರಾಡ್‌ನಿಂದ ಬಾಗಿಲು ಒಡೆದು ಒಳನುಗ್ಗಿದ್ದ ಆರೋಪಿ, ಹಣ ಹಾಗೂ ಬೆಳ್ಳಿ ಸಾಮಗ್ರಿ ಕದ್ದುಕೊಂಡು ಪರಾರಿಯಾಗಿದ್ದ. ಆರೋಪಿ ಮತ್ತಷ್ಟು ಕಡೆ ಕೃತ್ಯ ಎಸಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದೂ ಹೇಳಿದರು.

ವಿದೇಶಿಯರ ಅಕ್ರಮ ವಾಸ: ಬಂಧನ



ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿಯರ ಪತ್ತೆ ಕಾರ್ಯಾಚರಣೆಯಲ್ಲಿ ಆಫ್ರಿಕಾ ಮೂಲದ ಒಬ್ಬನನ್ನು ಬಂಧಿಸಿ, ಏಳು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಪಿಗೆಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಒಬ್ಬನನ್ನು ಬಂಧಿಸಲಾಗಿದೆ. ಯಲಹಂಕ ಠಾಣಾ ವ್ಯಾಪ್ತಿಯಲ್ಲಿ ಏಳು ಮಂದಿಯನ್ನು ವಶಕ್ಕೆ ಪಡೆದು ವಲಸಿಗರ ಬಂಧನ ಕೇಂದ್ರದಲ್ಲಿ ಇರಿಸಲಾಗಿದೆ. ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕೊಲೆ ಸುಳಿವು ನೀಡಿದ ವಿಡಿಯೊ ಬಂಧನ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ಹೇಮಂತ್‌ಕುಮಾರ್ ಉರುಫ್ ದಿಲೀಪ್ (26) ಎಂಬುವರ ಕೊಲೆ ಪ್ರಕರಣ ಸಂಬಂಧ ನಾಲ್ವರು ಬಾಲಕರು ಸೇರಿ ಆರು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

'ತ್ಯಾಗರಾಜನಗರದ ಹರೀಶ್ ಅಲಿಯಾಸ್ ಹ್ಯಾಂಟ್ರೊ ಹರಿ (26) ಹಾಗೂ ರೌಡಿ ರಿಜ್ವಾನ್ ಪಾಷಾ ಅಲಿಯಾಸ್ ಕುಳ್ಳ (37) ಬಂಧಿತರು. ನಾಲ್ವರು ಬಾಲಕರ ಹೆಸರು ಬಹಿರಂಗಪಡಿಸಲಾಗದು. ಅವರನ್ನು ಬಾಲ ನ್ಯಾಯ ಮಂಡಳಿ ಎದುರು ಹಾಜರುಪಡಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೇಮಂತ್ ಕೊಲೆ ಮಾಡಿದವರು ಯಾರು ಎಂಬ ಸುಳಿವು ಸಿಕ್ಕಿರಲಿಲ್ಲ. ಇತ್ತೀಚೆಗೆ ರಿಜ್ವಾನ್ ಪಾಷಾನನ್ನು ಕೆಂಪೇಗೌಡ ನಗರ ಪೊಲೀಸರು ಶಿವಮೊಗ್ಗದಲ್ಲಿ ಬಂಧಿಸಿ ಕರೆತಂದಿದ್ದರು. ಆತನ ಮೊಬೈಲ್‌ನಲ್ಲಿ ಹೇಮಂತ್ ಕೊಲೆ ದೃಶ್ಯ ಸೆರೆಯಾಗಿತ್ತು. ಅದೇ ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ಅವರು ಹೇಳಿದರು.

ಆಮೆಗತಿಯಲ್ಲಿ ಬೆಂಗಳೂರು – ಸತ್ಯಮಂಗಲಂ ರೈಲು ಯೋಜನೆ ಕಾಮಗಾರಿ

ಮೊದಲ ಸ್ಥಾನದ ಕುಖ್ಯಾತಿ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕದ ಅನೇಕ ಯೋಜನೆಗಳು ದಶಕಗಳಿಂದ ಕುಂಟುತ್ತಾ ಸಾಗಿರುವುದು ಹೊಸದೇನಲ್ಲ. ಆದರೆ, ಈಗ ಬೆಂಗಳೂರು– ಸತ್ಯಮಂಗಲಂ ರೈಲು ಯೋಜನೆಯು (ಬೆಂಗಳೂರು– ಚಾಮರಾಜನಗರ ರೈಲು ಪರಿಷ್ಕೃತ ಯೋಜನೆ) ಕೇಂದ್ರ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿದೆ. ಕೇಂದ್ರ ಸರ್ಕಾರದ ಮೂಲಸೌಕರ್ಯ ಯೋಜನೆಗಳಲ್ಲಿ ಅತ್ಯಂತ ವಿಳಂಬವಾಗಿ ಅನುಷ್ಠಾನವಾಗುತ್ತಿರುವ ಯೋಜನೆ ಇದು ಎಂದು ಕೇಂದ್ರ ಸರ್ಕಾರವೇ ಪಟ್ಟಿ ಮಾಡಿದೆ.

ರಾಜ್ಯಸಭೆಯಲ್ಲಿ ಸಿಪಿಎಂ ಸದಸ್ಯ ಬಿನೋಯ್ ವಿಶ್ವಂ ಅವರ ಪ್ರಶ್ನೆಗೆ ಸೋಮವಾರ ಲಿಖಿತ ಉತ್ತರ ನೀಡಿರುವ ಕೇಂದ್ರ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ರಾಜ್ಯ ಸಚಿವ ಇಂದ್ರಜಿತ್ ಸಿಂಗ್, 'ಅತ್ಯಂತ ವಿಳಂಬವಾಗಿ ಅನುಷ್ಠಾನವಾಗುತ್ತಿರುವ 20 (₹150 ಕೋಟಿಗಿಂತ ಹೆಚ್ಚಿನ ಮೊತ್ತದ ಯೋಜನೆಗಳು) ಯೋಜನೆಗಳನ್ನು ಪಟ್ಟಿ ಮಾಡಲಾಗಿದ್ದು, ಬೆಂಗಳೂರು– ಸತ್ಯಮಂಗಲಂ ಯೋಜನೆಯು ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ' ಎಂದು ತಿಳಿಸಿದ್ದಾರೆ.

'1996ರಲ್ಲಿ ಈ ಯೋಜನೆಯನ್ನು ಘೋಷಿಸಲಾಯಿತು. 2002ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿತ್ತು.

ಬೆಂಗಳೂರು– ಚಾಮರಾಜನಗರ ರೈಲು ಯೋಜನೆಯ ಬಗ್ಗೆ ಸರ್ವೆ ನಡೆಸಿ ಇಲಾಖೆಗೆ ಕಳುಹಿಸಲಾಗಿದೆ. ರೈಲ್ವೆಯ ಅನುಮೋದನೆ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಗೌರವ್ ಗುಪ್ತ, ಕರ್ನಾಟಕ ಮೂಲಸೌಕರ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ

ಯೋಜನೆಯ ಅಂತಿಮ ಸ್ಥಳದ ಸರ್ವೆ ನಡೆಸುವ ಪ್ರಸ್ತಾವನೆ ಭಾರತೀಯ ರೈಲ್ವೆ ಮಂಡಳಿಯ ಮುಂದಿದೆ. ಮಂಡಳಿಯು ಈ ಕುರಿತು ನಿರ್ಧಾರ ಕೈಗೊಳ್ಳಬೇಕಿದೆ.

ಅನಿಷ್ ಹೆಗ್ಡೆ, ನೈರುತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ

₹1,383 ಕೋಟಿ ಮೊತ್ತದ ಯೋಜನೆಯು 2028ರಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಬೆಂಗಳೂರು– ಚಾಮರಾಜನಗರ ನಡುವೆ ರೈಲ್ವೆ ಮಾರ್ಗ ನಿರ್ಮಾಣ ಯೋಜನೆ (147 ಕಿ.ಮೀ) ಕೈಗೆತ್ತಿಕೊಳ್ಳಲಾಗುವುದು ಎಂದು ಕೇಂದ್ರ ರೈಲ್ವೆ ಬಜೆಟ್‌ನಲ್ಲಿ 2013ರಲ್ಲಿ ಘೋಷಿಸಲಾಯಿತು. ಬೆಂಗಳೂರು– ಹೆಜ್ಜಾಲೆ– ಕನಕಪುರ– ಮಳವಳ್ಳಿ– ಕೊಳ್ಳೆಗಾಲ– ಚಾಮರಾಜನಗರ ನಡುವೆ ಮಾರ್ಗ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಯಿತು. ಯೋಜನೆಗೆ ಅಗತ್ಯವಿರುವ ಭೂಸ್ವಾಧೀನ ಮಾಡಿ ಯೋಜನಾ ಮೊತ್ತದ ಶೇ50ರಷ್ಟನ್ನು ಭರಿಸಲು ಕರ್ನಾಟಕ ಸರ್ಕಾರ ಒಪ್ಪಿಕೊಂಡಿತು. ಯೋಜನೆಗಾಗಿ 1733 ಎಕರೆ ಜಾಗವನ್ನು ಭೂಸ್ವಾಧೀನ ಮಾಡಬೇಕಿದೆ. ಆ ಬಳಿಕ ಯೋಜನೆಯು ಒಂದು ಹೆಜ್ಜೆ ಮುಂದಕ್ಕೆ ಹೋಗಿಲ್ಲ. ಭೂಸ್ವಾಧೀನ ಪ್ರಕ್ರಿಯೆಯೇ ನಡೆದಿಲ್ಲ.

'ಬೆಂಗಳೂರಿನಿಂದ ಮೈಸೂರಿಗೆ ಹೋಗದೆಯೇ ನೇರವಾಗಿ ಚಾಮರಾಜನಗರಕ್ಕೆ ತಲುಪುವ ಪರ್ಯಾಯ ಮಾರ್ಗದ ಯೋಜನೆ ಇದಾಗಿದೆ. ಈ ಯೋಜನೆಯ ಅನುಷ್ಠಾನದಿಂದ ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಆರ್ಥಿಕ ಹಾಗೂ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ. ದಟ್ಟ ಅರಣ್ಯದಲ್ಲಿ ಈ ಯೋಜನೆ ಹಾದು ಹೋಗುವುದರಿಂದ ಆರಂಭದಲ್ಲಿ ತಮಿಳುನಾಡು ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತು. ಬಳಿಕ ಯೋಜನೆಯ ಹೆಸರನ್ನು ಬೆಂಗಳೂರು– ಚಾಮರಾಜನಗರ ರೈಲು ಯೋಜನೆ ಎಂದು ಬದಲಿಸಲಾಯಿತು. ರೈಲ್ವೆ ಇಲಾಖೆಯ ಪಿಂಕ್ ಪುಸ್ತಕದಲ್ಲಿ ಯೋಜನೆಗೆ ಬಗ್ಗೆ ಹೇಳಲಾಗಿದೆ ಅಷ್ಟೇ. ಯೋಜನೆಗೆ ಅಗತ್ಯ ಇರುವ ಭೂಮಿಯನ್ನು ಕರ್ನಾಟಕ ಸರ್ಕಾರ ಇಲ್ಲಿಯವರೆಗೆ ಸ್ವಾಧೀನಪಡಿಸಿಲ್ಲ. ಹೀಗಾಗಿ, ಯೋಜನೆಗೆ ಚಾಲನೆಯೇ ಸಿಕ್ಕಿಲ್ಲ. ಭೂಮಿ ಕೊಡದೆ ರೈಲ್ವೆ ಇಲಾಖೆಯವರು ಏನು ಮಾಡಲು ಸಾಧ್ಯ' ಎಂದು ರೈಲ್ವೆ ಹೋರಾಟಗಾರ ಕೃಷ್ಣಪ್ರಸಾದ್ ಪ್ರಶ್ನಿಸಿದರು.

ಶೇ 50ರಷ್ಟು ಯೋಜನೆಗಳು ವಿಳಂಬ

ಕೇಂದ್ರ ಸರ್ಕಾರದ ಅನುದಾನದಲ್ಲಿ (ಕೇಂದ್ರ ವಲಯದ ಯೋಜನೆಗಳು) ಅನುಷ್ಠಾನಗೊಳ್ಳುತ್ತಿರುವ 1,568 ಯೋಜನೆಗಳ ಪೈಕಿ 721 ಯೋಜನೆಗಳು ವಿಳಂಬವಾಗಿವೆ. ಇದರಲ್ಲಿ ರಾಷ್ಟ್ರೀಯ ಹೆದ್ದಾರಿ (843ರಲ್ಲಿ 302), ರೈಲ್ವೆ ಇಲಾಖೆ (211ರಲ್ಲಿ 127) ಹಾಗೂ ಪೆಟ್ರೋಲಿಯಂ ಇಲಾಖೆಗೆ (139ರಲ್ಲಿ 91) ಸಂಬಂಧಿಸಿದ ಯೋಜನೆಗಳು ವಿಳಂಬವಾಗುತ್ತಿವೆ ಎಂದು ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ.



ಡಿಎಸ್ ಮ್ಯಾಕ್ಸ್ ಪ್ರಾಪರ್ಟೀಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ದಯಾನಂದ ಅವರ ಪುತ್ರ ಶ್ರೇಯನ್ ದಯಾನಂದ ಅವರಿಗೆ ಕ್ಯಾಪಿಟಲ್ ಹೋಟೆಲ್‌ನಲ್ಲಿ 'ರಾಜ್ಯ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಎಸಿಬಿ ರದ್ದತಿಗೆ ಆಗ್ರಹ: ಪ್ರತಿಭಟನೆ

ಬೆಂಗಳೂರು: 'ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ರದ್ದುಗೊಳಿಸಿ, ಲೋಕಾಯುಕ್ತ ಬಲಗೊಳಿಸಬೇಕು' ಎಂದು ಒತ್ತಾಯಿಸಿ ರಾಜ್ಯ ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತರ ವೇದಿಕೆ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

'ಸರ್ಕಾರದ ಅಕ್ರಮಗಳನ್ನು ದಾಖಲೆ ಸಮೇತ ಮಾಹಿತಿ ಹಕ್ಕು ಕಾರ್ಯಕರ್ತರು ಬಯಲು ಮಾಡುತ್ತಿದ್ದಾರೆ. ಇಂದಿನ ಸರ್ಕಾರದ ಕೆಲ ಇಲಾಖೆಗಳು, ತಮ್ಮ ಭ್ರಷ್ಟಾಚಾರ ಮುಚ್ಚಿಕೊಳ್ಳಲು ಯತ್ನಿಸುತ್ತಿವೆ. ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದರೂ ಮಾಹಿತಿ ನೀಡುತ್ತಿಲ್ಲ. ಬದಲಿಗೆ ಅರ್ಜಿದಾರರ ಮೇಲೆಯೇ ದರ್ಪ ಮೆರೆಯುತ್ತಿದ್ದಾರೆ' ಎಂದು ಪ್ರತಿಭಟನಕಾರರು ದೂರಿದರು.

'ಮಾಹಿತಿ ಹಕ್ಕು, ಸಾಮಾಜಿಕ ಹೋರಾಟಗಾರರಿಗೆ ರಕ್ಷಣೆ ಒದಗಿಸಬೇಕು. ಎಸಿಬಿ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ಅವರನ್ನು ವರ್ಗಾವಣೆ ಮಾಡಬೇಕು' ಎಂದರು.



ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ರಾಜ್ಯ ಘಟಕಕ್ಕೆ ಆಯ್ಕೆಯಾದ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು

ಪ್ರೌಢಶಾಲಾ ಸಹ ಶಿಕ್ಷಕರ ಸಂಘಕ್ಕೆ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ರಾಜ್ಯ ಅಧ್ಯಕ್ಷರಾಗಿ ಬಿ. ಸಿದ್ಧಬಸಪ್ಪ ಆಯ್ಕೆಯಾಗಿದ್ದಾರೆ.

ಭದ್ರಾವತಿ ಸಂಚಿಯ ಹೊನ್ನಮ್ಮ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ (ಪ್ರೌಢಶಾಲಾ ವಿಭಾಗ) ಸಹ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಾಮು ಗುಗವಾಡ (ಪ್ರಧಾನ ಕಾರ್ಯದರ್ಶಿ), ಧನಸಿಂಗ್ ರಾಠೋಡ (ಖಜಾಂಚಿ), ಎಂ.ಕೆ. ಬಿರಾದಾರ್ (ಉಪಾಧ್ಯಕ್ಷ), ತುಕಾರಾಂ ಬಾಗೆನ್ನವರ (ಸಂಘಟನಾ ಕಾರ್ಯದರ್ಶಿ), ದೇವರಾಜೇಗೌಡ (ಸಹ ಕಾರ್ಯದರ್ಶಿ) ಆಯ್ಕೆಯಾಗಿದ್ದಾರೆ.

ಕೇಂದ್ರ ಸರ್ಕಾರದ ಮಾದರಿಯಲ್ಲಿ ರಾಜ್ಯದ ಸರ್ಕಾರ ಶಿಕ್ಷಕರಿಗೆ ವೇತನ ಪರಿಷ್ಕರಣೆ ಮಾಡಬೇಕು, ಎನ್‌ಪಿಎಸ್ ರದ್ದುಪಡಿಸಿ, ಹಳೇ ಪಿಂಚಣಿ ವ್ಯವಸ್ಥೆಯನ್ನೇ ಜಾರಿಗೆ ತರಬೇಕು, ಶಿಕ್ಷಕರ ವೇತನ ತಾರತಮ್ಯ ನಿವಾರಿಸಬೇಕು ಎಂದು ನೂತನ ಅಧ್ಯಕ್ಷರ ಆಗ್ರಹಿಸಿದ್ದಾರೆ.

ನ್ಯಾಯಮೂರ್ತಿ ಸಂದೇಶ್‌ಗೆ ಭದ್ರತೆ: ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿಗೆ ವರ್ಗಾವಣೆ ಬೆದರಿಕೆ ಒಡ್ಡಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕು ಹಾಗೂ ಸಂದೇಶ್ ಅವರಿಗೆ ಸೂಕ್ತ ಭದ್ರತೆ ಒದಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ವಕೀಲ ಎಲ್. ರಮೇಶ್ ನಾಯಕ್ ಸಲ್ಲಿಸಿದ್ದ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಸೂಕ್ತ ಭದ್ರತೆ ಒದಗಿಸುವುದು ಸರ್ಕಾರದ ಜವಾಬ್ದಾರಿ. ಈ ಪ್ರಕರಣದಲ್ಲಿ ನ್ಯಾಯಮೂರ್ತಿಗಳಿಗೆ ವೈ, ವೈ ಪ್ಲಸ್, ಜಡ್, ಜಡ್ ಪ್ಲಸ್‌ನಂತಹ ಭದ್ರತೆ ಒದಗಿಸಬೇಕೆಂಬ ಮನವಿಯಲ್ಲಿ ಯಾವುದೇ ಹುರುಳಿಲ್ಲ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಅರ್ಜಿ ವಜಾಗೊಳಿಸಿತು.

ನಗರದಲ್ಲಿ ಇಂದು

ಅಮೃತ ಭಾರತಿ: ಉದ್ಘಾಟನೆ: ವಿ. ಸುನಿಲ್ ಕುಮಾರ್, ಅತಿಥಿಗಳು: ಡಿ.ಎಸ್. ಅರುಣ್, ಮಹೇಶ ಜೋಶಿ, ಆಯೋಜನೆ: ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10

ಲೈಂಗಿಕ ಕಾರ್ಮಿಕರ ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಸಮುದಾಯದ ಕುರಿತು ದುಂಡು ಮೇಜಿನ ಚರ್ಚೆ: ಉಪನ್ಯಾಸಕರು: ಬಿ.ಟಿ. ವೆಂಕಟೇಶ್, ಅನಿಂದ್ಯ ಹಾಜರ, ಶಕುನ ಮೋಹಿನಿ, ಅರವಿಂದ ನರೈನ್, ಸೌಮ್ಯ ಎ., ಆಯೋಜನೆ: 'ಒಂದೆಡೆ', ಸ್ಥಳ: ಎಂ.ಟಿ. ಆರ್. ಹೋಟೆಲ್ ಹತ್ತಿರ, ವೈಟ್ ಹೌಸ್ ಬಿಲ್ಡಿಂಗ್, ಸೇಂಟ್ ಮಾರ್ಕ್ಸ್ ರಸ್ತೆ, ಬೆಳಿಗ್ಗೆ 10.30

ಸೌತ್ ಇಂಡಿಯಾ ಗಾರ್ಮೆಂಟ್ಸ್ ಅಸೋಸಿಯೇಷನ್ ಪ್ರದರ್ಶನ ಮೇಳ: ಉದ್ಘಾಟನೆ: ಬಿ.ಸಿ ಶಿವಕುಮಾರ್, ಜಿ.ಆರ್.ಅಕದಾಸ್, ಕಾವ್ಯಶೆಟ್ಟಿ, ಆಯೋಜನೆ: ಸೌತ್ ಇಂಡಿಯಾ ಗಾರ್ಮೆಂಟ್ಸ್ ಅಸೋಸಿಯೇಷನ್, ಸ್ಥಳ: ಅರಮನೆ ಮೈದಾನ, ಬೆಳಿಗ್ಗೆ 10.30

ಭಾರತದಲ್ಲಿ ಗ್ರಾಮೀಣ ಕಾರ್ಮಿಕ ವಲಸೆ ಮತ್ತು ಕರ್ನಾಟಕದಲ್ಲಿನ ಮಹಿಳಾ ವಲಸಿಗರ ಒಂದು ಅಧ್ಯಯನ ವಿಚಾರಸಂಕಿರಣ: ಉದ್ಘಾಟನೆ: ಜಯಪ್ರಕಾಶ ಶೆಟ್ಟಿ, ಎಚ್. ಶ್ರೀನಿವಾಸ್, ಶಶಿ ಬಾಲ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30(ಆನ್‌ಲೈನ್ ಕಾರ್ಯಕ್ರಮ)

'ಕುರುಕ್ಷೇತ್ರ' ನಾಟಕ ಪ್ರದರ್ಶನ: ಸಂಗೀತ, ನಿರ್ದೇಶನ: ರಾಜೇಂದ್ರ ಕುಮಾರ್, ಕೀಬೋರ್ಡ್: ಲೋಕೇಶ್ ಮೂರ್ತಿ, ತಬಲಾ: ರಾಜು, ಆಯೋಜನೆ: ರವಿಕುಮಾರ್ ಮಿತ್ರ ಮಂಡಲಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 2

ಗೋಪಿಗೀತಾ–ಭಾಗವತ ಪ್ರವಚನ: **ಪ್ರಸ್ತುತಿ:** ದ್ವೈಪಾಯನಾಚಾರ್, ಭಜನೆ: ವಾಗ್ದೇವಿ ಭಜನಾ ಮಂಡಳಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಕನ್ನಿಕಾ ಪರಮೇಶ್ವರಿ ದೇವಸ್ಥಾನ, ರಾಜಾಜಿನಗರ, ಸಂಜೆ 6



ದ್ವೈಪಾಯನಾಚಾರ್

ಪ್ರತಿಭಾ ದಿನಾಚರಣೆ ಸಮಾರಂಭ: **ಅತಿಥಿಗಳು:** ಕೆ. ಶಿವರುದ್ರಯ್ಯ, ನಯನಾ, ಅಧ್ಯಕ್ಷತೆ: ಕೆ.ಪಿ. ನರಸಿಂಹಮೂರ್ತಿ, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ಕಲೆ ಮತ್ತು ವಾಣಿಜ್ಯ ಸಂಜೆ ಪದವಿ, ಪದವಿಪೂರ್ವ ಕಾಲೇಜು, ಎನ್. ಆರ್. ಕಾಲೊನಿ, ಸಂಜೆ 6


'ನನ್ನ ತಂಗಿಗೊಂದು ಗಂಡು ಕೊಡಿ' ನಾಟಕ ಪ್ರದರ್ಶನ: ರಚನೆ: ಪಿ.ಲಂಕೇಶ್, ನಿರ್ದೇಶನ: ವಿಶಾಲ್ ಕಶ್ಯಪ್, ಆಯೋಜನೆ: ಸ್ಟೇಜ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

ಲಿಂಗಾಯತ ಪಂಚಮಸಾಲಿಗೆ 2ಎ ಮೀಸಲಾತಿ

4ನೇ ಬಾರಿ ಸರ್ಕಾರ ಭರವಸೆ ನೀಡಿದ್ದು, ಎರಡು ತಿಂಗಳ ಅವಕಾಶ ಕೇಳಿದೆ. ಆ.22ಕ್ಕೆ ಅವಧಿ ಪೂರ್ಣಗೊಳ್ಳಲಿದ್ದು, ಅದನ್ನು ನೆನಪಿಸಲು ರ‍್ಯಾಲಿ ಆಯೋಜಿಸಿದ್ದೇವೆ

ಹಕ್ಕೊತ್ತಾಯದ ರ‍್ಯಾಲಿ 30ಕ್ಕೆ: ಜಯಮೃತ್ಯುಂಜಯ ಸ್ವಾಮೀಜಿ

ಹುಬ್ಬಳ್ಳಿ: 'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಎರಡು ತಿಂಗಳಲ್ಲಿ ಘೋಷಿಸುವುದಾಗಿ ಭರವಸೆ ನೀಡಿದ್ದ ರಾಜ್ಯ ಸರ್ಕಾರದ ಗಮನ ಸೆಳೆಯಲು ಹುಬ್ಬಳ್ಳಿಯಲ್ಲಿ ಜುಲೈ 30ರಂದು ಹಕ್ಕೊತ್ತಾಯದ ಬೃಹತ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ' ಎಂದು ಕೂಡಲಸಂಗಮ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.



ಬಸವ ಜಯಮೃತ್ಯುಂಜಯ ಸ್ವಾಮೀಜಿ

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಂದು ಬೆಳಿಗ್ಗೆ 9ಕ್ಕೆ ನಗರದ ನೆಹರೂ ಮೈದಾನದಿಂದ ಚನ್ನಮ್ಮ ವೃತ್ತದವರೆಗೆ ಬೃಹತ್ ರ‍್ಯಾಲಿ ನಡೆಯಲಿದ್ದು, ಚನ್ನಮ್ಮ ವೃತ್ತದಲ್ಲಿ ಎರಡು ತಾಸು ಪ್ರತಿಭಟನೆ ನಡೆಸಲಿದ್ದೇವೆ. ಬೆಳಗಾವಿ, ಗದಗ, ಹಾವೇರಿ, ಧಾರವಾಡ ಜಿಲ್ಲೆಗಳಿಂದ ಸಮಾಜದ ಮುಖಂಡರು, ಜನಪ್ರತಿನಿಧಿಗಳು ಸೇರಿ ಅಂದಾಜು 10 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ' ಎಂದರು.

'ಮೀಸಲಾತಿಗೆ ಆಗ್ರಹಿಸಿ ಅನೇಕ ವರ್ಷಗಳಿಂದ ಹೋರಾಟ ನಡೆಸುತ್ತ ಬಂದಿದ್ದೇವೆ. ಸರ್ಕಾರ ಭರವಸೆ ನೀಡುತ್ತಿದೆಯೇ ಹೊರತು ಬೇಡಿಕೆ ಈಡೇರಿಸುವಲ್ಲಿ ಮುಂದಾಗುತ್ತಿಲ್ಲ' ಎಂದರು.

ಕೆಂಗೇರಿಯ ಮೈಸೂರು ರಸ್ತೆಯಿಂದ ಉಲ್ಲಾಳ ವೃತ್ತದವರೆಗಿನ ವರ್ತುಲ ರಸ್ತೆ

ಸಿದ್ಧಾರೂಢ ಸ್ವಾಮಿ ರಸ್ತೆ: ನಾಮಫಲಕ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿಯ ಮೈಸೂರು ರಸ್ತೆಯಿಂದ ಉಲ್ಲಾಳ ವೃತ್ತದವರೆಗಿನ ವರ್ತುಲ ರಸ್ತೆಗೆ 'ಸಿದ್ಧಾರೂಢ ಸ್ವಾಮಿ ರಸ್ತೆ' ಎಂದು ನಾಮಕರಣ ಮಾಡಲಾಗಿದ್ದು, ಅದರ ನಾಮಫಲಕವನ್ನು ಸೋಮವಾರ ಅನಾವರಣ ಮಾಡಲಾಯಿತು.

ರಾಮೋಹಳ್ಳಿಯ ಸಿದ್ಧಾರೂಢ ಮಿಷನ್ ಅಧ್ಯಕ್ಷ ಡಾ.ಆರೂಢ ಭಾರತೀ ಸ್ವಾಮೀಜಿ, ಧಾರವಾಡದ ಸರ್ವ ಧರ್ಮ ಸಮನ್ವಯ ಪೀಠದ ಸಂಗಮಾನಂದ ಸ್ವಾಮೀಜಿ, ಇಂಡಿಯ ಸಿದ್ಧಾರೂಢ ಮಠದ ಸ್ವರೂಪಾನಂದ ಸ್ವಾಮೀಜಿ, ಆತ್ಮಾನಂದಭಾರತೀ ಸ್ವಾಮೀಜಿ, ದೇನಾ ಭಗತ್ ಗುರೂಜಿ ನೇತೃತ್ವದಲ್ಲಿ ನಾಮಫಲಕ ಅನಾವರಣ ಮಾಡಲಾಯಿತು.



ವಿವಿಧ ಮಠಾಧೀಶರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಸಿದ್ಧಾರೂಢ ಸ್ವಾಮಿ ರಸ್ತೆ'ಯ ನಾಮಫಲಕ ಅನಾವರಣ ಮಾಡಲಾಯಿತು

ಆರೂಢಭಾರತೀ ಸ್ವಾಮೀಜಿ ಮಾತನಾಡಿ, 'ಸಿದ್ಧಾರೂಢರು ಕನ್ನಡ ನಾಡಿನ ಶ್ರೇಷ್ಠ ಸಂತರು. 1836ರಲ್ಲಿ ಬೀದರ್ ಜಿಲ್ಲೆಯ ಚಳಕಾಪುರದಲ್ಲಿ ಹುಟ್ಟಿ, 7ನೇ ವಯಸ್ಸಿನಲ್ಲಿ ಮನೆ ತೊರೆದ ಅವರು ಇಪ್ಪತ್ತು ವರ್ಷಗಳ ಕಾಲ ಅಖಂಡ ಭಾರತವನ್ನು ಕಾಲ್ನಡಿಗೆಯಲ್ಲಿ ಸಂಚರಿಸಿದರು. ಹುಬ್ಬಳ್ಳಿಯಲ್ಲಿ ನೆಲೆ ನಿಂತು ಯಾವುದೇ ಭೇದಭಾವ ಮಾಡದೆ ಸರ್ವಧರ್ಮ ಭಾವೈಕ್ಯ ಸಾರಿದರು' ಎಂದರು.

ಡಾ.ರಾಜಕುಮಾರ್ ಹಾಗೂ ಅವರ ಕುಟುಂಬ ಇವರ ಭಕ್ತರು. ಇಂತಹ ದಾರ್ಶನಿಕರ ಹೆಸರನ್ನು ಈ ರಸ್ತೆಗಿಡುವ ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಸರ್ಕಾರ ಸಿದ್ಧಾರೂಢರ ಹೆಸರನ್ನು ಬೆಂಗಳೂರಿನಲ್ಲಿ ಚಿರಸ್ಥಾಯಿಗೊಳಿಸಿದೆ ಎಂದರು.

ಗಾಯಕ ಶಶಿಧರ ಕೋಟೆ ಮೂಲಕ ರಂಜಿಸಿದರು. ಸ್ನೇಹಜ್ಯೋತಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಟಿ.ಜಿ. ಮೂರ್ತಿ, ಕನ್ನಡ ಹೋರಾಟಗಾರ ಸುರೇಶಗೌಡ, ಅಶೋಕ ಕುಮಾರ್, ಇಂದ್ರಸುಧಾ, ರೇಖಾ ಕೋವಳ್ಳಿ, ಶಂಕರ್, ರಾಜಣ್ಣ, ಸಂಜೀವಪ್ಪ, ಸಿದ್ಧರಾಜು, ಚಂದ್ರು ಉಪಸ್ಥಿತರಿದ್ದರು.

ನೋಂದಣಿ ಅಕ್ರಮ ತಡೆಗೆ ಕ್ರಮ

ಒಂದನೇ ಪುಟದಿಂದ

ಇದಕ್ಕಾಗಿ ₹ 406 ಕೋಟಿ ವೆಚ್ಚದ ಯೋಜನೆಯ ಅನುಷ್ಠಾನಕ್ಕೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಆಸ್ತಿಗಳ ಖರೀದಿಗೆ ಸಂಬಂಧಿಸಿದ ದಾಖಲೆಗಳ ನೋಂದಣಿ ಪ್ರಕ್ರಿಯೆಯಲ್ಲಿ 'ಪ್ಯಾನ್' ಸಂಖ್ಯೆ ನಮೂದಿಸದೇ ತೆರಿಗೆ ವಂಚನೆಗೆ ಸಹಕರಿಸುತ್ತಿರುವ ಆರೋಪದ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು. ಅಕ್ರಮಗಳನ್ನು ತಡೆಯುವುದಕ್ಕಾಗಿ ಪಾರದರ್ಶಕ ವ್ಯವಸ್ಥೆ ರೂಪಿಸಲು ಸರ್ಕಾರ ಮುಂದಾಗಿದೆ. ತಂತ್ರಾಂಶದ ನೆರವಿನಲ್ಲಿ ನೋಂದಣಿ ಪ್ರಕ್ರಿಯೆಯನ್ನು ಇನ್ನೂ ಸರಳೀಕರಣ ಮಾಡಲಾಗುವುದು ಎಂದರು.

₹ 5,000 ಕೋಟಿ ಸಂಗ್ರಹ: 2022–23ನೇ ಆರ್ಥಿಕ ವರ್ಷದ ಮೊದಲ ಮೂರು ತಿಂಗಳ ಅವಧಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಶುಲ್ಕದಿಂದ ₹ 5,000 ಕೋಟಿ ಸಂಗ್ರಹವಾಗಿದೆ. ಇದು ಇಲಾಖೆಯಲ್ಲಿ ಈವರೆಗಿನ ದಾಖಲೆಗಳನ್ನು ಮೀರಿರುವ ವರಮಾನ ಸಂಗ್ರಹ ಎಂದು ಅಶೋಕ ತಿಳಿಸಿದರು.

'ಈ ವರ್ಷ ನೋಂದಣಿ ಮತ್ತು ಮುದ್ರಾಂಕ ಶುಲ್ಕದ ರೂಪದಲ್ಲಿ ₹ 14,000 ವರಮಾನ ಸಂಗ್ರಹಿಸುವ ಗುರಿ ಇದೆ. ಮೊದಲ ಮೂರು ತಿಂಗಳಲ್ಲೇ ಗುರಿಗಿಂತ ₹ 1,000 ಕೋಟಿ ಹೆಚ್ಚು ಸಂಗ್ರಹವಾಗಿದೆ. ಈ ಬಾರಿ ಗುರಿಗಿಂತಲೂ ಹೆಚ್ಚಿನ ವರಮಾನ ಸಂಗ್ರಹ ಆಗಲಿದೆ' ಎಂದರು.

'ನಾನು ರಾಜಕೀಯಕ್ಕೆ ಬರಲು ಆದಿಚುಂಚನಗಿರಿ ಶ್ರೀ ಕಾರಣ'

ಹಾವೇರಿ: 'ನಾನು ರಾಜಕೀಯಕ್ಕೆ ಬರುವುದಕ್ಕೆ ಕಾರಣ ಮುಸ್ಲಿಂ ಗುರುಗಳಲ್ಲ. ಆದಿಚುಂಚನಗಿರಿ ಸ್ವಾಮಿಗಳು. ನಾನು 4 ಬಾರಿ ಶಾಸಕ, 2 ಬಾರಿ ಮಂತ್ರಿಯಾಗಿದ್ದೇನೆ. ಒಕ್ಕಲಿಗರ ಮಠದಲ್ಲಿ ಬೆಳೆದ ಹುಡುಗ ನಾನು' ಎಂದು ಶಾಸಕ ಜಮೀರ್ ಅಹಮದ್ ಖಾನ್ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, 'ಆದಿಚುಂಚನಗಿರಿ ಸ್ವಾಮೀಜಿಗಳ ಆದೇಶದ ಮೇರೆಗೆ ನಾನು ಜೆಡಿಎಸ್‌ಗೆ ಹೋಗಿದ್ದು. ಸ್ವಾಮೀಜಿ ಹಾಗೂ ಒಕ್ಕಲಿಗರ ಜೊತೆ ನನಗೆ ಎಂಥ ಬಾಂಧವ್ಯವಿದೆ ಎಂಬುದನ್ನು ಆ ಮಠದಲ್ಲಿ ಹೋಗಿ ಕೇಳಿ ಗೊತ್ತಾಗುತ್ತೆ' ಎಂದರು.

'ನಾನು ಕಾಂಗ್ರೆಸ್ ಪಕ್ಷದಲ್ಲಿ ಇದ್ದೇನೆ. ಆದರೂ ನನ್ನ ರಾಜಕೀಯ ಗುರುಗಳು ದೇವೇಗೌಡರು. 2005ರಲ್ಲಿ ನನ್ನನ್ನು ಗೆಲ್ಲಿಸಿ ಈ ಮಟ್ಟಕ್ಕೆ ಬೆಳೆಸಿದ್ದಾರೆ. ದೇವೇಗೌಡರಿಂದಲೇ ನಾನು ಈ ಮಟ್ಟಕ್ಕೆ ಬೆಳೆದಿರೋದು. ಜಾತಿಗಳನ್ನು ಕೇವಲವಾಗಿ ನೋಡ್ತಿರೋದು ಬಿಜೆಪಿಯವರು' ಎನ್ನುವ ಮೂಲಕ ಅಶೋಕ ಹೇಳಿಕೆಗೂ ತಿರುಗೇಟು ನೀಡಿದರು.

ಬಿತ್ತನೆ ಚುರುಕು, ಹೆಚ್ಚಿದ ಬೇಡಿಕೆ: ಸಕಾಲಕ್ಕೆ ದೊರೆಯದೆ ಕೃಷಿಕರ ಅಳಲು

ರಸಗೊಬ್ಬರಕ್ಕೆ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಗಾರಿನಲ್ಲಿ ರಾಜ್ಯದ ಬಹುತೇಕ ಕಡೆಗಳಲ್ಲಿ ಉತ್ತಮ ಮಳೆಯಾಗಿ ಕೃಷಿ ಚಟುವಟಿಕೆ ಚುರುಕು ಪಡೆದುಕೊಂಡಿದೆ. ಆದರೆ, ಬೇಡಿಕೆಗೆ ತಕ್ಕಷ್ಟು ಯೂರಿಯಾ ಮತ್ತು ಡಿಎಪಿ ರಸಗೊಬ್ಬರ ಸಕಾಲಕ್ಕೆ ದೊರೆಯದೆ ಅನ್ನದಾತರು ಪರದಾಡುತ್ತಿದ್ದಾರೆ.

ಬಿತ್ತನೆ ಸಮಯವಾದ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಸಹಜವಾಗಿಯೇ ರಸಗೊಬ್ಬರಕ್ಕೆ ಬೇಡಿಕೆ ಹೆಚ್ಚು. ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗಿನ ಪ್ರಸಕ್ತ ಮುಂಗಾರು ಹಂಗಾಮಿಗೆ ರಾಜ್ಯದಲ್ಲಿ 26.76 ಲಕ್ಷ ಟನ್‌ಗಳಷ್ಟು ಬೇಡಿಕೆ ಸೃಷ್ಟಿಯಾಗಬಹುದು ಎಂದು ಕೃಷಿ ಇಲಾಖೆ ಅಂದಾಜಿಸಿತ್ತು.

ಭತ್ತ, ರಾಗಿ, ಜೋಳ ಸೇರಿದಂತೆ ವಿವಿಧ ಬೆಳೆಗಳ ಬಿತ್ತನೆ ನಡೆಯುತ್ತಿದೆ. ಈ ಸಮಯದಲ್ಲೇ ದಿನೇ ದಿನೇ ರಸಗೊಬ್ಬರ ಸಮಸ್ಯೆ ಹೆಚ್ಚುತ್ತಿದ್ದು, ರೈತರು ಅಂಗಡಿಗಳ ಎದುರು ಕಾದು ನಿಲ್ಲಬೇಕಾದ ಸ್ಥಿತಿ ಸೃಷ್ಟಿಯಾಗುತ್ತಿದೆ. ಹಲವೆಡೆ ಪೂರೈಕೆಯಾದ ತಕ್ಷಣವೇ ಖಾಲಿಯಾಗುತ್ತಿದೆ. ಕೆಲವೆಡೆ ಕೃತಕ ಅಭಾವ ಸೃಷ್ಟಿಸಲಾಗುತ್ತಿದೆ. ನಿಗದಿತ ಬೆಲೆಗಿಂತ ಹೆಚ್ಚು ಹಣ ಪಡೆದು ಮಾರಾಟ ಮಾಡುತ್ತಿದ್ದಾರೆ. ಅನಿವಾರ್ಯ ಪರಿಸ್ಥಿತಿ ಇರುವುದರಿಂದ ಹೆಚ್ಚು ಹಣ ನೀಡುವುದು ಅನಿವಾರ್ಯ. ಕೆಲವು ಜಿಲ್ಲೆಗಳಲ್ಲಿ ರಸಗೊಬ್ಬರಕ್ಕೆ ನೂಕುನುಗ್ಗಲು ಉಂಟಾಗುತ್ತಿದೆ ಎಂದು ರೈತ ಸಂಘದ ಮುಖಂಡರು ದೂರಿದ್ದಾರೆ.

'ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ರಸಗೊಬ್ಬರ ಕೊರತೆಯಾಗಿದೆ. ಭತ್ತ ಮತ್ತು ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಯೂರಿಯಾಗೆ ಹಾಗೂ ರಾಗಿ, ಹತ್ತಿ, ಜೋಳ, ತಂಬಾಕು ಬೆಳೆಯುವ ಪ್ರದೇಶಗಳಲ್ಲಿ ಡಿಎಪಿಗೆ ಬೇಡಿಕೆ ಹೆಚ್ಚಾಗಿದೆ. ಸರ್ಕಾರ ರಸಗೊಬ್ಬರ ಪೂರೈಕೆಗೆ ಸರಿಯಾದ ಕ್ರಮಗಳನ್ನು ಕೈಗೊಂಡಿದ್ದರೆ ಈ ಪರಿಸ್ಥಿತಿ ಸೃಷ್ಟಿಯಾಗುತ್ತಿರಲಿಲ್ಲ' ಎಂದು ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅಸಮಾಧಾನ ವ್ಯಕ್ತಪಡಿಸಿದರು.

'ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರ ಪೂರೈಕೆಯಾಗುತ್ತಿಲ್ಲ. 200 ಚೀಲ ರಸಗೊಬ್ಬರಕ್ಕೆ 300ಕ್ಕೂ ಹೆಚ್ಚು ರೈತರು ಕಾಯುತ್ತಿರುತ್ತಾರೆ. ಕೆಲವರಿಗೆ ಮಾತ್ರ ದೊರೆಯುತ್ತಿದೆ. ಉಳಿದವರು ಬರಿಗೈಯಲ್ಲಿ ಹೋಗಬೇಕಾಗುತ್ತದೆ. ಪ್ರತಿ ವರ್ಷವೂ ಇದೇ ಸಮಸ್ಯೆಯಾಗುತ್ತಿದೆ' ಎಂದು ರೈತ ಸಂಘದ ದೊಡ್ಡಬಳ್ಳಾಪುರ ತಾಲ್ಲೂಕು ಘಟಕದ ಅಧ್ಯಕ್ಷ ಹನುಮೇಗೌಡ ದೂರಿದರು.

'ಸಂಗ್ರಹ ಇದೆ, ರೈತರು ಆತಂಕಗೊಳ್ಳುವ ಅಗತ್ಯವಿಲ್ಲ'

'ಎಲ್ಲೆಡೆ ಮಳೆಯಾಗಿರುವುದರಿಂದ ಸಹಜವಾಗಿಯೇ ರಸಗೊಬ್ಬರಕ್ಕೆ ಬೇಡಿಕೆ ಹೆಚ್ಚಾಗಿದೆ. ಆದರೆ, ರೈತರು ಆತಂಕಪಡುವ ಅಗತ್ಯವಿಲ್ಲ. ಸಾಕಷ್ಟು ಸಂಗ್ರಹ ಲಭ್ಯವಿದೆ. ರಾಜ್ಯಕ್ಕೆ ರಸಗೊಬ್ಬರ ನಿಯಮಿತವಾಗಿ ಪೂರೈಕೆಯಾಗುತ್ತಿದೆ' ಎಂದು ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಕಳಸದ ಅವರು ತಿಳಿಸಿದರು.

'ರಾಜ್ಯದಲ್ಲಿನ ಒಟ್ಟು 83 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಇದುವರೆಗೆ ಶೇ 68ರಷ್ಟು ಬಿತ್ತನೆಯಾಗಿದೆ. ಇನ್ನೂ ಆಗಸ್ಟ್ 15ರವರೆಗೆ ಕಾಲಾವಕಾಶ ಇದೆ. ರಸಗೊಬ್ಬರವನ್ನು ಸಕಾಲಕ್ಕೆ ರೈತರಿಗೆ ತಲುಪಿಸಲು ಯಾವುದೇ ರೀತಿಯ ತೊಡಕುಗಳಾಗದಂತೆ ಎಲ್ಲ ರೀತಿಯ ವ್ಯವಸ್ಥೆ ಮಾಡಲಾಗಿದೆ. ಹೀಗಾಗಿ, ಕೊರತೆಯಾಗುವ ಆತಂಕದಿಂದ ರಸಗೊಬ್ಬರ ಸಂಗ್ರಹಿಸಿಟ್ಟು ಕೊಳ್ಳುವ ಅಗತ್ಯವೇ ಇಲ್ಲ. ಜತೆಗೆ, ನ್ಯಾನೊ ಯೂರಿಯಾ ಬಳಸುವಂತೆ ರೈತರಿಗೆ ಸಲಹೆ ನೀಡಲಾಗಿದೆ' ಎಂದು ವಿವರಿಸಿದರು.

15 ಲಕ್ಷ ಬಾಟಲ್ ನ್ಯಾನೊ ಯೂರಿಯಾ ಮಾರಾಟ

ರಾಜ್ಯದಲ್ಲಿ ಏಪ್ರಿಲ್‌ನಿಂದ ಇಲ್ಲಿಯವರೆಗೆ 15 ಲಕ್ಷ ಬಾಟಲ್ ನ್ಯಾನೊ ಯೂರಿಯಾ ಮಾರಾಟ ಮಾಡಲಾಗಿದೆ. 'ನ್ಯಾನೊ ಯೂರಿಯಾಗೆ ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. 500 ಮಿಲಿ ಲೀಟರ್ ಬಾಟಲ್ ನ್ಯಾನೊ ಯೂರಿಯಾ 45 ಕೆ.ಜಿ. ತೂಕದ ಒಂದು ಚೀಲ ಯೂರಿಯಾಗೆ ಸಮನಾಗಿದೆ' ಎಂದು ಇಫ್ಕೊ ಮಾರುಕಟ್ಟೆ ವ್ಯವಸ್ಥಾಪಕ ಡಾ.ಸಿ. ನಾರಾಯಣಸ್ವಾಮಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಪೌಲ್ ಜಾಮೀನು ಅರ್ಜಿ ವಜಾ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್ಐ) ನೇಮಕಾತಿ ಹಗರಣದ ಪ್ರಮುಖ ಆರೋಪಿಯಾದ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್‌ಗೆ ಜಾಮೀನು ನೀಡಲು ಒಂದನೇ ಎಸಿಎಂಎಂ ನ್ಯಾಯಾಲಯ ನಿರಾಕರಿಸಿದೆ.

ಜಾಮೀನು ಕೋರಿ ಅಮ್ರಿತ್ ಪೌಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಧೀಶ ಆನಂದ ಟಿ. ಚೌಹಾಣ್ ಸೋಮವಾರ ವಜಾಗೊಳಿಸಿ ಆದೇಶಿಸಿದ್ದಾರೆ. 'ಗಂಭೀರ ಸ್ವರೂಪದ ಈ ಪ್ರಕರಣ ಇನ್ನೂ ತನಿಖಾ ಹಂತದಲ್ಲಿರುವಾಗ ಜಾಮೀನು ನೀಡುವುದು ಉಚಿತವಲ್ಲ' ಎಂಬ ಪ್ರಾಸಿಕ್ಯೂಷನ್ ವಾದವನ್ನು ಮನ್ನಿಸಿದ್ದಾರೆ. ಪಿಎಸ್ಐ ನೇಮಕಾತಿ ವಿಭಾಗದ ಎಡಿಜಿಪಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಮ್ರಿತ್ ಪೌಲ್, ಹಗರಣದ 35ನೇ ಆರೋಪಿಯಾಗಿದ್ದು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ವಿಶೇಷ ಪ್ರಾಸಿಕ್ಯೂಟರ್ ಆದ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್, 'ಆರೋಪಿ ಪೌಲ್ ಎಡಿಜಿಪಿ ದರ್ಜೆಯ ಉನ್ನತ ಅಧಿಕಾರಿಯಾಗಿದ್ದು, ಇಲಾಖೆಯ ಘನತೆಗೆ ಕುಂದು ತರುವಂತಹ ಕೃತ್ಯ ಎಸಗಿದ್ದಾರೆ. ಇಂತಹವರು ಜಾಮೀನು ಪಡೆದು ಹೊರಗೆ ಹೋದಲ್ಲಿ ಸಮಾಜಕ್ಕೆ ತಪ್ಪು ಸಂದೇಶ ನೀಡಿದಂತಾಗುತ್ತದೆ' ಎಂದು ಆಕ್ಷೇಪಣೆ ಸಲ್ಲಿಸಿದ್ದರು.



ಕಲುಷಿತ ನೀರು ಕುಡಿದು ಬಾಲಕಿ ಸಾವು

ಕಂಪ್ಲಿ/ಬಳ್ಳಾರಿ: ಕಂಪ್ಲಿ ತಾಲ್ಲೂಕಿನ ಹಂಪಾದೇವನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೋನಾಳು ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಬಾಲಕಿಯೊಬ್ಬಳು ಮೃತಪಟ್ಟು, 20 ಮಂದಿ ಅಸ್ವಸ್ಥರಾಗಿದ್ದಾರೆ.

ಐದನೇ ತರಗತಿ ವಿದ್ಯಾರ್ಥಿನಿ ಸುಕನ್ಯಾ (11) ಮೃತಪಟ್ಟ ಬಾಲಕಿ. ಸೋಮವಾರ ಬೆಳಿಗ್ಗೆ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾಳೆ. ಗೋನಾಳು ಗ್ರಾಮದ ಕೆಲವರಿಗೆ ಶನಿವಾರ ಕಲುಷಿತ ನೀರು ಕುಡಿದ ಬಳಿಕ ವಾಂತಿ– ಭೇದಿ ಕಾಣಿಸಿಕೊಂಡಿತು. ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈ ಬಾಲಕಿಗೂ ಚಿಕಿತ್ಸೆ ನೀಡಿ ಭಾನುವಾರ ಮನೆಗೆ ಕಳುಹಿಸಲಾಗಿತ್ತು. ತಡರಾತ್ರಿ ಈಕೆಯ ಆರೋಗ್ಯದಲ್ಲಿ ಏರುಪೇರಾಗಿತ್ತು

ಒಕ್ಕಲಿಗ ವಿವಾದ– ಕಂದಾಯ ಸಚಿವ ಆರ್. ಅಶೋಕ ಹೇಳಿಕೆ

'ಲಕ್ಷ್ಮಣ ರೇಖೆಯನ್ನು ದಾಟಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದ ಪ್ರಕಾರವೇ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಬೇಕು. ಜಾತಿಗೊಬ್ಬ ಮುಖ್ಯಮಂತ್ರಿ ಯನ್ನು ಆಯ್ಕೆಮಾಡಲು ಸಾಧ್ಯವಿಲ್ಲ. ಒಕ್ಕಲಿಗರ ವಿಚಾರದಲ್ಲಿ ಯಾರೂ ಲಕ್ಷ್ಮಣ ರೇಖೆಯನ್ನು ದಾಟುವುದು ಬೇಡ' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿಗಾಗಿ ಜಾತಿ ಮುಂದಿಡುತ್ತಿದ್ದಾರೆ. ಸಿದ್ದರಾಮಯ್ಯ, ಖರ್ಗೆ, ಡಿ.ಕೆ. ಶಿವಕುಮಾರ್, ಎಂ.ಬಿ. ಪಾಟೀಲ ಒಂದೊಂದು ಜಾತಿ ಮುಂದಿಟ್ಟುಕೊಂಡು ಹೋಗುತ್ತಿದ್ದಾರೆ. ಒಕ್ಕಲಿಗರ ಜಾತಿ ಬಗ್ಗೆ ಮಾತನಾಡುತ್ತಿದ್ದಾರೆ. ನಾನೂ ಒಕ್ಕಲಿಗ. ನಮ್ಮ ಜಾತಿಗೆ ಬೆಲೆ ಇಲ್ಲವೆ? ಕೆಂಪೇಗೌಡ, ಕುವೆಂಪು ಎಂದಾದರೂ ಜಾತಿ ಆಧಾರದಲ್ಲಿ ಕೆಲಸ ಮಾಡಿದ್ದರೆ' ಎಂದು ಪ್ರಶ್ನಿಸಿದರು.

'ಲಿಂಗಾಯತ, ಗೌಡ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಎಂದು ಜಾತಿ ಹೆಸರಿನಲ್ಲಿ ಮಾತನಾಡುವುದು ಬೇಡ. ಜನರು ಯಾರನ್ನು ಇಷ್ಟಪಡುತ್ತಾರೋ ಅವರು ಮುಖ್ಯಮಂತ್ರಿ ಆಗುತ್ತಾರೆ ' ಎಂದರು. 'ಕಾಂಗ್ರೆಸ್‌ನ ಒಳಗಿನ ಜಗಳ ಈಗ ಬೀದಿ ರಂಪ ಆಗಿದೆ. ಮನೆಯೊಳಗೆ ತೀರ್ಮಾನ ಆಗಬೇಕಾದ ವಿಚಾರಗಳು ಬೀದಿಗೆ ಬಂದಿವೆ. ಡಿ.ಕೆ. ಶಿವಕುಮಾರ್ ಪರ ಅವರೇ ಬ್ಯಾಟ್ ಬೀಸುತ್ತಿದ್ದಾರೆ' ಎಂದು ಅವರು ಹೇಳಿದರು.

ಕುರ್ಚಿಗೆ ಕರ್ಚೀಫ್ ಹಾಕಿದರೆ ಮತ ಬರಲ್ಲ– ಪ್ರಿಯಾಂಕ್

'ಮುಖ್ಯಮಂತ್ರಿ ಕುರ್ಚಿಗೆ ಕರ್ಚೀಫ್ ಹಾಕಿದರೆ ಜನ ಮತ ಹಾಕಲ್ಲ. ಕೆಲಸ ಮಾಡಿದರೆ ಮಾತ್ರ ಮತ ಹಾಕುತ್ತಾರೆ. ಈಗಲೇ ಮುಖ್ಯಮಂತ್ರಿ ವಿಚಾರವಾಗಿ ಯಾರೂ ಮಾತನಾಡುವುದು ಸರಿಯಲ್ಲ' ಎಂದು ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ಹೇಳಿದರು.

ಮುಖ್ಯಮಂತ್ರಿ ಸ್ಥಾನದ ಬಗ್ಗೆ ಜಮೀರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ತಮ್ಮ ಅಭಿಪ್ರಾಯವನ್ನು ಎಲ್ಲಿ ವ್ಯಕ್ತಪಡಿಸಬೇಕೊ ಅಲ್ಲಿ ಹೇಳಬೇಕು. ಸಾರ್ವಜನಿಕವಾಗಿ ವ್ಯಕ್ತಪಡಿಸುವುದರಿಂದ ಪಕ್ಷಕ್ಕೆ ಮುಜುಗರವಾಗಲಿದೆ' ಎಂದು ಹೇಳಿದರು.

'ನಮ್ಮ ನಮ್ಮ ಸಮುದಾಯಗಳ ಮುಂದೆ ಬೆಂಬಲಿಸಿ ಎಂದು ಮನವಿ ಮಾಡುವುದು ಸಹಜ. ಸಮುದಾಯದ ಬೆಂಬಲ ಕೇಳುವುದರಲ್ಲಿ ತಪ್ಪಿಲ್ಲ' ಎಂದರು.

ಕೆ.ಎನ್. ರಾಜಣ್ಣ ಮಾತನಾಡಿ, 'ಮುಖ್ಯಮಂತ್ರಿ ಯಾರು ಎನ್ನುವುದನ್ನು ಹೈಕಮಾಂಡ್ ತೀರ್ಮಾನಿಸಲಿದೆ. ಬೇರೆ ಯಾರೇ ಹೇಳಿಕೆ ಕೊಟ್ಟರೂ ಪ್ರತಿಕ್ರಿಯೆ ನೀಡುವ ಅವಶ್ಯಕತೆ ಇಲ್ಲ. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಗಳು ಇಬ್ಬರೇ ಅಲ್ಲ. ಖರ್ಗೆ, ಪರಮೇಶ್ವರ, ಎಂ.ಬಿ. ಪಾಟೀಲ ಹೆಸರು ಕೂಡ ಕೇಳಿಬರುತ್ತಿಲ್ಲವೇ? ಜನ ಕೂಗುವುದಕ್ಕೆ ನಾವು ಏನು ಮಾಡಲು ಆಗುತ್ತದೆ' ಎಂದರು.

'ಜಮೀರ್ ಯಾಕೆ ಹೇಳಿದರೋ ಗೊತ್ತಿಲ್ಲ'

'ಒಕ್ಕಲಿಗ ಸಮುದಾಯದ ಬಗ್ಗೆ ಜಮೀರ್ ಮಾತನಾಡಬಾರದಿತ್ತು. ಒಕ್ಕಲಿಗ ಸಮುದಾಯಕ್ಕಿಂತಲೂ ಮುಸ್ಲಿಂ ಸಮುದಾಯ ದೊಡ್ಡದು ಎಂದು ಅವರು ಯಾಕೆ ಹೇಳಿದರೊ ಗೊತ್ತಿಲ್ಲ. ಮಾತನಾಡುವ ಭರದಲ್ಲಿ ಆವೇಶದಿಂದ ಹೇಳಿರಬಹುದು. ಇದರಿಂದ ಸ್ವಾಮೀಜಿಗಳು ಬೇಸರ ಮಾಡಿಕೊಂಡಿರುವ ವಿಷಯ ನನಗೆ ಗೊತ್ತಿಲ್ಲ' ಎಂದು ಎನ್. ಚೆಲುವರಾಯಸ್ವಾಮಿ ಅವರು ಹೇಳಿದರು.

ಸೂಲಗಿತ್ತಿ ಸುಲ್ತಾನ್‌ಬಿ ನಿಧನ

ಪ್ರಜಾವಾಣಿ ವಾರ್ತೆ



ಜಗಳೂರು: ಸೂಲಗಿತ್ತಿ ಸೇವೆ ಸಲ್ಲಿಸುತ್ತಿದ್ದ, ಜಗಳೂರು ಗೊಲ್ಲರಹಟ್ಟಿ ಗ್ರಾಮದ ಸುಲ್ತಾನ್‌ಬಿ (85) ಸೋಮವಾರ ನಿಧನರಾದರು. ಅವರು ಅನಾರೋಗ್ಯದಿಂದ ಬಳಲುತ್ತಿದ್ದರು.

ಆರು ದಶಕಗಳಿಂದ ಗ್ರಾಮೀಣ ಭಾಗದಲ್ಲಿ ಸಾವಿರಾರು ಹೆರಿಗೆ ಮಾಡಿಸುವ ನಿಸ್ವಾರ್ಥ ಸೇವೆಯಿಂದ ಹೆಸರಾಗಿದ್ದರು. ಅವರ ಸೇವೆ ಪರಿಗಣಿಸಿ ರಾಜ್ಯ ಸರ್ಕಾರವು 2021ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು. ಪುತ್ರ, ಪುತ್ರಿ ಹಾಗೂ ಪತಿಯ ಅಗಲಿಕೆಯ ಬಳಿಕ ಇವರು ಗ್ರಾಮದಲ್ಲಿ ಒಂಟಿಜೀವನ ನಡೆಸುತ್ತಿದ್ದರು.

ಸೋಮವಾರ ಸಂಜೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಜಮೀರ್‌ಗೆ ಹೈಕಮಾಂಡ್ ಎಚ್ಚರಿಕೆ

ಒಂದನೇ ಪುಟದಿಂದ

ಚುನಾವಣೆ ಹೊಸ್ತಿಲಲ್ಲಿರುವಾಗಲೇ ಮುಖ್ಯಮಂತ್ರಿ ಗಾದಿ ವಿಚಾರದಲ್ಲಿ ಸಿದ್ದರಾಮಯ್ಯ ಪರ ಜಮೀರ್ ನೀಡುತ್ತಿರುವ ಹೇಳಿಕೆಗಳಿಂದ ಪಕ್ಷದಲ್ಲಿ ಬಣ ರಾಜಕೀಯ ತೀವ್ರಗೊಳ್ಳುವ ಮುನ್ಸೂಚನೆ ಸಿಗುತ್ತಿದ್ದಂತೆ, ಕಾಂಗ್ರೆಸ್ ಹೈಕಮಾಂಡ್ ಎಚ್ಚೆತ್ತುಕೊಂಡು, ಈ ಎಚ್ಚರಿಕೆ ನೀಡಿದೆ.

ತಮ್ಮ ಸ್ವ ಕ್ಷೇತ್ರ ಚಾಮರಾಜಪೇಟೆಯಲ್ಲಿ ನಡೆದ ಕಾರ್ಯಕ್ರಮಗಳು ಸೇರಿದಂತೆ, ಸಂದರ್ಭ ಸಿಕ್ಕಾಗಲೆಲ್ಲ 'ಸಿದ್ದರಾಮಯ್ಯ ಅವರೇ ಮುಂದಿನ ಮುಖ್ಯಮಂತ್ರಿ' ಎಂದು ಜಮೀರ್ ಬಹಿರಂಗವಾಗಿ ಹೇಳುತ್ತಲೇ ಬಂದಿರುವುದು ಕಾಂಗ್ರೆಸ್‌ನ ರಾಜ್ಯ ಘಟಕದಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

ಒಕ್ಕಲಿಗರ ಸಭೆಯಲ್ಲಿ ಇತ್ತೀಚೆಗೆ ಮಾತನಾಡಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಎಲ್ಲರಿಗೂ ಅವಕಾಶ ನೀಡಿದ್ದೀರಿ, ನನಗೂ ಒಂದು ಅವಕಾಶ ನೀಡಿ' ಎಂದಿದ್ದರು. ಶಿವಕುಮಾರ್ ಅವರ ಈ ಮಾತಿಗೆ ತಿರುಗೇಟು ಎಂಬಂತೆ ಮಾತನಾಡಿದ್ದ ಜಮೀರ್, 'ಸಿದ್ದರಾಮಯ್ಯ ಅವರೇ ಮತ್ತೆ ರಾಜ್ಯದ ಮುಖ್ಯಮಂತ್ರಿ ಆಗಬೇಕು ಎನ್ನುವುದು ಜನರ ಆಸೆ' ಎಂದಿದ್ದರು.

'ಒಂದೇ ಸಮುದಾಯ ನಂಬಿಕೊಂಡು ಯಾರೂ ಮುಖ್ಯ ಮಂತ್ರಿ ಆಗಲು ಸಾಧ್ಯವಿಲ್ಲ. ಮುಖ್ಯ ಮಂತ್ರಿ ಆಗುವ ಆಸೆ ನನಗೂ ಇದೆ ಸಮುದಾಯದ ಆಧಾರದಲ್ಲಿ ಮುಖ್ಯಮಂತ್ರಿ ಸ್ಥಾನ ನೀಡುವುದಾದರೆ ನಾನೂ ಒಬ್ಬ ಆಕಾಂಕ್ಷಿ. ಒಕ್ಕಲಿಗ ಸಮುದಾಯಕ್ಕಿಂತ ನಮ್ಮ ಸಮುದಾಯ ದೊಡ್ಡದಿದೆ' ಎಂದಿದ್ದರು.

ಸಿಆರ್‌ಜೆಡ್ ವಿಸ್ತರಣೆ: ರಾಜ್ಯದ ಒತ್ತಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಕರಾವಳಿ ನಿಯಂತ್ರಣಾ ವಲಯವನ್ನು (ಸಿಆರ್‌ಜೆಡ್) ವಿಸ್ತರಣೆ ಮಾಡಲು ಪರಿಸರ ಸಚಿವಾಲಯದ ಚೆನ್ನೈನ ಪ್ರಾದೇಶಿಕ ಕಚೇರಿಯಿಂದ ಅನುಮತಿ ದೊರೆತಿದ್ದು, ಕೇಂದ್ರ ಪರಿಸರ ಸಚಿವಾಲಯದ ಅನುಮೋದನೆ ಸಿಕ್ಕಿದರೆ ಕರಾವಳಿ ಪ್ರದೇಶ ಸಮಗ್ರ ಅಭಿವೃದ್ಧಿ ಹೊಂದಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೇಂದ್ರ ಸಚಿವರನ್ನು ಭೇಟಿ ಮಾಡಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಗೋವಾ ಹಾಗೂ ಕೇರಳ ರಾಜ್ಯಗಳಲ್ಲಿ ಸಿಆರ್‌ಜೆಡ್ ವಿಸ್ತರಣೆಗೆ ಅನುಮತಿ ನೀಡಿರುವುದರಿಂದ ಹೋಟೆಲ್ ಉದ್ಯಮ, ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲವಾಗಿದೆ. ಇದೇ ರೀತಿ ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಸಿಆರ್‌ಜೆಡ್ ವಿಸ್ತರಣೆಗೆ ಗಂಭೀರ ಪ್ರಯತ್ನಗಳನ್ನು ಮಾಡಲಾಗಿದ್ದು, ಚೆನ್ನೈನ ಪ್ರಾದೇಶಿಕ ಕಚೇರಿಯಿಂದ ಅನುಮತಿ ದೊರೆತಿದೆ. ಇದರಿಂದ ಕರ್ನಾಟಕದ 330 ಕಿ.ಮೀ. ಉದ್ದದ ಕರಾವಳಿ ಪ್ರದೇಶದ ಅಭಿವೃದ್ಧಿಯ ಜೊತೆ, ಆರ್ಥಿಕತೆ, ಪ್ರವಾಸೋದ್ಯಮ, ಮೀನುಗಾರಿಕೆ ಅಭಿವೃದ್ಧಿಗೊಳ್ಳಲಿದೆ' ಎಂದರು.

ಉತ್ತರ ಕರ್ನಾಟಕದಲ್ಲಿ ಐದು ವರ್ತುಲ ರಸ್ತೆ: ರಾಯಚೂರು, ಕೊಪ್ಪಳ, ಕಲಬುರ್ಗಿ, ಬೆಳಗಾವಿ ಹಾಗೂ ಗದಗ ನಗರಗಳಲ್ಲಿ ವರ್ತುಲ ರಸ್ತೆಗಳ ನಿರ್ಮಾಣಕ್ಕೆ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರ ಜತೆಗೆ ಸಮಾಲೋಚನೆ ನಡೆಸಲಾಗಿದೆ. ಈ ಯೋಜನೆಗೆ ಸಚಿವರು ಅನುಮೋದನೆ ನೀಡಿದ್ದಾರೆ ಎಂದರು.

'ಕೇಂದ್ರ ಬಂದರು ಮತ್ತು ಜಲಸಾರಿಗೆ ಸಚಿವರನ್ನು ಭೇಟಿಯಾಗಿ ರಾಜ್ಯದ ಹಲವಾರು ಬಾಕಿ ಇದ್ದ ಪ್ರಸ್ತಾವನೆಗಳ ಮಂಜೂರಾತಿ ಬಗ್ಗೆ ಚರ್ಚಿಸಲಾಗಿದೆ. ₹1800 ಕೋಟಿ ಮೊತ್ತದ ಒಟ್ಟು 27 ಯೋಜನೆಗಳನ್ನು ಸಾಗರಮಾಲಾ ಎರಡನೇ ಹಂತದ ಯೋಜನೆಯಡಿ ಜಾರಿಗೊಳಿಸಲಾಗುತ್ತದೆ. ಇದರಲ್ಲಿ 10 ಯೋಜನೆಗಳಿಗೆ ಮಂಜೂರಾತಿ ಸಿಕ್ಕಿದೆ. 10 ಯೋಜನೆಗಳಿಗೆ ಕೇಂದ್ರ ಸಚಿವರು ಸ್ಪಷ್ಟೀಕರಣ ಕೇಳಿದ್ದಾರೆ. ಕೆಲವು ಪ್ರಸ್ತಾವನೆಗಳನ್ನು ಬದಲಾವಣೆ ಮಾಡಿ ಕಳುಹಿಸಲು ಸೂಚಿಸಿದ್ದಾರೆ' ಎಂದು ಹೇಳಿದರು.



ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಅವರಿಗೆ ಬಸವರಾಜ ಬೊಮ್ಮಾಯಿ ಮನವಿ ಸಲ್ಲಿಸಿದರು. ಸಂಸದ ಬಿ.ವೈ.ರಾಘವೇಂದ್ರ, ಶಾಸಕ ಹರತಾಳು ಹಾಲಪ್ಪ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಡಿ.ಎನ್. ಜೀವರಾಜ್, ಗೃಹ ಸಚಿವ ಆರಗ ಜ್ಞಾನೇಂದ್ರ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಸಂಸದ ನಳಿನ್ ಕುಮಾರ್ ಕಟೀಲು, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಸಂಸದ ಪ್ರತಾಪ್ ಸಿಂಹ ಇದ್ದಾರೆ

ಕಸ್ತೂರಿರಂಗನ್ ವರದಿ: ಉನ್ನತ ಸಮಿತಿ ರಚನೆ

ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಕರ್ನಾಟಕದ ನಿಯೋಗ ಭೇಟಿ ಮಾಡಿ ಕಸ್ತೂರಿ ರಂಗನ್ ವರದಿ ಬಗ್ಗೆ ನಿಲುವನ್ನು ತಿಳಿಸಿತು.

'ಮಾಧವ ಗಾಡ್ಗೀಳ್ ಸಮಿತಿಯನ್ನು ಎಲ್ಲ ರಾಜ್ಯಗಳೂ ವಿರೋಧಿಸಿದ್ದವು. ನಂತರ ಕಸ್ತೂರಿ ರಂಗನ್ ಸಮಿತಿ ರಚಿಸಲಾಯಿತು. ಈ ಸಮಿತಿಯು ಯಾವುದೇ ಭೂ ಸಮೀಕ್ಷೆ ಮಾಡದೇ, ಕೇವಲ ಸ್ಯಾಟಲೈಟ್ ಸಮೀಕ್ಷೆ ನಡೆಸಿ ಹಸಿರು ಪ್ರದೇಶಗಳನ್ನು ಪರಿಸರ ಸೂಕ್ಷ್ಮ ವಲಯವೆಂದು ಘೋಷಿಸಲು ಶಿಫಾರಸು ಮಾಡಿದೆ.

ಪಶ್ಚಿಮ ಘಟ್ಟದಲ್ಲಿ ಕಾಫಿ, ಅಡಿಕೆ , ತೆಂಗು, ರಬ್ಬರ್ ತೋಟಗಳಿದ್ದು, ಅಲ್ಲಿಯ ಜನ ಹಸಿರನ್ನು ಉಳಿಸಿ ಬೆಳೆಸಿದ್ದಾರೆ. ಆದ್ದರಿಂದ ಈ ಪ್ರದೇಶದ ಭೂಮಿ ಸಮೀಕ್ಷೆ ನಡೆಸದೇ ವಾಸ್ತವಾಂಶ ತಿಳಿಯುವುದಿಲ್ಲ ಎಂಬುದು ರಾಜ್ಯದ ವಾದ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ರಾಜ್ಯದ ಜೀವ ವೈವಿಧ್ಯ ನೀತಿಯ ಪ್ರಕಾರ, ವರದಿ ತಯಾರಿಸುವಾಗ ಸ್ಥಳೀಯ ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿಯ ಅಭಿಪ್ರಾಯ ಪಡೆಯಬೇಕಿತ್ತು. ಒಟ್ಟಾರೆ ಸ್ಥಳೀಯ ಜನರ ಅಭಿಪ್ರಾಯ ಪಡೆಯದೆಯೇ ಕಸ್ತೂರಿ ರಂಗನ್ ವರದಿ ಸಿದ್ಧಪಡಿಸಲಾಗಿದೆ' ಎಂರು.

'ಕಸ್ತೂರಿ ರಂಗನ್ ವರದಿ ಬಗ್ಗೆ ಸಾವಿರಾರು ಆಕ್ಷೇಪಣೆಗಳು ಬಂದಿವೆ. ಇವುಗಳನ್ನು ಪರಿಶೀಲಿಸಿ ವರದಿ ನೀಡಲು ಕೇಂದ್ರ ಸರ್ಕಾರವು ನಿವೃತ್ತ ಐಎಫ್‌ಎಸ್ ಅಧಿಕಾರಿ ಸಂಜಯ್ ಕುಮಾರ್ ನೇತೃತ್ವದ ಸಮಿತಿ ರಚಿಸಿದ್ದು, ಒಂದು ವರ್ಷಗಳಲ್ಲಿ ಸಮಿತಿ ವರದಿ ನೀಡಲಿದೆ. ಈ ಸಮಿತಿಗೆ ರಾಜ್ಯದಲ್ಲಿನ ವಾಸ್ತವಾಂಶಗಳ ಮಾಹಿತಿ ನೀಡಲು ಉನ್ನತ ಮಟ್ಟದ ಸಮಿತಿ ರಚಿಸಲಾಗುತ್ತದೆ. ಸ್ಥಳೀಯರ ಅಹವಾಲುಗಳನ್ನು ಸಮಿತಿ ಆಲಿಸಲಿದೆ' ಎಂದರು.

ಸಮಿತಿಗೆ ವಾಸ್ತವಾಂಶಗಳನ್ನು ಸಲ್ಲಿಸುವುದರ ಜೊತೆಗೆ ಎಲ್ಲ ಗ್ರಾಮ ಪಂಚಾಯಿತಿಗಳ ಅಭಿಪ್ರಾಯಗಳನ್ನು ಮನವರಿಕೆ ಮಾಡಿಕೊಡಲಾಗುವುದು. ಪ್ರತಿ ಗ್ರಾಮವನ್ನು ಒಂದು ಘಟಕವಾಗಿ ಪರಿಗಣಿಸಿ ಅವರ ಅಹವಾಲುಗಳನ್ನು ಕೇಳಬೇಕೆಂದು ಮನವಿ ಮಾಡುತ್ತೇವೆ. ಕಸ್ತೂರಿ ರಂಗನ್ ವರದಿ ಅವೈಜ್ಞಾನಿಕವಾಗಿದೆ. ವೈಜ್ಞಾನಿಕವಾಗಿ ಅದನ್ನು ರೂಪಿಸುವ ಸಲುವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಉನ್ನತ ಮಟ್ಟದ ಸಮಿತಿ ನೆರವಾಗಲಿದೆ ಎಂದರು.

ಉತ್ತರ ಕನ್ನಡಕ್ಕೆ ವೈದ್ಯಕೀಯ ಸೌಲಭ್ಯ • ಎಚ್ಚೆತ್ತ ವಿವಿಧ ಮುಖಂಡರಿಂದಲೂ ಬೆಂಬಲ • ಸಾಮಾಜಿಕ ಜಾಲತಾಣಗಳಲ್ಲಿ 'ಟ್ರೆಂಡಿಂಗ್' ವಿಷಯ

ಸುಸಜ್ಜಿತ ಆಸ್ಪತ್ರೆಗಾಗಿ ಜೋರಾದ ಕೂಗು

• ಸದಾಶಿವ ಎಂ.ಎಸ್

ಕಾರವಾರ: 'ಸುಸಜ್ಜಿತ ಆಸ್ಪತ್ರೆ ಆರಂಭಿಸದಿದ್ದರೆ ಮತದಾನ ಮಾಡುವುದಿಲ್ಲ...'. ಉತ್ತರ ಕನ್ನಡ ಜಿಲ್ಲೆಯಲ್ಲಿ ಆರಂಭವಾಗಿರುವ ಈ ಅಭಿಯಾನ ಈಗ ದೇಶದ ಗಮನ ಸೆಳೆದಿದೆ. ಸಾಮಾಜಿಕ ಜಾಲತಾಣಗಳಲ್ಲಿ 'ಟ್ರೆಂಡಿಂಗ್' ವಿಷಯವಾಗಿದೆ.

ಜನ ಆಸ್ಪತ್ರೆಗಾಗಿ ಪ್ರತಿಭಟನೆ ಮಾಡುತ್ತಿದ್ದಾರೆ. ಚುನಾವಣೆಗೆ ಕೆಲವೇ ತಿಂಗಳು ಉಳಿದಿರುವುದನ್ನೂ ಗಮನದಲ್ಲಿಟ್ಟುಕೊಂಡು ವಿವಿಧ ರಾಜಕಾರಣಿಗಳು ಬೇಡಿಕೆಗೆ ತಮ್ಮ ಬೆಂಬಲ ಸೂಚಿಸಲು ಆರಂಭಿಸಿದ್ದಾರೆ.

ದೊಡ್ಡ ಭೌಗೋಳಿಕ ಪ್ರದೇಶ ಹೊಂದಿರುವ ಈ ಜಿಲ್ಲೆಯು, ವೈದ್ಯಕೀಯ ಕ್ಷೇತ್ರದಲ್ಲಿ ಇಂದಿಗೂ ಪರಾವಲಂಬಿ. ಗಂಭೀರ ಚಿಕಿತ್ಸೆಗಳಿಗೆ ಸಮೀಪದ ಉಡುಪಿ, ಮಂಗಳೂರಿನ ಖಾಸಗಿ ಆಸ್ಪತ್ರೆಗಳು, ಹುಬ್ಬಳ್ಳಿಯ ಕಿಮ್ಸ್ ಅಥವಾ ಗೋವಾದ ಆಸ್ಪತ್ರೆಗಳಿಗೆ ಹೋಗಬೇಕಾಗಿದೆ.

4 ರಾಷ್ಟ್ರೀಯ ಹೆದ್ದಾರಿಗಳು, ಹಲವು ರಾಜ್ಯ ಹೆದ್ದಾರಿಗಳು ಹಾದು ಹೋಗುವ ಉತ್ತರ ಕನ್ನಡದಲ್ಲಿ ಅಪಘಾತಗಳು ಸರ್ವೇ ಸಾಮಾನ್ಯ. ಕಾರವಾರಕ್ಕೆ ಜಿಲ್ಲೆಯ ವಿವಿಧ ಗಡಿಭಾಗಗಳು, ತಾಲ್ಲೂಕು ಕೇಂದ್ರಗಳಿಂದ ಬರಲು 150– 200 ಕಿಲೋಮೀಟರ್ ಪ್ರಯಾಣಿಸಬೇಕು. ಮಳೆಗಾಲ ನಾನಾ ಕಾರಣಗಳಿಂದ ರಸ್ತೆ ಸಂಪರ್ಕ ಕಡಿತವಾದರೆ ರೋಗಿಗಳ ಪಾಡು ಹೇಳತೀರದು.

ಜುಲೈ 20ರಂದು ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಶಿರೂರು ಟೋಲ್‌ಗೇಟ್‌ನಲ್ಲಿ ಆಂಬುಲೆನ್ಸ್ ಅಪಘಾತವಾಗಿ ಹೊನ್ನಾವರದ ನಾಲ್ವರು ಮೃತಪಟ್ಟರು. ಜಿಲ್ಲೆಯಲ್ಲಿ ಸುಸಜ್ಜಿತ ಆಸ್ಪತ್ರೆ ಇದ್ದಿದ್ದರೆ ಅವರು ಬೇರೆ ಜಿಲ್ಲೆಗೆ ಹೋಗಬೇಕಿರಲಿಲ್ಲ ಎಂಬ ಅಭಿಪ್ರಾಯ ಸಾರ್ವಜನಿಕರಲ್ಲಿ ಬಲವಾಗಿ ಮೂಡಲು ಈ ಘಟನೆ ಕಾರಣವಾಯಿತು.

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಬೇಕೆಂಬ ಬೇಡಿಕೆ ದಶಕಗಳಷ್ಟು ಹಿಂದಿನಿಂದಲೂ ಇದೆ. ಮತ್ತೊಮ್ಮೆ ಗಟ್ಟಿ ಧ್ವನಿಯೆತ್ತಿದ ಸ್ಥಳೀಯರು, ಜುಲೈ 24ರಂದು ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ಆರಂಭಿಸಿದರು. ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ ಹೊರ ಹಾಕಲು ಆರಂಭಿಸಿದರು.

15 ಸಾವಿರಕ್ಕೂ ಅಧಿಕ ಟ್ವೀಟ್‌ಗಳು, ಸಾವಿರಾರು ಫೇಸ್‌ಬುಕ್ ಬರಹಗಳು ಭಾನುವಾರ ಏಕಕಾಲಕ್ಕೆ ಪ್ರಕಟವಾದವು. ಇದು ದೇಶದಲ್ಲೇ 'ಟ್ರೆಂಡಿಂಗ್' (ಬಹು ಚರ್ಚಿತ) ವಿಷಯವಾಯಿತು. ಶಿರಸಿಯಲ್ಲಿ ಪ್ರತಿಭಟನೆಯಾದರೆ, ಕಾರವಾರದಲ್ಲಿ ರಕ್ತದಲ್ಲಿ ಪತ್ರ ಬರೆಯುವ ಚಳವಳಿ, ಹೊನ್ನಾವರ, ಕುಮಟಾ, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದ ಮುಂದೆ ಧರಣಿಯಂಥ ಹೋರಾಟಗಳಿಗೂ ಸಿದ್ಧತೆ ನಡೆಯುತ್ತಿದೆ.

ಈ ಎಲ್ಲ ಬೆಳವಣಿಗೆಗಳು ಜನಪ್ರತಿನಿಧಿಗಳಿಗೆ ಸ್ವಲ್ಪ ಬಿಸಿ ಮುಟ್ಟಿಸಿದ್ದು, ಸಾರ್ವಜನಿಕರನ್ನು ಸಮಾಧಾನ ಪಡಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ. ಅಭಿ ಯಾನವನ್ನು ಬೆಂಬಲಿಸಿ 'ಏಕಧ್ವನಿ'ಯಲ್ಲಿ ಅಭಿಪ್ರಾಯಗಳನ್ನು ಜಾಲತಾಣಗಳ ತಮ್ಮ ಪುಟಗಳಲ್ಲಿ ಪ್ರಕಟಿಸುತ್ತಿದ್ದಾರೆ.

ಶೀಘ್ರವೇ ಸೂಕ್ತ ತೀರ್ಮಾನ- ಡಾ.ಸುಧಾಕರ್: ಈ ಬಗ್ಗೆ ಟ್ವಿಟರ್‌ನಲ್ಲಿ ಸೋಮವಾರ ಪ್ರತಿಕ್ರಿಯಿಸಿರುವ ಆರೋಗ್ಯ ಸಚಿವ ಡಾ.ಸುಧಾಕರ್, 'ಕಾರವಾರದ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಟ್ರಾಮಾ ಸೆಂಟರ್ ಸ್ಥಾಪನೆ ಹಾಗೂ ಜಿಲ್ಲೆಯಲ್ಲಿ ಒಂದು ಸುಸಜ್ಜಿತ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಲಾಗುವುದು. ಶೀಘ್ರವೇ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು' ಎಂದು ತಿಳಿಸಿದ್ದಾರೆ.

'ಜಿಲ್ಲೆಯ ಆರೋಗ್ಯ ಮೂಲ ಸೌಕರ್ಯ ಅಗತ್ಯಗಳ ಕುರಿತು ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳೊಂದಿಗೆ ಶೀಘ್ರವೇ ಸಭೆ ನಡೆಸಲಾಗುವುದು. ಆದಷ್ಟು ಬೇಗ ಒಂದು ಕ್ರಿಯಾಯೋಜನೆ ರೂಪಿಸಿ ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುವುದು' ಎಂದೂ ಹೇಳಿದ್ದಾರೆ.

ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಜೆ.ಡಿ.ಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಕೂಡ ಅಭಿಯಾನವನ್ನು ಬೆಂಬಲಿಸಿದ್ದಾರೆ.

2019ರಲ್ಲಿ ಮೊದಲ ಬಾರಿಗೆ 'ಟ್ವೀಟ್' ಅಭಿಯಾನ ನಡೆದಿತ್ತು. ಪ್ರತಿಕ್ರಿಯಿಸಿದ್ದ ಅಂದಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು. ಬಳಿಕ ಯಾವುದೇ ಬೆಳವಣಿಯಾಗಲಿಲ್ಲ. ನಂತರ ಬದಲಾದ ಸರ್ಕಾರಗಳ ಸಚಿವರಿಗೆ, ಜನಪ್ರತಿನಿಧಿಗಳಿಗೆ ಆಗಾಗ ಮನವಿಗಳು ಸಲ್ಲಿಕೆಯಾಗುತ್ತಲೇ ಇವೆ. ಯಾವುದೇ ಪ್ರಯೋಜನವಾಗಲಿಲ್ಲ ಎಂಬುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಸ್ಥಳಾಭಾವ: ಕೇಂದ್ರ ಸರ್ಕಾರವು ಆಯುಷ್ಮಾನ್ ಭಾರತ ಯೋಜನೆಯಡಿ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 50 ಹಾಸಿಗೆಗಳ ತೀವ್ರ ನಿಗಾ ಘಟಕವನ್ನು ಮಂಜೂರು ಮಾಡಿದೆ. ಸಂಸ್ಥೆಯ ಆವರಣದಲ್ಲಿ ಸ್ಥಳಾಭಾವದ ಕಾರಣ, ಅಂಕೋಲಾ ತಾಲ್ಲೂಕಿನ ಹಟ್ಟಿಕೇರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಸ್ಥಾಪಿಸಲು ಜಿಲ್ಲಾಡಳಿತ ಉದ್ದೇಶಿಸಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಿದೆ.



ಉತ್ತರ ಕನ್ನಡದಲ್ಲಿ ಸುಸಜ್ಜಿತ ಆಸ್ಪತ್ರೆ ಆರಂಭಿಸುವಂತೆ ಸೋಮವಾರ ಶಿರಸಿಯಲ್ಲಿ ವಿವಿಧ ಸಂಘಟನೆಗಳು ಮತ್ತು ಸಾರ್ವಜನಿಕರು ಅಣಕು ಶವಯಾತ್ರೆ ನಡೆಸಿ ಪ್ರತಿಭಟನೆ ಹಮ್ಮಿಕೊಂಡರು



ಉತ್ತರ ಕನ್ನಡದಲ್ಲಿ ಸುಸಜ್ಜಿತ ಆಸ್ಪತ್ರೆ ಸ್ಥಾಪನೆಗೆ ಒತ್ತಾಯಿಸಿ ಜಿಲ್ಲೆಯ ಸಾಮಾಜಿಕ ಜಾಲತಾಣಗಳ ಬಳಕೆದಾರರು ಭಾನುವಾರ ಕರೆ ನೀಡಿದ್ದ 'ಟ್ವೀಟ್ ಅಭಿಯಾನ'ದ ಆಹ್ವಾನ ಪತ್ರ

ಸುಸಜ್ಜಿತ ಆಸ್ಪತ್ರೆಗಾಗಿ ಉತ್ತರ ಕನ್ನಡ ಜಿಲ್ಲೆಯ ಜನರ ಹೋರಾಟಕ್ಕೆ ನನ್ನ ಬೆಂಬಲವಿದೆ. ಕೆಲವೆಡೆ ಮಾತ್ರ ಸುಸಜ್ಜಿತ ಆಸ್ಪತ್ರೆಗಳಿದ್ದರೆ ಉಳಿದ ಜಿಲ್ಲೆಗಳ ಜನರು ಅಲ್ಲಿಗೆ ಹೋಗುವುದು ಹೇಗೆ?

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ಲಾಬಿ ತನಿಖೆಯಾಗಲಿ'

ಉತ್ತರ ಕನ್ನಡದಲ್ಲಿ ಸರಿಸುಮಾರು 15 ಲಕ್ಷ ಜನಸಂಖ್ಯೆಯಿದೆ. ಇಲ್ಲಿ ಯಾರೂ ಸುಸಜ್ಜಿತ ಆಸ್ಪತ್ರೆ ಸ್ಥಾಪನೆಗೆ ಯಾಕೆ ಮುಂದಾಗುತ್ತಿಲ್ಲ ಎಂಬುದೇ ಜನರ ಕುತೂಹಲವಾಗಿದೆ.

'ಸುತ್ತಮುತ್ತಲಿನ ಜಿಲ್ಲೆಗಳಲ್ಲಿರುವ ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳ ಲಾಬಿಯೇ ಇದಕ್ಕೆ ಕಾರಣ' ಎಂದು ಜಿಲ್ಲಾ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ರಾಘು ನಾಯ್ಕ ಆರೋಪಿಸುತ್ತಾರೆ. 'ಜಿಲ್ಲೆಯಲ್ಲಿ ಕ್ಲಿನಿಕ್ ನಡೆಸುವ ಹಲವು ವೈದ್ಯರಿಗೆ ಬೇರೆ ಜಿಲ್ಲೆಗಳ ವೈದ್ಯರೊಂದಿಗೆ ಅನಧಿಕೃತ ಒಪ್ಪಂದವಾಗಿರುತ್ತದೆ. ತಮ್ಮ ಬಳಿಗೆ ಬರುವ ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗೆ ಕಳುಹಿಸಿಕೊಟ್ಟರೆ ಇಂತಿಷ್ಟು ಎಂದು ಹಣ ಪಾವತಿಸುತ್ತಿರುವ ಬಗ್ಗೆ ದೂರುಗಳಿವೆ. ಇದರ ಬಗ್ಗೆ ತನಿಖೆಯಾಗಬೇಕು' ಎಂದು ಅವರು ಆಗ್ರಹಿಸುತ್ತಾರೆ.

'ನಿರಂತರ ಹೋರಾಟ ಅಗತ್ಯ'

ಉತ್ತರ ಕನ್ನಡದಲ್ಲಿ ದೊಡ್ಡ ಅಪಘಾತಗಳಾದಾಗ, ಯಾರಾದರೂ ದಾರುಣ ಸಾವು ಕಂಡಾಗಲೆಲ್ಲ ಸುಸಜ್ಜಿತ ಆಸ್ಪತ್ರೆಯ ಬೇಡಿಕೆಯು ಮಂಡನೆಯಾಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ 'ಟ್ರೋಲ್'ಗಳಾಗುತ್ತವೆ. ಕೆಲವು ಮನವಿಗಳು ಸಲ್ಲಿಕೆಯಾಗುತ್ತವೆ. ಬೇಡಿಕೆ ಗಟ್ಟಿಯಾಗುತ್ತಿದ್ದಂತೆಯೇ ಜನಪ್ರತಿನಿಧಿಗಳು ಆಸ್ಪತ್ರೆ ಸ್ಥಾಪನೆಯ ಆಶ್ವಾಸನೆ ನೀಡುತ್ತಾರೆ. ಅಷ್ಟರಲ್ಲಿ ಆಸ್ಪತ್ರೆ ಸ್ಥಾಪನೆಯ ಬೇಡಿಕೆಯೂ ಹಿನ್ನೆಲೆಗೆ ಸರಿಯುತ್ತದೆ. ಈ ಹೋರಾಟವನ್ನು ವ್ಯವಸ್ಥಿತವಾಗಿ ಮುಂದುವರಿಸಿಕೊಂಡು ಹೋಗುವುದು ಅಗತ್ಯ' ಎನ್ನುತ್ತಾರೆ ಜಿಲ್ಲಾ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ.

ಉತ್ತರಕನ್ನಡದಲ್ಲಿ ಅಪಘಾತ: ಅಂಕಿ ಅಂಶ

ವರ್ಷ	ಅಪಘಾತ	ಮೃತರು	ಗಾಯಗೊಂಡವರು
2021	950	203	1,550
2022 (ಜುಲೈ 22ರ ತನಕ)	570	125	903

ಐದು ವರ್ಷಗಳ ಅಂಕಿ ಅಂಶ

ವರ್ಷ	ಅಪಘಾತ	ಮೃತರು	ಗಾಯಗೊಂಡವರು
2017ರಿಂದ 2022 (ಜುಲೈ 22)	5,958	1,502	ಅಂಕಿ ಸಂಖ್ಯೆ ಅಭ್ಯವಿಲ್ಲ

ಜಿಲ್ಲೆಯಲ್ಲಿ ಸುಸಜ್ಜಿತ ಆಸ್ಪತ್ರೆಯ ಬೇಡಿಕೆ ನ್ಯಾಯಸಮ್ಮತ. ಜಿಲ್ಲೆಯ ಶಾಸಕರು, ಸಂಸದರನ್ನು ಒಳಗೊಂಡ ನಿಯೋಗದೊಂದಿಗೆ ಮುಖ್ಯಮಂತ್ರಿ ಭೇಟಿ ಮಾಡಲಾಗುವುದು.

ಶಿವರಾಮ ಹೆಬ್ಬಾರ, ಕಾರ್ಮಿಕ ಸಚಿವ

ಸುಸಜ್ಜಿತ ಆಸ್ಪತ್ರೆಯ ಬೇಡಿಕೆಗೆ ನನ್ನ ಬೆಂಬಲವಿದೆ. ಅಧಿವೇಶನದಲ್ಲೂ ಧ್ವನಿ ಎತ್ತಿದ್ದೇನೆ. ಕೆಲವು ಪ್ರಮುಖರನ್ನು ಭೇಟಿ ಮಾಡಿ ಆಸ್ಪತ್ರೆ ಸ್ಥಾಪನೆಗೆ ಪ್ರಯತ್ನ ಮಾಡಿದ್ದೇನೆ.

ದಿನಕರ ಶೆಟ್ಟಿ ಕುಮಟಾ, ಹೊನ್ನಾವರ ಶಾಸಕ

ಉತ್ತರ ಕನ್ನಡಕ್ಕೆ ಸುಸಜ್ಜಿತ ಆಸ್ಪತ್ರೆ ಅಗತ್ಯದ ಬಗ್ಗೆ ಆರೋಗ್ಯ ಸಚಿವ ಸುಧಾಕರ್ ಜೊತೆ ಚರ್ಚಿಸಿದ್ದೇನೆ. ಸಿ.ಎಂ ಜೊತೆ ಮಾತನಾಡಿ ಅಗತ್ಯ ಪ್ರಕರಣವಾಗಿ ಪರಿಗಣಿಸುವುದಾಗಿ ತಿಳಿಸಿದ್ದಾರೆ.

ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಸಭೆ ಸಭಾಧ್ಯಕ್ಷ

ಉತ್ತರ ಕನ್ನಡಕ್ಕೊಂದು ಸುಸಜ್ಜಿತ ಆಸ್ಪತ್ರೆ ಅಗತ್ಯವಾಗಿದೆ. ಜಿಲ್ಲೆಯ ಯಾವುದೇ ಭಾಗದಲ್ಲಾದರೂ ಸ್ಥಾಪನೆಯಾಗಲಿ. ಹೋರಾಟಕ್ಕೆ ನನ್ನ ಬೆಂಬಲವಿದೆ.

ಸುನೀಲ ನಾಯ್ಕ ಭಟ್ಕಳ, ಹೊನ್ನಾವರ ಶಾಸಕ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆ.1 ಅಥವಾ 2ರಂದು ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಆಗ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆಯ ಘೋಷಣೆಯಾಗುವ ನಿರೀಕ್ಷೆಯಿದೆ.

ರೂಪಾಲಿ ನಾಯ್ಕ ಕಾರವಾರ, ಅಂಕೋಲಾ ಶಾಸಕಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.72	13,530	12,055
ಹಾರಂಗಿ	2,859	2,856.38	4,137	2,800
ಕಬಿನಿ	2,284	2283.76	12,549	8,000
ಹೇಮಾವತಿ	2,922	2922.00	5,214	11,300
ಲಿಂಗನಮಕ್ಕಿ	1,819	1,798.10	9,879	6,124
ಸೂಪಾ (ಮೀ)	564	541.60	5,418	2,667
ಮಾಣಿ	595	583.92	1,713	-
ತುಂಗಭದ್ರಾ	1,633	1,632.78	20,781	30,698
ಮಲಪ್ರಭಾ	2079.50	2,068.60	2,755	194
ಘಟಪ್ರಭಾ	2175	2,154.11	4,864	116
ಭದ್ರಾ	186	184.9	6,230	3,233
ಆಲಮಟ್ಟಿ (ಮೀ)	519.60	518.16	35,350	6,451
ನಾರಾಯಣಪುರ (ಮೀ)	492.25	491.49	6000	-

*ನೆಲಮಟ್ಟದಿಂದ

ಅಧ್ಯಕ್ಷರ ಹೆಸರು	ನಿಗಮ/ಮಂಡಳಿ/ಪ್ರಾಧಿಕಾರ
ಎಂ. ಸರವಣ	ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ
ದೇವೇಂದ್ರನಾಥ ಕೆ. ನಾದ್	ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ನಿಗಮ
ಚಂಗಾವರ ಮಾರಣ್ಣ	ಕಾಡುಗೊಲ್ಲ ಅಭಿವೃದ್ಧಿ ನಿಗಮ
ಕೆ.ಪಿ. ವೆಂಕಟೇಶ್	ರಾಜ್ಯ ಸಹಕಾರ [illegible] ಅಭಿವೃದ್ಧಿ ನಿಗಮ
ಎಂ.ಕೆ. ಶ್ರೀನಿವಾಸ್ (ಮುಳೆ)	ವಸ್ತು ಪ್ರದರ್ಶನ ಪ್ರಾಧಿಕಾರ
ಎಂ.ಕೆ. ವಾಸುದೇವ್	ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ
ಎನ್.ಎಂ. ರವಿನಾರಾಯಣ ರೆಡ್ಡಿ	ದ್ರಾಕ್ಷಿ ಮತ್ತು ವೈನ್ ಮಂಡಳಿ
ಚಂದ್ರಶೇಖರ ಕವಟಗಿ	ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ
ಬಿ.ಸಿ. ನಾರಾಯಣಸ್ವಾಮಿ	ರೇಷ್ಮೆ ಮಾರಾಟ ಮಂಡಳಿ
ಗೌತಮ್ ಗೌಡ ಎಂ.	ರೇಷ್ಮೆ ಉದ್ದಿಮೆಗಳ ನಿಗಮ
ಮಣಿರಾಜ ಶೆಟ್ಟಿ	ಗೇರು ಅಭಿವೃದ್ಧಿ ನಿಗಮ
ಗೋವಿಂದ ಜಟ್ಟಪ್ಪ ನಾಯ್ಕ	ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ
ಎಂ. ಶಿವಕುಮಾರ್	ಮೃಗಾಲಯ ಪ್ರಾಧಿಕಾರ
ಎಸ್. ರೇವಣಪ್ಪ ಕೋಳಗಿ	ಅರಣ್ಯ ಅಭಿವೃದ್ಧಿ ನಿಗಮ
ಎಸ್.ಎಂ. ರವಿ ಕಾಳಪ್ಪ	ಜೀವವೈವಿಧ್ಯ ಮಂಡಳಿ
ಎ.ವಿ. ತೀರ್ಥರಾಮ	ಮೀನುಗಾರಿಕೆ ಅಭಿವೃದ್ಧಿ ನಿಗಮ
ಎಂ.ಎಸ್. ಕರಿಗೌಡ	ಮಾರ್ಕೆಟಿಂಗ್ ಕಮ್ಯುನಿಕೇಷನ್ಸ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್
ರಘು ಕೌಟಿಲ್ಯ	ಮೈಸೂರು ಪೇಂಟ್ಸ್ ಮತ್ತು ವಾರ್ನಿಶ್ ನಿಯಮಿತ
ಗುತ್ತಿಗನೂರು ವಿರುಪಾಕ್ಷಗೌಡ	ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ
ಕೆ.ವಿ. ನಾಗರಾಜ	ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ
ಮಾರುತಿ ಮಲ್ಲಪ್ಪ ಅಷ್ಟಗಿ	ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ
ಕೊಲ್ಲಾ ಶೇಷಗಿರಿ ರಾವ್	ತುಂಗಭದ್ರಾ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಜಿ. ನಿಜಗುಣರಾಜು	ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಮಲ್ಲಿಕಾರ್ಜುನ ಬಸವಣ್ಣಪ್ಪ ತುಬಾಕಿ	ರಾಜ್ಯ ಮದ್ಯಪಾನ ಸಂಯಮ ಮಂಡಳಿ
ಧರ್ಮಣ್ಣ ದೊಡ್ಡಮನಿ	ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ

25 ನಿಗಮ, ಮಂಡಳಿಗಳಿಗೆ ಅಧ್ಯಕ್ಷರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿರುವ 25 ನಿಗಮ, ಮಂಡಳಿ, ಪ್ರಾಧಿಕಾರಗಳಿಗೆ ನೂತನ ಅಧ್ಯಕ್ಷರನ್ನು ನೇಮಿಸಿ ಸೋಮವಾರ ಆದೇಶ ಹೊರಡಿಸಲಾಗಿದೆ.

2019ರಲ್ಲಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ನಿಗಮ, ಮಂಡಳಿ, ಪ್ರಾಧಿಕಾರಗಳಿಗೆ ನೂತನ ಅಧ್ಯಕ್ಷರನ್ನು ನೇಮಿಸಲಾಗಿತ್ತು. ಅವರಲ್ಲಿ 52 ಮಂದಿಯ ನೇಮಕಾತಿಯನ್ನು ರದ್ದುಗೊಳಿಸಿ ಜುಲೈ 12ರಂದು ಆದೇಶ ಹೊರಡಿಸಲಾಗಿತ್ತು.

ಈ ಹಿಂದೆ ಅಧ್ಯಕ್ಷ ಸ್ಥಾನ ಹೊಂದಿದ್ದ ರಘು ಕೌಟಿಲ್ಯ, ಮಣಿರಾಜ ಶೆಟ್ಟಿ, ಕೆ.ವಿ. ನಾಗರಾಜ ಮತ್ತು ರೇವಣಪ್ಪ ಕೋಳಗಿ ಅವರಿಗೆ ಪುನಃ ಅವಕಾಶ ನೀಡಲಾಗಿದೆ. ಈ ಬಾರಿ ಬಿಜೆಪಿ ಕಾರ್ಯಕರ್ತರಿಗೆ ನೇಮಕಾತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ನಾಳೆಯಿಂದ ರಾಜ್ಯದ ಕೆಲವೆಡೆ ಭಾರಿ ಮಳೆ

ಬೆಂಗಳೂರು: ಇದೇ 27ರಿಂದ ಶಿವಮೊಗ್ಗ, ಮೈಸೂರು, ಕೊಡಗು, ಚಿಕ್ಕಮಗಳೂರು ಸೇರಿ ರಾಜ್ಯದ 13 ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ಬಹುತೇಕ ಕಡೆ ಮತ್ತು ಒಳನಾಡಿನ ಕೆಲವು ಕಡೆ ಮಂಗಳವಾರ ಮಳೆಯಾಗುವ ಸಾಧ್ಯತೆಯಿದೆ. 24 ಗಂಟೆಗಳು ರಾಜ್ಯದ ಹವಾಮಾನದಲ್ಲಿ ಗಮನಾರ್ಹ ಬದಲಾವಣೆ ಇರುವುದಿಲ್ಲ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ ಎಂದು ತಿಳಿಸಿದೆ.

ಸಿಡಿಲು ಬಡಿದು ಮಹಿಳೆ ಸಾವು

ಹುಣಸಗಿ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಗುಂಡಲಗೇರಾ ಗ್ರಾಮದ ನಿವಾಸಿ ಸತ್ಯಮ್ಮ ಪರಮಪ್ಪ ತಳಗೇರಿ (25) ಎಂಬುವರು ಸೋಮವಾರ ಸಂಜೆ ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ. ಚಂದ್ರಮ್ಮ ತಳವಾರಗೇರಿ (60) ಎಂಬುವರಿಗೆ ಗಾಯಗಳಾಗಿವೆ.

ಇಬ್ಬರೂ ಕೂಲಿಗೆಲಸ ಮುಗಿಸಿಕೊಂಡು ಮನೆಗೆ ಮರಳುತ್ತಿದ್ದ ವೇಳೆ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಗತ್ ಸಿಂಗ್ ಪಠ್ಯ ಕೈಬಿಟ್ಟಿಲ್ಲ: ಕೇಂದ್ರ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರಿಗೆ ಸಂಬಂಧಿಸಿದ ಪಠ್ಯಗಳನ್ನು ಕರ್ನಾಟಕ ಸರ್ಕಾರವು ಯಾವುದೇ ತರಗತಿಯ ಪಠ್ಯಪುಸ್ತಕದಿಂದ ಕೈಬಿಟ್ಟಿಲ್ಲ' ಎಂದು ಕೇಂದ್ರ ಶಿಕ್ಷಣ ಖಾತೆಯ ರಾಜ್ಯ ಸಚಿವರಾದ ಅನ್ನಪೂರ್ಣ ದೇವಿ ಸ್ಪಷ್ಟಪಡಿಸಿದ್ದಾರೆ.

ಲೋಕಸಭೆಯಲ್ಲಿ ಸದಸ್ಯ ಕೋಟಿಕುನ್ನಿಲ್ ಸುರೇಶ್ ಅವರ ಪ್ರಶ್ನೆಗೆ ಸೋಮವಾರ ಲಿಖಿತ ಉತ್ತರ ನೀಡಿರುವ ಅವರು, '2022–23ನೇ ಶೈಕ್ಷಣಿಕ ವರ್ಷದಲ್ಲಿ 6ರಿಂದ 10 ನೇ ತರಗತಿಯ ಸಮಾಜ ವಿಜ್ಞಾನ ಹಾಗೂ 1 ರಿಂದ 10 ನೇ ತರಗತಿಯವರೆಗಿನ ಕನ್ನಡ ಪಠ್ಯ-ಪುಸ್ತಕಗಳನ್ನು ಪರಿಷ್ಕರಿಸಲಾಗಿದೆ. ಸದ್ಯ ಸರ್ಕಾರದ ಪಠ್ಯಕ್ರಮದ ಪುಸ್ತಕಗಳಲ್ಲಿ 7 ಹಾಗೂ 10ನೇ ತರಗತಿಯ ಪುಸ್ತಕಗಳಲ್ಲಿ ಭಗತ್ ಸಿಂಗ್ ಕುರಿತ ಅಂಶಗಳಿವೆ' ಎಂದು ಅವರು ತಿಳಿಸಿದ್ದಾರೆ.

'ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಪ್ಯಾರಾ 4.30 ರ ಅನ್ವಯ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು ಶಾಲಾ ಶಿಕ್ಷಣಕ್ಕಾಗಿ ಹೊಸ ಮತ್ತು ಸಮಗ್ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಅನ್ನು ರೂಪಿಸಲಿದೆ. ಇದಕ್ಕಾಗಿ ಅದು ಎನ್‌ಇಪಿಯ ಸಿದ್ಧಾಂತಗಳನ್ನು ಆಧರಿಸಲಿದ್ದು, ಎಲ್ಲ ಪಾಲುದಾರರೊಂದಿಗೆ ಚರ್ಚಿಸಿದ ನಂತರ ಪಠ್ಯಕ್ರಮದ ಬದಲಾವಣೆ ಕುರಿತು ನಿರ್ಧರಿಸಲಿದೆ' ಎಂದಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




❦ ಸುಭಾಷಿತ ❦

ಮರದ ಮೇಲೆ ಕುಳಿತ ಹಕ್ಕಿಗೆ ಕೊಂಬೆ ಮುರಿದುಬೀಳುವ ಭಯವಿರದು. ಅದು ನಂಬಿರುವುದು ತನ್ನ ರೆಕ್ಕೆಗಳನ್ನೇ ಹೊರತು ಕೊಂಬೆಯನ್ನಲ್ಲ.

–ಕುವೆಂಪು

ಭಾರತದ ಅಥ್ಲೆಟಿಕ್ಸ್‌ಗೆ ಹೊಳಪು ತಂದ ನೀರಜ್ ಸಾಧನೆ

ಭಾರತದ ಕೋಟ್ಯಂತರ ಕ್ರೀಡಾಭಿಮಾನಿಗಳ ನಿರೀಕ್ಷೆಯನ್ನು ನೀರಜ್ ಚೋಪ್ರಾ ಮತ್ತೊಮ್ಮೆ ಈಡೇರಿಸಿದ್ದಾರೆ. ಅಮೆರಿಕದಲ್ಲಿ ನಡೆದ ವಿಶ್ವ ಅಥ್ಲೆಟಿಕ್ ಕೂಟದ ಜಾವೆಲಿನ್ ಥ್ರೋನಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ. ಇದೊಂದು ಐತಿಹಾಸಿಕ ಸಾಧನೆ. ಈ ಕೂಟದ ಇತಿಹಾಸದಲ್ಲಿ ಭಾರತಕ್ಕೆ ಒಲಿದ ಎರಡನೇ ಮತ್ತು ಪುರುಷರ ವಿಭಾಗದ ಮೊದಲನೇ ಪದಕ. ಅಲ್ಲದೆ, ಸಾರ್ವಕಾಲಿಕ ಶ್ರೇಷ್ಠ ಸಾಧನೆಯೂ ಹೌದು. ಹತ್ತೊಂಬತ್ತು ವರ್ಷಗಳ ಹಿಂದೆ ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಅಂಜು ಬಾಬಿ ಜಾರ್ಜ್ ಕಂಚಿನ ಪದಕ ಗೆದ್ದಿದ್ದರು. ವಿಶ್ವ ಅಥ್ಲೆಟಿಕ್ ಕೂಟವೂ ಒಲಿಂಪಿಕ್ಸ್‌ನಷ್ಟೇ ಪ್ರತಿಷ್ಠಿತ ಸ್ಪರ್ಧಾಕಣ. ಜಗತ್ತಿನ ಟ್ರ್ಯಾಕ್ ಮತ್ತು ಫೀಲ್ಡ್‌ನ ಘಟಾನುಘಟಿ ಅಥ್ಲೀಟ್‌ಗಳು ಈ ಕಣದಲ್ಲಿರುತ್ತಾರೆ. ಈ ಕೂಟಕ್ಕಾಗಿಯೇ ಹಗಲಿರುಳು ಶ್ರಮಿಸಿ ಬಂದಿರುತ್ತಾರೆ. ಅಂತಹವರ ನಡುವೆ ಪದಕ ಗೆಲ್ಲುವುದು ಭಾರತದ ಅಥ್ಲೀಟ್‌ಗಳ ಮಟ್ಟಿಗೆ ಜೀವಮಾನದ ಕನಸೇ ಸರಿ. ಈ ಸವಾಲನ್ನು ಯಶಸ್ವಿಯಾಗಿ ಮೀರಿ ನಿಂತ ಶ್ರೇಯ ನೀರಜ್ ಅವರದ್ದು. ಹೋದ ವರ್ಷ ಟೋಕಿಯೊ ಒಲಿಂಪಿಕ್ಸ್‌ನ ಜಾವೆಲಿನ್ ಥ್ರೋನಲ್ಲಿ ಚಿನ್ನ ಗೆದ್ದು, ದಾಖಲೆ ನಿರ್ಮಿಸಿದ್ದರು. ಒಲಿಂಪಿಕ್ಸ್ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಪದಕ ಗೆದ್ದ ಮೊದಲ ಭಾರತೀಯನೆಂಬ ಹೆಗ್ಗಳಿಕೆಯಿಂದಾಗಿ ಹಣ ಮತ್ತು ಜನಪ್ರಿಯತೆ ಪ್ರವಾಹೋಪಾದಿಯಲ್ಲಿ ಹರಿದುಬಂದಿತ್ತು. ಅಲ್ಲಿಂದ ಈಚೆಗೆ ಅವರ ಬಗೆಗೆ ನಿರೀಕ್ಷೆಗಳು ಹೆಚ್ಚಾದವು. ಯಾವುದೇ ಸ್ಪರ್ಧೆಯಲ್ಲಿ ಅವರು ಕಣಕ್ಕಿಳಿದರೂ ಕ್ರೀಡಾಭಿಮಾನಿಗಳ ನಿರೀಕ್ಷೆಯ ನೋಟವು ಚಿನ್ನದ ಪದಕದತ್ತ ಇರುತ್ತಿತ್ತು. ಇಂತಹ ನಿರೀಕ್ಷೆಗಳ ಮೂಟೆಯನ್ನು ಹೆಗಲ ಮೇಲೆ ಹೊತ್ತು, ಹಣ–ಕೀರ್ತಿ ತಲೆಗೇರದಂತೆ ಎಚ್ಚರ ವಹಿಸುತ್ತ ವಿಶ್ವ ಕೂಟದಲ್ಲಿ ಪದಕಕ್ಕೆ ಕೊರಳೊಡ್ಡುವುದು ಸುಲಭವೇನಲ್ಲ. ಈ ಸಾಧನೆಯು ಅವರ ಸ್ಥಿರತೆ, ಏಕಾಗ್ರತೆ ಮತ್ತು ಬದ್ಧತೆಯ ಪ್ರತೀಕವೂ ಹೌದು. ಆದ್ದರಿಂದಲೇ ಒಲಿಂಪಿಕ್ಸ್‌ನಲ್ಲಿ ಅವರು ಪಡೆದ ಚಿನ್ನದ ಪದಕಕ್ಕೆ ಇರುವಷ್ಟೇ ತೂಕ ಈ ಬೆಳ್ಳಿಗೂ ಇದೆ. ಏಕೆಂದರೆ, ಟೋಕಿಯೊದಲ್ಲಿ ಅವರು 87.58 ಮೀಟರ್ಸ್ ದೂರ ಎಸೆತದ ಸಾಧನೆ ಮಾಡಿದ್ದರು. ವಿಶ್ವ ಕೂಟದಲ್ಲಿ ಅದಕ್ಕಿಂತಲೂ ಹೆಚ್ಚು (88.13 ಮೀಟರ್ಸ್) ದೂರ ಎಸೆದರು. ಅವರ ಪ್ರತಿಸ್ಪರ್ಧಿ ಗ್ರೆನಡಾದ ಆ್ಯಂಡರ್ಸನ್ ಪೀಟರ್ಸ್ 90.54 ಮೀಟರ್ಸ್ ಸಾಧನೆ ಮಾಡಿ ಚಿನ್ನ ಬಾಚಿಕೊಂಡರು.



ಭಾರತದ ಅಥ್ಲೆಟಿಕ್ಸ್‌ಗೆ ನೀರಜ್ ಚೋಪ್ರಾ ಎಂಬ ಧ್ರುವತಾರೆ ಸಿಕ್ಕಿದ್ದಾರೆ. ಈ ನಕ್ಷತ್ರದ ಬೆಳಕಲ್ಲಿ ಮತ್ತಷ್ಟು ಪ್ರತಿಭೆಗಳ ಹೊಳಪು ಹೊರಹೊಮ್ಮುವಂತಹ ವಾತಾವರಣ ಮತ್ತು ಸೌಲಭ್ಯ ನಿರ್ಮಾಣವಾಗಬೇಕು

ಪದಕ ಸಾಧನೆಯಾಚೆ ನೀರಜ್ ವ್ಯಕ್ತಿತ್ವವೂ ಇಲ್ಲಿ ಮುಖ್ಯ. ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ನಂತರದ ಈ ಅವಧಿಯಲ್ಲಿ ತಮ್ಮ ಏಕಾಗ್ರತೆಯನ್ನು ಉಳಿಸಿಕೊಂಡು ಸಾಮರ್ಥ್ಯ ವೃದ್ಧಿಸಿಕೊಂಡಿರುವುದು ಯುವ ಸಮೂಹಕ್ಕೆ ದಾರಿದೀಪ. ಗೆದ್ದಾಗ ಹಿಗ್ಗದೆ, ಹಿನ್ನಡೆಯಾದಾಗ ಕುಗ್ಗದೆ ಸಾಧನೆಯತ್ತ ಮುನ್ನುಗ್ಗುವ ಅವರ ಪರಿ ಅನುಕರಣೀಯ. ಅವರ ಸಾಧನೆಯಿಂದಾಗಿ ದೇಶದ ಯುವಪ್ರತಿಭೆಗಳು ಅಥ್ಲೆಟಿಕ್ಸ್‌ನತ್ತ ಆಕರ್ಷಿತರಾಗುತ್ತಿದ್ದಾರೆ. ಈ ವಿಶ್ವ ಕೂಟವೇ ಇದಕ್ಕೊಂದು ಉತ್ತಮ ಉದಾಹರಣೆ. ಈ ಬಾರಿ ಭಾರತ ತಂಡದ್ದು ಗಮನಾರ್ಹ ಸಾಧನೆ. ಒಟ್ಟು ಏಳು ಸ್ಪರ್ಧೆಗಳಲ್ಲಿ ಭಾರತದ ಅಥ್ಲೀಟ್‌ಗಳು ಫೈನಲ್ ತಲುಪಿದ್ದರು. ಪುರುಷರ ಲಾಂಗ್‌ಜಂಪ್‌ನಲ್ಲಿ ಮುರಳಿ ಶ್ರೀಶಂಕರ್, 3000 ಮೀಟರ್ಸ್ ಸ್ಟೀಪಲ್ ಚೇಸ್‌ನಲ್ಲಿ ಅವಿನಾಶ್ ಸಬ್ಳೆ, ಮಹಿಳೆಯರ ಜಾವೆಲಿನ್ ಥ್ರೋನಲ್ಲಿ ಅನುರಾಣಿ, ಟ್ರಿಪಲ್ ಜಂಪ್‌ನಲ್ಲಿ ಎಲ್ಡೋಸಾ ಪಾಲ್, ಪುರುಷರ ಜಾವೆಲಿನ್‌ನಲ್ಲಿ ರೋಹಿತ್ ಯಾದವ್ ಹಾಗೂ ಪುರುಷರ 4X400 ಮೀಟರ್ಸ್ ರಿಲೆಯಲ್ಲಿ ಭಾರತ ಫೈನಲ್‌ನಲ್ಲಿ ಹೆಜ್ಜೆಗುರುತು ಮೂಡಿಸಿತು. ಭಾರತದ ಕ್ರೀಡಾಪಟುಗಳ ಈ ಸಾಧನೆಯು ದೇಶದ ಅಥ್ಲೆಟಿಕ್ಸ್ ಕ್ಷೇತ್ರದ ಬೆಳವಣಿಗೆಯ ದಿಕ್ಸೂಚಿಯೂ ಹೌದು. ಯಾವುದೇ ಕ್ರೀಡೆಯು ಜನಪ್ರಿಯವಾಗಿ ಯುವಸಮೂಹವನ್ನು ಆಕರ್ಷಿಸಬೇಕಾದರೆ ಅದರಲ್ಲಿ ತಾರೆಗಳಿರಬೇಕು ಎಂಬ ಮಾತಿದೆ. ಇದೀಗ ಭಾರತದ ಅಥ್ಲೆಟಿಕ್ಸ್‌ಗೆ ನೀರಜ್ ಚೋಪ್ರಾ ಎಂಬ ಧ್ರುವತಾರೆ ಸಿಕ್ಕಿದ್ದಾರೆ. ಈ ನಕ್ಷತ್ರದ ಬೆಳಕಲ್ಲಿ ಮತ್ತಷ್ಟು ಪ್ರತಿಭೆಗಳ ಹೊಳಪು ಹೊರಹೊಮ್ಮುವಂತಹ ವಾತಾವರಣ ಮತ್ತು ಸೌಲಭ್ಯಗಳು ನಿರ್ಮಾಣವಾಗಬೇಕು. ಗೆದ್ದಾಗಲಷ್ಟೇ ಸನ್ಮಾನ ಮಾಡಿ ಪ್ರಚಾರ ಪಡೆಯಲು ಮುನ್ನುಗ್ಗುವ ರಾಜಕಾರಣಿಗಳು, ಅಧಿಕಾರ ವರ್ಗವು, ಪ್ರತಿಭೆಗಳನ್ನು ಗುರುತಿಸಿ ಪೋಷಿಸುವ ಕೆಲಸಕ್ಕೆ ಮುಂದಾಗಬೇಕು. ಆಗಲೇ ನೀರಜ್ ಸಾಧನೆಯ ಮೌಲ್ಯ ನೂರ್ಮಡಿಯಾಗುತ್ತದೆ.

ನಿಜ ನಾಯಕನನ್ನು ಯಾವ ಮತಕ್ಷೇತ್ರವೂ ಕಡೆಗಣಿಸುವುದಿಲ್ಲ. ಆದರೆ...

ಮತದಾರರ ಒಲವೇ ಗೆಲುವ ಚಂದಿರ



ವಿಶ್ಲೇಷಣೆ

ಟಿ.ಕೆ. ತ್ಯಾಗರಾಜ್

ಬರುವ ವರ್ಷ ನಡೆಯಲಿರುವ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಕೊನೆಯ ಬಾರಿ ಸ್ಪರ್ಧಿಸುವುದಾಗಿ ಹೇಳುತ್ತಿರುವ ಕಾಂಗ್ರೆಸ್ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಗೆಲುವಿನ ಖಾತರಿಗಾಗಿ ಸುರಕ್ಷಿತ ಕ್ಷೇತ್ರ ಹುಡುಕುತ್ತಿದ್ದಾರೆ. ಕೋಲಾರ, ಹುಣಸೂರು ಸೇರಿದಂತೆ ಮೂರ್ನಾಲ್ಕು ಕಡೆಗಳಿಂದ ಸ್ಪರ್ಧಿಸುವಂತೆ ತಮಗೆ ಆಹ್ವಾನ ಬಂದಿರುವುದಾಗಿ ಅವರೇ ಹೇಳಿಕೊಂಡಿದ್ದಾರೆ. ಆದರೆ ವಾಸ್ತವ ಪರಿಸ್ಥಿತಿ ಹಾಗಿಲ್ಲ. ತಮ್ಮ ಕ್ಷೇತ್ರದ 'ಅತಿಕ್ರಮಣ'ದ ವಿರುದ್ಧ ಬಿ.ಬಿ. ಚಿಮ್ಮನಕಟ್ಟಿ ಬಹಿರಂಗವಾಗಿಯೇ ದನಿ ಎತ್ತಿದ ನಂತರ ಸಿದ್ದರಾಮಯ್ಯ ಸುರಕ್ಷಿತ ಹೊಸ ಕ್ಷೇತ್ರ ಹುಡುಕಲೇಬೇಕಾದ ಅಸಹಾಯಕ ಸ್ಥಿತಿ ಎದುರಿಸುತ್ತಿದ್ದಾರೆ. ಯಾಕೆಂದರೆ 2018ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲಿನ ಸುಳಿವು ಅರಿತೇ ಕುರುಬ ಸಮುದಾಯದ ಪ್ರಾಬಲ್ಯ ಇರುವ ಬಾದಾಮಿಯತ್ತಲೂ ಸಿದ್ದರಾಮಯ್ಯ ಪಾದ ಬೆಳೆಸಿದ್ದರು.

ಪ್ರಮುಖ ನಾಯಕನಿಗೇ ಒಂದು ಸುರಕ್ಷಿತ ಕ್ಷೇತ್ರ ಇಲ್ಲ ಎಂದು ಊಹಿಸುವುದೇ ಕರುಣಾಜನಕವಾಗಿದೆ. ಈ ಹಿಂದೆ ಚಾಮುಂಡೇಶ್ವರಿ, ವರುಣಾ, ಬಾದಾಮಿ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಸೋಲು, ಗೆಲುವುಗಳೆರಡನ್ನೂ ಕಂಡಿದ್ದ ಸಿದ್ದರಾಮಯ್ಯ ಇಂಥ ಸ್ಥಿತಿ ತಂದುಕೊಂಡಿದ್ದಾದರೂ ಯಾಕೆ? ಸಿದ್ದರಾಮಯ್ಯ ಜೆಡಿಎಸ್‌ನಿಂದ ಹೊರಬಿದ್ದು ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡಿದ ನಂತರ 2006ರಲ್ಲಿ ನಡೆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಅವರ ಗೆಲುವು ಮಹತ್ವದ್ದು. ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಎದುರು ಜೆಡಿಎಸ್ ಕಣಕ್ಕಿಳಿಸಿದ ಲಿಂಗಾಯತ ಅಭ್ಯರ್ಥಿಯನ್ನು ಬಿಜೆಪಿ ಬೆಂಬಲಿಸಿದ ಫಲ ರಾಜ್ಯದ ಪ್ರಬಲ ಜಾತಿಗಳಾದ ಒಕ್ಕಲಿಗರು ಮತ್ತು ಲಿಂಗಾಯತರು ಒಗ್ಗೂಡಿದರು. ಆದರೂ 'ಅಹಿಂದ' ಮತಗಳ ನೆರವಿನಿಂದ ಸಿದ್ದರಾಮಯ್ಯ ಬರೀ 257 ಮತಗಳಿಂದ ಜಯ ಗಳಿಸಿದರು.

ಆದರೆ ಗೆಲುವಿನ ನಂತರ ಆ ಕ್ಷೇತ್ರದ ಮತದಾರರ ವಿಶ್ವಾಸ ಗಳಿಸುವ ಮಾರ್ಗ ಹುಡುಕದೇ ಮುಂದಿನ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರವನ್ನು ಬಿಟ್ಟು ವರುಣಾ ಕ್ಷೇತ್ರದ ಮಾರ್ಗ ಹುಡುಕಿದ್ದು ಸಿದ್ದರಾಮಯ್ಯ ಮಾಡಿದ ಮೊದಲ ತಪ್ಪಾಗಿತ್ತು. 2018ರಲ್ಲಿ ವರುಣಾ ಕ್ಷೇತ್ರವನ್ನು ಪುತ್ರ ಪ್ರೇಮದಿಂದ ಯತೀಂದ್ರಗೆ ಬಿಟ್ಟುಕೊಟ್ಟು ವಾಪಸ್ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಬಂದಿದ್ದು ಎರಡನೇ ತಪ್ಪಾಗಿತ್ತು. ಈ ಹನ್ನೆರಡು ವರ್ಷಗಳಲ್ಲಿ ಸೃಷ್ಟಿಯಾದ ಹೊಸ ಲೆಕ್ಕಾಚಾರಗಳನ್ನು ಅರಿತುಕೊಳ್ಳುವಲ್ಲಿ ಸಿದ್ದರಾಮಯ್ಯ ವಿಫಲರಾದರು. ಅದರ ಬದಲಿಗೆ ಚಾಮುಂಡೇಶ್ವರಿ ಕ್ಷೇತ್ರದಲ್ಲೇ ಉಳಿದು ಅಲ್ಲಿನ ಅಹಿಂದ ಸಮುದಾಯಗಳು, ಒಕ್ಕಲಿಗರು, ಲಿಂಗಾಯತರು ಸೇರಿದಂತೆ ಎಲ್ಲ ಸಮುದಾಯಗಳಲ್ಲಿ ವಿಶ್ವಾಸ ಮೂಡುವಂತೆ ಕೆಲಸ ಮಾಡಿದ್ದರೆ ಇವತ್ತಿನ ಸ್ಥಿತಿ ಖಂಡಿತ ಬರುತ್ತಿರಲಿಲ್ಲ. ಒಗ್ಗೂಡಿದ ಒಕ್ಕಲಿಗರು ಮತ್ತು ಲಿಂಗಾಯತರನ್ನು ಎದುರಿಸಿ ಗೆದ್ದಿದ್ದ ಸಿದ್ದರಾಮಯ್ಯ ಅದೇ ಚಾಮುಂಡೇಶ್ವರಿ ಕ್ಷೇತ್ರವನ್ನೇ ತಮ್ಮ ರಾಜಕೀಯದ ಪುಣ್ಯ ಭೂಮಿಯಂತೆ ಕಂಡಿದ್ದರೆ ಆನಂತರದ ಚುನಾವಣೆಗಳ ಫಲಿತಾಂಶವೂ ಅವರ ಪಾಲಿಗೆ ಸಕಾರಾತ್ಮಕವಾಗಿರುತ್ತಿತ್ತು. ನಿಜ ನಾಯಕನ ಕೆಲಸ ಎಲ್ಲ ಸಮುದಾಯಗಳನ್ನು ಒಗ್ಗೂಡಿಸಿ ಮುನ್ನಡೆಯುವುದು. ಆದರೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ನಂತರ ವರುಣಾ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಕಣ್ಣು ಕುಕ್ಕುವಂತೆ ಮಾಡಿದ್ದರೆ ಅವರ ರಾಜಕೀಯ ಎದುರಾಳಿ ಜಿ.ಟಿ.ದೇವೇಗೌಡರು ಪ್ರತಿನಿಧಿಸಿದ ಚಾಮುಂಡೇಶ್ವರಿ ಕ್ಷೇತ್ರ ಮಂಕಾಗಿತ್ತು ಎನ್ನುವ ದೂರು ಜೋರಾಗಿಯೇ ಇತ್ತು. ಅವರು 2008ರ ನಂತರ ನಿರ್ಲಕ್ಷಿಸಿದ್ದ ಚಾಮುಂಡೇಶ್ವರಿ ಕ್ಷೇತ್ರಕ್ಕೆ ವಾಪಸಾಗುವ ಜತೆ ಬಾದಾಮಿಯಿಂದಲೂ ಸ್ಪರ್ಧಿಸಿದ್ದು ಇಡೀ ರಾಜ್ಯಕ್ಕೆ ತಮ್ಮ ಅಸಹಾಯಕ ಸ್ಥಿತಿಯ ಬಗ್ಗೆ ಸಂದೇಶ ರವಾನಿಸಿದಂತಿತ್ತು. ಅದು ನಿಸ್ಸಂದೇಹವಾಗಿ ಒಟ್ಟು ಚುನಾವಣಾ ಫಲಿತಾಂಶದ ಮೇಲೂ ಪರಿಣಾಮ ಬೀರಿತ್ತು.

ಹಾಗೆಂದ ಮಾತ್ರಕ್ಕೆ ಕ್ಷೇತ್ರ ಬದಲಾವಣೆಯ ಅಸಹಾಯಕತೆ ಸಿದ್ದರಾಮಯ್ಯ ಅವರಲ್ಲಿ ಮಾತ್ರವಲ್ಲ, 'ಇಂಡಿಯಾ ಟುಡೇ' ನಿಯತಕಾಲಿಕದಿಂದ ದೇಶದ ನಂಬರ್ ಒನ್ ಮುಖ್ಯಮಂತ್ರಿ ಎಂದು ಕರೆಸಿಕೊಂಡಿದ್ದ ಎಸ್.ಎಂ.ಕೃಷ್ಣ ಅಧಿಕಾರದಲ್ಲಿದ್ದಾಗಲೇ ನಡೆದ 2004ರ ವಿಧಾನಸಭಾ ಚುನಾವಣೆಯಲ್ಲಿ ಮದ್ದೂರಿನಿಂದ ಬೆಂಗಳೂರಿನ ಚಾಮರಾಜಪೇಟೆ ಕ್ಷೇತ್ರಕ್ಕೆ ಏಕೆ ಬಂದರು? ಮದ್ದೂರಿನಲ್ಲಿ ಸೋಲಿನ ಸುಳಿವು ದೊರೆತ ಕಾರಣದಿಂದಲೇ ಕೃಷ್ಣ ಅವರು ಚಾಮರಾಜಪೇಟೆಗೆ ಕ್ಷೇತ್ರಾಂತರ ಮಾಡಿದರು. ನಿಜ ನಾಯಕನನ್ನು ಜನ ಅಷ್ಟು ಸುಲಭವಾಗಿ ಕೈ ಬಿಡುವುದಿಲ್ಲ. ಜನರ ಮನದಂಗಣದಿಂದ ದೂರವಾದ ನಾಯಕ ಮಾತ್ರ ಅಸಹಾಯಕನಾಗಬಹುದು. ಅಷ್ಟೇ ಏಕೆ? ದೇವೇಗೌಡರು ಸೇರಿದಂತೆ ಅವರ ಕುಟುಂಬದ ಕೆಲವು ಸದಸ್ಯರು ಕ್ಷೇತ್ರಾಂತರ ಮಾಡಿದ್ದಾರೆ. 2019ರಲ್ಲಿ ದೇವೇಗೌಡರು ಮೊಮ್ಮಗ ಪ್ರಜ್ವಲ್ ರೇವಣ್ಣ ಮೇಲಿನ ಪ್ರೀತಿಯಿಂದ ಹಾಸನ ಲೋಕಸಭಾ ಕ್ಷೇತ್ರ ಬಿಟ್ಟುಕೊಟ್ಟು ತುಮಕೂರು ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋಲನುಭವಿಸಿದರು. ಎಚ್.ಡಿ. ಕುಮಾರಸ್ವಾಮಿ ಅವರ ಪತ್ನಿ ಅನಿತಾ ಅವರು ಮೊದಲು ತುಮಕೂರು ಜಿಲ್ಲೆಯ ಮಧುಗಿರಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದರೆ, 2018ರ ಉಪಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ಆಯ್ಕೆಯಾದರು. ಈ ಉಪಚುನಾವಣೆಗೆ ಮುಖ್ಯ ಕಾರಣ ಕುಮಾರಸ್ವಾಮಿ. ಸಿ.ಪಿ.ಯೋಗೇಶ್ವರ್ ಅವರಿಗೆ ರಾಜಕೀಯ ನೆಲೆ ಇಲ್ಲದಂತೆ ಮಾಡುವ ಏಕೈಕ ಗುರಿಯೊಂದಿಗೆ ಡಿ.ಕೆ.ಶಿವಕುಮಾರ್ ಜತೆ ಕೈಜೋಡಿಸಿ ರಾಮನಗರ ಮತ್ತು ಚನ್ನಪಟ್ಟಣ ಕ್ಷೇತ್ರಗಳಿಂದ ಸ್ಪರ್ಧಿಸಿ ಎರಡರಲ್ಲೂ ಗೆದ್ದರು. ಬಳಿಕ, ಯೋಗೇಶ್ವರ್ ಸೋತ ಚನ್ನಪಟ್ಟಣ ಉಳಿಸಿಕೊಂಡು ರಾಮನಗರ ಕ್ಷೇತ್ರದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ ಫಲ ಈ ಉಪಚುನಾವಣೆ.




ಕ್ಷೇತ್ರ ಬದಲಾವಣೆಗೆ ಕಾರಣಗಳು ಅನೇಕ ಇವೆ. ವಿಚಿತ್ರ ಎಂದರೆ ದೇವೇಗೌಡ, ಸಿದ್ದರಾಮಯ್ಯ, ಎಸ್.ಎಂ. ಕೃಷ್ಣ ಅವರಂತೆ ಪ್ರಮುಖ ನಾಯಕರಾದ ಬಿಜೆಪಿಯ ಯಡಿಯೂರಪ್ಪ ಸೋಲು– ಗೆಲುವುಗಳ ನಡುವೆ ಒಮ್ಮೆಯೂ ತಮ್ಮ ಕಾರ್ಯಕ್ಷೇತ್ರವಾದ ಶಿಕಾರಿಪುರ ಬಿಟ್ಟು ಬೇರೆ ಕ್ಷೇತ್ರ ಹುಡುಕಲಿಲ್ಲ. ಲೋಕಸಭಾ ಸದಸ್ಯರಾದಾಗಲೂ ಅವರ ಆಯ್ಕೆ ಶಿವಮೊಗ್ಗವೇ ಆಗಿತ್ತು. ಹಾಗೇ ಎಸ್.ಬಂಗಾರಪ್ಪ 1967ರಿಂದ 1996ರವರೆಗೆ ಸೊರಬ ವಿಧಾನಸಭಾ ಕ್ಷೇತ್ರದಿಂದಲೇ ನಿರಂತರವಾಗಿ ಆಯ್ಕೆಯಾಗಿ 'ಸೋಲಿಲ್ಲದ ಸರದಾರ' ಎನಿಸಿಕೊಂಡಿದ್ದರು. ಲೋಕಸಭೆಗೆ ಅವರ ಆಯ್ಕೆಯೂ ಶಿವಮೊಗ್ಗವೇ ಆಗಿತ್ತು.

ಇವೆಲ್ಲವನ್ನೂ ನೋಡುವಾಗ ನನಗೆ ನೆನಪಾಗುವುದು ಜಾರ್ಜ್ ಫರ್ನಾಂಡಿಸ್. ಕರ್ನಾಟಕದ ಜಾರ್ಜ್ ಮುಂಬೈಗೆ ತೆರಳಿ ರಾಮಮನೋಹರ ಲೋಹಿಯಾ ಪ್ರಭಾವದಿಂದ ಸಮಾಜವಾದಿಯಾದವರು. ರೈಲ್ವೆ ಕಾರ್ಮಿಕರನ್ನು ಸಂಘಟಿಸಿ ಜನಸಮುದಾಯವನ್ನು ಆಕರ್ಷಿಸಿ ನಾಯಕರಾಗಿ ರೂಪುಗೊಂಡವರು. 1967ರಲ್ಲಿ ಬಾಂಬೆ ದಕ್ಷಿಣ ಕ್ಷೇತ್ರ ಸೇರಿದಂತೆ ಬಿಹಾರದ ಮುಜಫ್ಫರ್‌ಪುರ ಮತ್ತು ನಳಂದದಿಂದ ಒಟ್ಟು ಒಂಬತ್ತು ಸಲ ಲೋಕಸಭೆಗೆ ಮತ್ತು ಒಮ್ಮೆ ರಾಜ್ಯಸಭೆಗೆ ಆಯ್ಕೆಯಾಗಿದ್ದ ಜಾರ್ಜ್ ಫರ್ನಾಂಡಿಸ್ ಒಕ್ಕೂಟ ಸರ್ಕಾರದಲ್ಲಿ ಕೈಗಾರಿಕಾ ಸಚಿವರಾಗಿ, ರಕ್ಷಣಾ ಸಚಿವರಾಗಿ ಕಾರ್ಯ ನಿರ್ವಹಿಸಿದವರು. ಅವರು ಯಾವ ರಾಜ್ಯಕ್ಕೆ ಸೇರಿದವರು, ಯಾವ ಧರ್ಮಕ್ಕೆ ಸೇರಿದವರು, ಯಾವ ಜಾತಿಗೆ ಸೇರಿದವರು ಎಂದು ಯಾರೂ ಕೇಳಲಿಲ್ಲ. ಅವರ ಗೆಲುವುಗಳ ಧಾರಾವಾಹಿಗೆ ಜನಪರ ಕ್ರಿಯಾಶೀಲ ವ್ಯಕ್ತಿತ್ವ ಕಾರಣವಾಗಿದ್ದರೆ, ರಾಷ್ಟ್ರಮಟ್ಟದ ರಾಜಕೀಯ ಲೆಕ್ಕಾಚಾರಗಳು ಬದಲಾಗಿದ್ದು ಸೋಲುಗಳಿಗೆ ಕಾರಣವಾಗಿತ್ತು. ಕರ್ನಾಟಕದ ಹೊರಗೆ ತಮ್ಮ ಸಂಘಟನಾ ಚಾತುರ್ಯ, ಕ್ರಿಯಾಶೀಲತೆ, ಕಾರ್ಯಕ್ಷಮತೆ, ದಕ್ಷತೆ, ಪ್ರಾಮಾಣಿಕತೆ, ಸರಳತೆಯಿಂದಲೇ ಜನಪ್ರಿಯ ನಾಯಕರಾಗಿದ್ದ ಜಾರ್ಜ್ ಫರ್ನಾಂಡಿಸ್ 1984ರಲ್ಲಿ ಬೆಂಗಳೂರು ಉತ್ತರ ಕ್ಷೇತ್ರದಿಂದ ಸ್ಪರ್ಧಿಸಿ ಸೋಲನುಭವಿಸಿದರೆ ಕರ್ನಾಟಕವೇನೂ ಕಣ್ಣೀರಿಡಲಿಲ್ಲ. ಅಂದಹಾಗೆ 2019ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಭದ್ರಕೋಟೆ ಎನಿಸಿಕೊಂಡಿದ್ದ ಒಕ್ಕಲಿಗ ಪ್ರಾಬಲ್ಯದ ಮಂಡ್ಯ ಕ್ಷೇತ್ರದಿಂದ ಸುಮಲತಾ ಅವರು ಅಂಬರೀಷ್ ನಿಧನದ ಅನುಕಂಪದ ಅಲೆಯಿಂದ ಮಾತ್ರ ಗೆದ್ದರೆಂದು ಹೇಳಲಾಗದು. ಅದು ಕೂಡ ಬದಲಾವಣೆ ಬಯಸಿದ್ದ ಜಾತ್ಯತೀತ ನಿಲುವಿನ ಗೆಲುವಾಗಿತ್ತು.

ನಿಜ ನಾಯಕನನ್ನು ಯಾವ ಮತಕ್ಷೇತ್ರವೂ ಕಡೆಗಣಿಸುವುದಿಲ್ಲ. ಆದರೆ ಕ್ಷೇತ್ರವನ್ನು ಕಡೆಗಣಿಸಿ ಜನರಿಂದ ದೂರವಾದ ಜನಪ್ರತಿನಿಧಿಯು ಅಧಿಕಾರ ರಾಜಕಾರಣದಲ್ಲಿ ದುರ್ಬಲನಾಗುತ್ತಾನೆ.

ಚುರುಮುರಿ



ತ್ಯಾಗರಾಜಾ ಹುಲಿ!

• ಚಂದ್ರಕಾಂತ ವಡ್ಡು

ಅಡುಗೆ ಮನೆಯಿಂದ ಎಂದಿನ ಗೊಣಗಾಟ ಕೇಳದೆ ಗಾಬರಿಯಾಗಿದ್ದ ತಿಂಗಳೇಶ, ಮಡದಿ ಮುಖಕ್ಕೆ ಮಾಸ್ಕ್ ಧರಿಸಿದ್ದನ್ನು ಕಂಡು ಇನ್ನಷ್ಟು ವಿಚಲಿತನಾದ.

'ಏನಾಯ್ತು...? ಜ್ವರ ಇದೆಯಾ? ನೆಗಡಿ...? ಗಂಟಲು ಕೆರೆತ? ವಾಸನೆ ಗೊತ್ತಾಗುತ್ತಾ...?'

ತಿಂಗಳೇಶನ ಯಾವ ಪ್ರಶ್ನೆಗೂ ಮೌನ ಮುರಿಯದ ಹೆಂಡತಿ ಅಡುಗೆ ಕೆಲಸದಲ್ಲಿ ನಿರತಳು. ಅಪ್ಪನ ಎತ್ತರದ ದನಿ ಕೇಳಿ ಹತ್ತಿರ ಬಂದ ಮಗ, 'ಅಮ್ಮ ಮಾತಾಡಲ್ವಂತೆ... ಅದ್ಯಾರೋ 'ಬಾಯಿ ಮುಚ್ಚಿಕೊಂಡು ಸುಮ್ಮನೆ ಕೆಲಸ ಮಾಡಬೇಕು' ಅಂತ ಧಮಕಿ ಕೊಟ್ಟಿದ್ದನ್ನು ಟೀವಿಯಲ್ಲಿ ಕೇಳಿಸಿಕೊಂಡು ತಾನೂ ಪಾಲಿಸುತ್ತಿದ್ದಾಳೆ'.

'ಅಯ್ಯೋ ಅದು ಜಮೀರ್ ಭಾಯಿ ಮತ್ತು ಅವರ ಬಾಯಿಗೆ ಸಂಬಂಧಿಸಿದ್ದು, ನಿಮ್ಮ ತಾಯಿಗೆ ಏನಂತೆ? ತಮ್ಮದು ಕೈ ಪಕ್ಷ, ಬಾಯಿ ಪಕ್ಷ ಅಲ್ಲ. ಕೆಲಸ ಜಾಸ್ತಿ ಮಾಡ್ರಿ, ಕೈ ಕೆಸರಾದರೆ ಬಾಯಿ ಮೊಸರು ಅಂತ ಅಧ್ಯಕ್ಷರು ಕನಕಪುರ ಭಾಷೆಯಲ್ಲಿ ಹೇಳಿದ್ದಾರೆ. ಚಾಮರಾಜಪೇಟೆ ಭಾಯಿಗೆ ಸರಿಯಾಗಿ ಅರ್ಥವಾಗದೆ 'ಬಾಯಿ ಕೆಸರಾದರೆ ಕೈ ಮೊಸರು' ಅಂತ ಕೇಳಿಸಿಕೊಂಡು ಪದೇ ಪದೇ ಎಡವಟ್ಟಾಗುತ್ತಿದೆ. ಒಟ್ನಲ್ಲಿ ಕೈಯಿ, ಬಾಯಿ ಎಲ್ಲಾ ಕೆಸರುಮಯ ಆಗಿ ಅದರಲ್ಲಿ ಕಮಲ ಅರಳೋ ಹಾಗೆ ಕಾಣಿಸುತ್ತೆ...!'

'ಈಗ ಅಮ್ಮನ ಕೈ ಮುಸುರೆಯಾಗಿವೆ; ಬಾಯಿಗೆ ಮೊಸರೂ ಇಲ್ಲ, ಬೆಣ್ಣೆನೂ ಇಲ್ಲ...'

ಇವರ ಮಾತುಗಳನ್ನು ಕೇಳಿ ರೋಸಿದ ತಾಯಿ ಕೊನೆಗೂ ಬಾಯಿ ಬಿಟ್ಟಳು: 'ರಾಜ್ಯದಲ್ಲಿ ಏನೇನೋ ನಡೀತಿದೆ... ನಿಮಗೆ ಒಂದೂ ತಿಳಿಯೋದಿಲ್ಲ... ಅಪ್ಪ-ಮಗ ಇರೋದೇ ನನ್ನ ಆಡಿಕೊಳ್ಳೋದಕ್ಕೆ... ತ್ಯಾಗ ಅಂದ್ರೆ ಏನು ಗೊತ್ತೇನ್ರೀ...?'

'ಹೋ... ಗೊತ್ತು ಗೊತ್ತು. ಸಭಾತ್ಯಾಗ, ಪ್ರಾಣತ್ಯಾಗ, ಅಧಿಕಾರತ್ಯಾಗ, ಶಸ್ತ್ರತ್ಯಾಗ... ಬೇಕಾದಷ್ಟು ತ್ಯಾಗಗಳಿವೆ. ತ್ಯಾಗರಾಜ ಮತ್ತು ಅವರ ಕೀರ್ತನೆಗಳೂ ಗೊತ್ತು. ಏನೀಗ...?'

'ಎಲ್ಲಾ ಸರಿ. ನಿಮಗೆ ತ್ಯಾಗರಾಜಾ ಹುಲಿ ಗೊತ್ತಾ?' ಈಗ ಬಾಯಿ ಮುಚ್ಚಿಕೊಳ್ಳುವ ಸರದಿ ತಿಂಗಳೇಶನದು. 'ಅದೇರೀ... ಮಗನಿಗಾಗಿ ಶಿಕಾರಿಪುರ ಕ್ಷೇತ್ರತ್ಯಾಗ ಮಾಡಿದ ಹುಲಿ... ನಿಮಗೆ ಹುಲಿನೇ ಗೊತ್ತಿಲ್ಲಾ ಅಂದ್ರೆ ರಾಣೆಬೆನ್ನೂರಿನ ತ್ಯಾಗಮಯಿ ಕೋಳಿ ಹೇಗೆ ಗೊತ್ತಿರಲು ಸಾಧ್ಯ?'

ದಿನದ ಟ್ವೀಟ್

ಹೊಸ ದಂಪತಿ, ಹಳೆಯ ಪ್ರೇಮಕಥೆ



ನನಗೆ ಪರಿಚಿತರಾದ, ಹೊಸದಾಗಿ ಮದುವೆಯಾದ ದಂಪತಿಯು ಈಚೆಗೆ ತಾಜ್ ಮಹಲ್ ನೋಡಿಬಂದು ನನ್ನನ್ನು ಭೇಟಿ ಮಾಡಿದರು. ನಾನು ರಾಮಸೇತು ಪುನರುಜ್ಜೀವನಕ್ಕೆ ಏಕೆ ಉತ್ಸುಕನಾಗಿದ್ದೇನೆ ಎಂದು ಮಾತುಕತೆ ವೇಳೆ ನನ್ನನ್ನು ಪ್ರಶ್ನಿಸಿದರು. ರಾಮ ಸೇತು, ತಾಜ್ ಮಹಲ್‌ಗಿಂತಲೂ ಹಳೆಯದಾದ ಒಂದು ಪ್ರೇಮಕಥೆ ಎಂದು ನಾನು ಹೇಳಿದೆ. ಹೀಗಾಗಿ, ನಾನು ಅವರನ್ನು ರಾಮ ಸೇತುವನ್ನು ಏಕೆ ಮೊದಲು ನೋಡಲು ಹೋಗಲಿಲ್ಲ ಎಂದು ಕೇಳಿದೆ.

ಸುಬ್ರಮಣಿಯನ್ ಸ್ವಾಮಿ, ಬಿಜೆಪಿ ಮುಖಂಡ

ಕಿಡಿನುಡಿ



ಕೋವಿಡ್ ವೇಳೆ ಎಲ್ಲ ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು, ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುತ್ತೇವೆ ಎಂದು ಅಬ್ಬರಿಸಿ ಬೊಬ್ಬಿರಿದ ಸರ್ಕಾರವು ಕೋವಿಡ್ ಇಳಿದ ಮೇಲೆ ತಣ್ಣಗಾಗಿದೆ. ಆಕ್ಸಿಜನ್ ಘಟಕ, ವೆಂಟಿಲೇಟರ್ ಸೇರಿ ಖರೀದಿ ಮಾಡಿದ ವೈದ್ಯ ಪರಿಕರಗಳೆಲ್ಲ ಅನೇಕ ಕಡೆ ದೂಳು ತಿನ್ನುತ್ತಿವೆ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 26-7-1997

• **ರಾಷ್ಟ್ರಪತಿಯಾಗಿ ನಾರಾಯಣನ್ ಪ್ರಮಾಣವಚನ**

ನವದೆಹಲಿ, ಜುಲೈ 25 (ಪಿಟಿಐ, ಯುಎನ್ಐ)– ದೇಶದ ಹತ್ತನೇ ರಾಷ್ಟ್ರಪತಿಯಾಗಿ ಕೊಚೇರಿಲ್ ರಾಮನ್ ನಾರಾಯಣನ್ ಇಂದು ಪ್ರಮಾಣವಚನ ಸ್ವೀಕರಿಸಿದರು.

ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಜೆ.ಎಸ್. ವರ್ಮಾ ಅವರು ರಾಷ್ಟ್ರಪತಿ ಹುದ್ದೆಯಿಂದ ನಿರ್ಗಮಿಸಿದ ಡಾ. ಶಂಕರ್ ದಯಾಳ್ ಶರ್ಮಾ ಅವರ ಸಮ್ಮುಖದಲ್ಲಿ ನಾರಾಯಣನ್ ಅವರಿಗೆ ಪ್ರಮಾಣವಚನ ಬೋಧಿಸಿದರು.

ನಾರಾಯಣನ್ ಹಿಂದಿ ಭಾಷೆಯಲ್ಲಿ ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಸ್ವಾತಂತ್ರ್ಯೋತ್ಸವದ ಸುವರ್ಣ ವರ್ಷದ ಆಚರಣೆಯ ಸಮಯದಲ್ಲಿ ನಾರಾಯಣನ್ ರಾಷ್ಟ್ರದ ಅತ್ಯುನ್ನತ ಪದವಿ ಅಲಂಕರಿಸಿದ ಮೊದಲ ದಲಿತ ವ್ಯಕ್ತಿಯಾಗಿದ್ದಾರೆ.

• **ಲಾಲೂ ರಾಜೀನಾಮೆ: ಪತ್ನಿ ರಾಬ್ಡಿ ದೇವಿ ಉತ್ತರಾಧಿಕಾರಿ**

ಪಟ್ನಾ, ಜುಲೈ 25 (ಪಿಟಿಐ, ಯುಎನ್ಐ)– ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಲಾಲೂ ಅವರ ಉತ್ತರಾಧಿಕಾರಿಯಾಗಿ ಅವರ ಪತ್ನಿ ರಾಬ್ಡಿ ದೇವಿ ಅವರು ಆಯ್ಕೆಯಾಗಿದ್ದು ಇಂದು ಸಂಜೆ ಪ್ರಮಾಣವಚನ ಸ್ವೀಕರಿಸಿದರು.

ಬಂಧನಕ್ಕೆ ತಡೆ: ಪಟ್ನಾ ಹೈಕೋರ್ಟಿನ ಆಜ್ಞೆಯನ್ನು ಪ್ರಶ್ನಿಸಿ ಲಾಲೂ ಅವರು ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳುವವರೆಗೆ ಅವರನ್ನು ಬಂಧಿಸದಂತೆ ಸುಪ್ರೀಂ ಕೋರ್ಟ್ ಇಂದು ಸಿಬಿಐಗೆ ನಿರ್ದೇಶನ ನೀಡಿತು.

50 ವರ್ಷಗಳ ಹಿಂದೆ

ಬುಧವಾರ, 26-7-1972

• **ರಾಜ್ಯದ ಹೆಸರು 'ಕರ್ನಾಟಕ'**

ಬೆಂಗಳೂರು, ಜುಲೈ 25– ಸಂತೋಷ, ಸಂಭ್ರಮಗಳಿಂದ ಪುಳಕಿತಗೊಂಡ ವಿಧಾನ-ಸಭೆಯಲ್ಲಿ ರಾಜ್ಯದ ಹೆಸರನ್ನು 'ಕರ್ನಾಟಕ' ಎಂದು ಬದಲಾಯಿಸಲು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಇಂದು ಮಂಡಿಸಿದ ಐತಿಹಾಸಿಕ ನಿರ್ಣಯಕ್ಕೆ ದೊರಕಿದ ಸ್ವಾಗತ ಸಂಪೂರ್ಣ ಅಖಂಡ.

ಕರತಾಡನ, ಸಿಹಿ ಹಂಚಿಕೆ ನಡುವೆ ಸುಮಾರು 3 ಗಂಟೆಗಳ ಕಾಲ ಚರ್ಚೆಯಲ್ಲಿ ಭಾಗವಹಿಸಿದ್ದ ಸದಸ್ಯರು, ನವ ನಾಮಕರಣಕ್ಕೆ ದಿಟ್ಟ ಹೆಜ್ಜೆಯಿಟ್ಟ ಸರ್ಕಾರವನ್ನು ಅಭಿನಂದಿಸಿದರು.

ಚರ್ಚೆ ಮುಗಿದು ನಿರ್ಣಯ ಇಂದೇ ಅಂಗೀಕಾರವಾಗಬೇಕೆಂದಿದ್ದರೂ, ಸದಸ್ಯರ ಮಾತಿನ ಉತ್ಸಾಹವನ್ನನುಸರಿಸಿ, ಚರ್ಚೆಯನ್ನು ನಾಳೆಯೂ ಮುಂದುವರಿಸಲು ಅಧ್ಯಕ್ಷೆ ಶ್ರೀಮತಿ ಕೆ.ಎಸ್.ನಾಗರತ್ನಮ್ಮ ಅವರು ಅವಕಾಶ ನೀಡಿದರು. ರಾಹುಕಾಲದ ಆರಂಭಕ್ಕೆ ಮುಂಚಿತವಾಗಿ, ಮಧ್ಯಾಹ್ನ ಎರಡೂವರೆ ಗಂಟೆಗೆ ಅರಸು ಅವರು ಸಭೆಯ ಮುಂದೆ ನಿರ್ಣಯ ಮುಂದಿಟ್ಟರು.

• **ತಪ್ಪಾಗಿ ಕಾಶ್ಮೀರವನ್ನು ಗುರುತಿಸಿದ್ದ ಭೂಪಟ ಬಳಕೆಗೆ ನಿಷೇಧ**

ಬೆಂಗಳೂರು, ಜುಲೈ 25– ಕಾಶ್ಮೀರವನ್ನೂ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶದಂತೆ ನೆರೆರಾಷ್ಟ್ರವನ್ನಾಗಿ ತೋರಿರುವ ನಕ್ಷೆಯನ್ನೊಳಗೊಂಡ ಹತ್ತನೇ ಸ್ಟ್ಯಾಂಡರ್ಡ್ ಮ್ಯಾಪ್ ಡ್ರಾಯಿಂಗ್ ಪುಸ್ತಕವನ್ನು ಹಿಂತೆಗೆದುಕೊಳ್ಳಬೇಕೆಂದು ಪ್ರಕಾಶಕರಿಗೆ ಸರ್ಕಾರ ಆಜ್ಞೆ ಮಾಡಿದೆ.

ಆ ಪುಸ್ತಕಗಳನ್ನು ಶಾಲೆಗಳಲ್ಲಿ ಬಳಸಲು ಬಿಡಬಾರದೆಂದೂ, ಅಂತಹವು ಕಂಡು ಬಂದರೆ ಮುಟ್ಟುಗೋಲು ಹಾಕಿಕೊಳ್ಳಬೇಕೆಂದೂ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಆದೇಶ ನೀಡಿದೆ.

ಸಂಗತ

ಸಂಕುಚಿತ ಚಿಂತನೆ ಯಾರಿಗೆ ಹಿತ?

ಸಮಸ್ಯೆಗಳು ಸಂಕೀರ್ಣವಾದಷ್ಟೂ ಅವುಗಳಿಗೆ ಪರಿಹಾರ ಅರಸುವ ಚಿಂತನೆಯ ಹರವೂ ವಿಸ್ತಾರಗೊಳ್ಳಬೇಕಲ್ಲವೇ?


• ಎಚ್.ಕೆ. ಶರತ್

ಯಾವುದೇ ಉತ್ಪನ್ನದ ವಿನ್ಯಾಸ ಮಾಡಲು ಹೊರಡುವವರು ಯಾವ ಹಂತದಲ್ಲಿ ಚಿಂತಿಸಬೇಕು ಎಂಬುದನ್ನು ಎಂಜಿನಿಯರ್‌ಗಳಿಗೆ ಮನಗಾಣಿಸುವ ಪರಿಕಲ್ಪನೆಯು ಎಂಜಿನಿಯರಿಂಗ್ ಸಿಸ್ಟಮ್ ಡಿಸೈನ್ ಎಂಬ ವಿಷಯದಲ್ಲಿದೆ. ಹಿಂದಿನಂತೆ ಆಯಾ ಉತ್ಪನ್ನದ ಹಂತದಲ್ಲಿ (product level) ಮಾತ್ರ ಚಿಂತಿಸಲು ಮುಂದಾದರೆ ಅದರಿಂದ ಎದುರಾಗುವ ಸಮಸ್ಯೆಗಳು ಏನೇನು ಎಂಬುದಕ್ಕೆ ಈ ಪರಿಕಲ್ಪನೆ ಕನ್ನಡಿ ಹಿಡಿಯುತ್ತದೆ. ಯಾವುದೇ ಸಮಸ್ಯೆಗೆ ಪರಿಹಾರ ಹುಡುಕುವಾಗ ನಮ್ಮ ಚಿಂತನೆಯು ವ್ಯವಸ್ಥೆಯ ಹಂತದಲ್ಲಿ (system level) ಇರಬೇಕೇ ವಿನಾ ಉತ್ಪನ್ನದ ಹಂತದಲ್ಲಿ ಅಲ್ಲ ಎಂಬುದು ಈ ಪರಿಕಲ್ಪನೆಯ ಸಾರ.

ಉದಾಹರಣೆಗೆ, ಕಾರು ವಿನ್ಯಾಸ ಮಾಡುವವರು ಕೇವಲ ಕಾರಿನ ಅಳತೆ, ಬಾಹ್ಯರೂಪ, ಕಾರ್ಯಕ್ಷಮತೆ, ಬಳಕೆದಾರ ಸ್ನೇಹಿ, ಸುರಕ್ಷತೆ, ಆರ್ಥಿಕ ಲಾಭ-ನಷ್ಟದ ಕುರಿತು ಚಿಂತಿಸದೆ, ರಸ್ತೆಗಳ ಗುಣಮಟ್ಟ, ವಾಹನ ನಿಲುಗಡೆಗೆ ಸ್ಥಳಾವಕಾಶದ ಲಭ್ಯತೆ, ಪರಿಸರ ಮಾಲಿನ್ಯ ಹೀಗೆ ತಾವು ರೂಪಿಸಲಿರುವ ಉತ್ಪನ್ನದ ಯಶಸ್ಸನ್ನು ನೇರ ಮತ್ತು ಪರೋಕ್ಷವಾಗಿ ಪ್ರಭಾವಿಸುವ ಎಲ್ಲ ಅಂಶಗಳನ್ನೂ ಪರಿಗಣಿಸಬೇಕಾಗುತ್ತದೆ. ನಗರ ಯೋಜನೆ ಪರಿಕಲ್ಪನೆ ಅನುಷ್ಠಾನಕ್ಕೆ ಬರುವ ಮುನ್ನ, ಜನ ತಮಗೆ ಸೇರಿದ ಜಾಗದಲ್ಲಿ ಮೊದಲು ಮನೆ ಕಟ್ಟಿಕೊಂಡು ಆನಂತರ ರಸ್ತೆ, ಚರಂಡಿ, ವಿದ್ಯುತ್ ಸಂಪರ್ಕ, ನೀರಿನ ಲಭ್ಯತೆ ಕುರಿತು ಚಿಂತಿಸುತ್ತಿದ್ದರು. ಆದರೆ ಇಂದು ಮನೆಗೆ ಅಗತ್ಯವಿರುವ ಪೂರಕ ವ್ಯವಸ್ಥೆಗಳನ್ನು ಮೊದಲು ಸೃಷ್ಟಿಸಿಕೊಂಡ ನಂತರವೇ ಮನೆಗಳ ನಿರ್ಮಾಣಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಈ ಬದಲಾವಣೆಯು ರಿಯಲ್ ಎಸ್ಟೇಟ್ ಉದ್ಯಮದ ಬೆಳವಣಿಗೆಗೂ ಕಾರಣವಾಗಿರುವುದು ಕಣ್ಣೆದುರೇ ಇದೆ. ಇದು ಕೂಡ ಉತ್ಪನ್ನ (ಮನೆ) ಹಂತದ ಚಿಂತನೆಯಿಂದ ವ್ಯವಸ್ಥೆಯ (ನಗರ) ಹಂತದ ಚಿಂತನೆಗೆ ಹೊರಳಿದ್ದಕ್ಕೆ ಒಂದು ನಿದರ್ಶನ.

ಇಂದು ನಾವು ಎದುರಿಸುತ್ತಿರುವ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಅರಸಬೇಕಿರುವುದು ವ್ಯವಸ್ಥೆಯ ಹಂತದಲ್ಲಿ ಎಂಬುದನ್ನು ಮನಗಾಣಿಸಲು ನಮ್ಮ ನೀತಿ ನಿರೂಪಕರು ಮುತುವರ್ಜಿ ತೋರದಿರುವುದು ಕಣ್ಣೆದುರಿನ ವಾಸ್ತವ. ಇಂತಹದೊಂದು ಅರಿವು ನಮ್ಮಲ್ಲಿ ಸ್ವತಃ ಮೂಡದೇ ಹೋದಲ್ಲಿ ನಮ್ಮ ಬಹುತೇಕ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವುದು ಕಷ್ಟಸಾಧ್ಯ.

'ಅನ್ಯ'ರನ್ನು ಗುರುತಿಸಿ, ಅವರ ಕುರಿತು ಉಳಿದವರಲ್ಲಿ ತಪ್ಪುಗ್ರಹಿಕೆ ಮೂಡಿಸುವ ಕಾರ್ಯಸೂಚಿ ಜಾರಿಯಲ್ಲಿರುವ ಹೊತ್ತಿನಲ್ಲಿ, ಮುಂದಾಗುವ ಪರಿಣಾಮಗಳ ಕುರಿತು ಚಿಂತಿಸದೆ ಕೋಮು ದ್ವೇಷದ ನಂಜು ಹಾಗೂ ಸುಳ್ಳು ಹರಡಲು ಪ್ರಭುತ್ವದೊಂದಿಗೆ ಕೈಜೋಡಿಸುತ್ತಿರುವವರು ಕೂಡ ವ್ಯವಸ್ಥೆಯ ಹಂತದಲ್ಲಿ ಚಿಂತಿಸಲು ಮುಂದಾಗಬೇಕಿದೆ. ಕೋಮು ದ್ವೇಷವೆಂಬುದು ಎರಡು ಅಲಗಿನ ಕತ್ತಿಯಾಗಿರುವುದರಿಂದ, ಒಂದು ಅಲಗು ಅನ್ಯರತ್ತ ಗುರಿ ಮಾಡಿದ್ದರೆ, ಮತ್ತೊಂದು ಅಲಗು ಉಳಿದವರನ್ನೂ ಗಾಸಿಗೊಳಿಸಲಿದೆ. ತಮ್ಮ ಮಕ್ಕಳನ್ನೂ ಒಳಗೊಳ್ಳುವ ಮುಂದಿನ ತಲೆಮಾರಿನ ಕುರಿತು ಕಾಳಜಿ ಹೊಂದಿರುವ ಯಾರೇ ಆದರೂ, ಕಾನೂನು ಸುವ್ಯವಸ್ಥೆಗೆ ಮನ್ನಣೆ ನೀಡುವ ಸಮಾಜ ನಿರ್ಮಿಸುವುದರೆಡೆಗೆ ಮುತುವರ್ಜಿ ತೋರಬೇಕು. ಅದರ ಬದಲಿಗೆ, ಅಧಿಕಾರದಾಸೆಗೆ ಧರ್ಮದ ಆಧಾರದಲ್ಲಿ ಮನಸ್ಸುಗಳನ್ನು ಒಡೆಯುವವರ ಒಡ್ಡೋಲಗಕ್ಕೆ ಕುಣಿಯುವ ಹೊಣೆಗೇಡಿತನ ಪ್ರದರ್ಶಿಸಬಾರದು. ನಾವು- ಅವರು ಎನ್ನುವುದು ಈ ಕಾಲಕ್ಕೆ ಸೂಕ್ತವಲ್ಲದ ಉತ್ಪನ್ನ ಹಂತದ ಚಿಂತನೆ. ಇದು, ರೋಗಗ್ರಸ್ತ ಸಮಾಜ ಸೃಷ್ಟಿಸಲಷ್ಟೇ ಶಕ್ತವಾದುದು.



ನಿರುದ್ಯೋಗ ಸಮಸ್ಯೆ ತೀವ್ರವಾದಷ್ಟೂ ಮಾರುಕಟ್ಟೆಯಲ್ಲಿ ಸರಕು- ಸೇವೆಗಳಿಗೆ ಬೇಡಿಕೆ ಕುಸಿಯುತ್ತ ಬಹುತೇಕರ ಆದಾಯದ ಮೂಲಗಳಿಗೂ ಕತ್ತರಿ ಬೀಳಲಿದೆ. ದುಡಿಯುವ ದಾರಿ ಕಂಡುಕೊಳ್ಳಲಾಗದೆ ಹತಾಶರಾಗುವವರು ಅಪರಾಧ ಕೃತ್ಯಗಳಲ್ಲಿ ತೊಡಗುವ ಸಾಧ್ಯತೆ ಹೆಚ್ಚಿರುವುದರಿಂದ ಕಾನೂನು-ಸುವ್ಯವಸ್ಥೆಗೂ ಧಕ್ಕೆಯಾಗಲಿದೆ. ನಿರುದ್ಯೋಗ ಸಮಸ್ಯೆ ಕೆಲಸವಿಲ್ಲದವರ ಸಮಸ್ಯೆ ಮಾತ್ರವಲ್ಲವೆಂಬ ಅರಿವು ದಯಪಾಲಿಸುವುದು ವ್ಯವಸ್ಥೆ ಹಂತದ ಚಿಂತನೆ.

ಜಾಗತಿಕ ತಾಪಮಾನ ಏರಿಕೆ, ತ್ಯಾಜ್ಯ ನಿರ್ವಹಣೆ ಹೀಗೆ ಬಹುತೇಕ ಸಮಸ್ಯೆಗಳಿಗೆ ಪರಿಹಾರವಿರುವುದು ವ್ಯವಸ್ಥೆ ಹಂತದ ಚಿಂತನೆಯಲ್ಲೇ ವಿನಾ ಉತ್ಪನ್ನ ಹಂತದ ಚಿಂತನೆಗಳಲ್ಲಿ ಅಲ್ಲ. ಉತ್ಪನ್ನ ಹಂತದ ಚಿಂತನೆಗಳು ಕೆಲವೊಮ್ಮೆ ಸೂಕ್ತ ಪರಿಹಾರವೆಂಬಂತೆ ತೋರಿದರೂ ಅವುಗಳ ಪರಿಣಾಮ ಸೀಮಿತವಾದುದು ಎಂಬುದೂ ವಾಸ್ತವವೇ. ತಮಗೆ ಲಾಭವಾಗುವುದಿದ್ದರೆ ಮೊದಲು ರಸ್ತೆ ನಿರ್ಮಿಸಿ, ನಂತರ ಚರಂಡಿ ನಿರ್ಮಾಣಕ್ಕಾಗಿ, ವಿದ್ಯುತ್ ಕಂಬಗಳ ಸ್ಥಳಾಂತರಕ್ಕಾಗಿ ಹೊಸದಾಗಿ ನಿರ್ಮಿಸಿದ ರಸ್ತೆಯನ್ನೇ ಅಗೆಸುವ ಅಧಿಕಾರಿಶಾಹಿ ಹಾಗೂ ಜನಪ್ರತಿನಿಧಿಗಳಿಗೆ, ವ್ಯವಸ್ಥೆಯ ಹಂತದ ಚಿಂತನೆಗಿಂತ ಘಟಕ ಹಂತದ (component level) ಚಿಂತನೆಯೇ ಹೆಚ್ಚು ಲಾಭದಾಯಕವಾಗಿ ತೋರುವುದು ಅಚ್ಚರಿಯ ಬೆಳವಣಿಗೆಯೇನಲ್ಲ. ಇದೇ ಪ್ರವೃತ್ತಿ ದೇಶ ಮತ್ತು ರಾಜ್ಯ ಆಳುವವರಲ್ಲೂ ಮೈಗೂಡಿರುವಾಗ ಸಮಸ್ಯೆಗಳನ್ನು ಸಮಗ್ರವಾಗಿ ಗ್ರಹಿಸಿ, ದೀರ್ಘಕಾಲೀನ ಪರಿಹಾರ ಒದಗಿಸುವರೆಂಬ ಭರವಸೆ ಹೊಂದಬಹುದೇ?

ಧರ್ಮ, ಭಾಷೆ, ಜಾತಿ, ಸಂಸ್ಕೃತಿ, ಹುಟ್ಟಿನ ಮೂಲ ಹೀಗೆ ಯಾವುದನ್ನಾದರೂ ಆಧರಿಸಿ ಒಡೆದು ಆಳುವ ನೀತಿ ಎಂದಿಗೂ ವ್ಯವಸ್ಥೆಯ ಹಂತದ ಚಿಂತನೆಗಳಿಗೆ ದಾರಿ ಮಾಡಿಕೊಡಲಾರದು. ಸಮಸ್ಯೆಗಳು ಸಂಕೀರ್ಣವಾದಷ್ಟೂ ಅವುಗಳಿಗೆ ಪರಿಹಾರ ಅರಸುವ ಚಿಂತನೆಯ ಹರವೂ ವಿಸ್ತಾರಗೊಳ್ಳಬೇಕಲ್ಲವೇ?

ಲೇಖಕ: ಸಹಾಯಕ ಪ್ರಾಧ್ಯಾಪಕ, ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ, ಹಾಸನ

ವಾಚಕರ ವಾಣಿ

ಧ್ವಜದೊಂದಿಗೆ 'ಸಂವಿಧಾನ'ದ ಕೃತಿ ನೀಡಿ

ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಮನೆಮನೆಗೂ ಭೇಟಿ ಕೊಟ್ಟು ಭಾರತದ ಧ್ವಜವನ್ನು ವಿತರಿಸುವ ಕಾರ್ಯಕ್ರಮದ ಬಗೆಗಿನ ಮಾತುಗಳು ಕೇಳಿಬರುತ್ತಿವೆ. ದೇಶಪ್ರೇಮದ ಭಾವನಾತ್ಮಕ ಜಾಗೃತಿ ಮತ್ತು ಜನರಲ್ಲಿ ಏಕತೆ ಮೂಡಿಸುವ ಪ್ರಾಮಾಣಿಕ ಉದ್ದೇಶವನ್ನು ಈ ಕಾರ್ಯಕ್ರಮವು ಹೊಂದಿರುವುದಾದರೆ, ತ್ರಿವರ್ಣ ಧ್ವಜವನ್ನು ಜನರಿಗೆ ಕೊಡುವಾಗ ಧ್ವಜದ ವೆಚ್ಚವೆಂದು ಅವರಿಂದ ಹಣ ಪಡೆಯಬಾರದು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಅವರು ಭಾರತದ ಸಂವಿಧಾನದ ಬಗ್ಗೆ ಬರೆದಿರುವ ಜನಪ್ರಿಯ ಪುಸ್ತಕ 'ಸಂವಿಧಾನ ಓದು' ಪ್ರತಿಯೊಂದನ್ನು ತ್ರಿವರ್ಣ ಧ್ವಜದೊಂದಿಗೆ ಜನರಿಗೆ ಉಚಿತವಾಗಿ ಕೊಡಬೇಕು. ಇದರ ವೆಚ್ಚವನ್ನು ಸರ್ಕಾರವೇ ಭರಿಸಬೇಕು. ಅಲ್ಲದೆ, ಈ ಕಾರ್ಯಕ್ರಮವನ್ನು ಎಲ್ಲಾ ರಾಜಕೀಯ ಪಕ್ಷಗಳ ಸಹಯೋಗದೊಂದಿಗೆ ಮಾಡಬೇಕು. ಹಾಗಿಲ್ಲದೆ ಹೋದರೆ, ಇಂಥ ಸದುದ್ದೇಶದ ಕಾರ್ಯಕ್ರಮವು ಚುನಾವಣಾ ಪ್ರಚಾರದ ಕಾರ್ಯಕ್ರಮವಾಗಿಬಿಡುವ ಅಪಾಯ ಇದೆ.

ವಿ.ಎನ್. ಲಕ್ಷ್ಮೀನಾರಾಯಣ, ಮೈಸೂರು

ಪಠ್ಯದಲ್ಲಿ ಮುದ ನೀಡುವ ಪದ್ಯಗಳಿರಲಿ

ಕೆಲವು ದಶಕಗಳ ಹಿಂದೆ ಶಾಲೆಯಲ್ಲಿ ನಾವು ಕಲಿತ ಪದ್ಯಗಳು ಇನ್ನೂ ನಮ್ಮ ಮನದಾಳದಲ್ಲಿ ಹುದುಗಿವೆ. ಬಣ್ಣದ ತಗಡಿನ ತುತ್ತೂರಿ, ಅಂಚೆ ಅಣ್ಣ, ಬಣ್ಣದ ಗಿಳಿ, ನಾಗರಹಾವು, ಚಂದಿರನೇತಕೆ ಓಡುವನಮ್ಮ, ಅಣ್ಣನು ಮಾಡಿದ ಗಾಳಿಪಟ, ಪುಣ್ಯಕೋಟಿ, ನೀನಾರಿಗಾದೆಯೋ ಎಲೆ ಮಾನವ, ಬಣ್ಣದ ಬುಗುರಿ... ಹೀಗೆ ಹೆಸರಿಸುತ್ತಾ ಹೋದರೆ ಪಟ್ಟಿ ಬೆಳೆಯುತ್ತದೆ. ಆದರೆ ಇಂದಿನ ಪಠ್ಯದಲ್ಲಿ ಈ ರೀತಿಯ ಪದ್ಯಗಳು ಕಾಣುವುದು ಅಪರೂಪವಾಗಿದೆ. ಇಂತಹ ಪದ್ಯಗಳನ್ನು ಕೇಳುತ್ತಿದ್ದರೆ, ಹಾಡುತ್ತಿದ್ದರೆ ಮೈಮನ ಕುಣಿಯುತ್ತಿತ್ತು. ಮಕ್ಕಳ ಮನಸ್ಸಿಗೆ ಖುಷಿ ಕೊಡುತ್ತಿತ್ತು. ಈಗಿನ ಪಠ್ಯಗಳಲ್ಲಿ ಅಲ್ಲಿ ಇಲ್ಲಿ ಉತ್ತಮ ರಚನೆಗಳು ಸೇರಿದ್ದರೂ ಮಕ್ಕಳನ್ನು ಮೋಡಿ ಮಾಡುವ ಅಂತಹ ಸಾಹಿತ್ಯ ಗಣನೀಯ ಪ್ರಮಾಣದಲ್ಲಿ ಪಠ್ಯಪುಸ್ತಕಗಳಿಗೆ ಸೇರುತ್ತಿಲ್ಲ. ಮಕ್ಕಳ ಮನಸ್ಸಿಗೆ ಮುದ ನೀಡುವ ಗದ್ಯಪದ್ಯಗಳು ಸರ್ವಕಾಲಕ್ಕೂ ಮಾನ್ಯ. ಪಠ್ಯಪುಸ್ತಕ ರಚನಾ ಸಮಿತಿ ಇದನ್ನೆಲ್ಲ ಗಮನಿಸಬೇಕು.

ಸಾ.ಮ.ಶಿವಮಲ್ಲಯ್ಯ, ಸಾಸಲಾಪುರ, ಕನಕಪುರ

ಅರ್ಥಪೂರ್ಣ ವಿದಾಯ ಭಾಷಣ

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ತಮ್ಮ ವಿದಾಯ ಭಾಷಣದಲ್ಲಿ 'ಮುಂದಿನ ತಲೆಮಾರುಗಳಿಗೆ ಪ್ರಕೃತಿ ರಕ್ಷಿಸಿ' (ಪ್ರ.ವಾ., ಜುಲೈ 25) ಎಂದು ಕಳಕಳಿ ತೋರಿರುವುದು ಅರ್ಥಪೂರ್ಣವಾಗಿದೆ. ಹಿಂದೆ ಗ್ರಾಮೀಣ ಭಾಗಗಳಲ್ಲಿದ್ದ ಗುಂಡು ತೋಪು, ದೇವರ ಕಾಡು, ರಕ್ಷಿತಾರಣ್ಯಗಳು ಕ್ಷೀಣಿಸಿವೆ. ನಗರೀಕರಣ ಮತ್ತು ವಿವಿಧ ಬಗೆಯ ಮಾಲಿನ್ಯಗಳಿಂದ ಪ್ರಕೃತಿಗೆ ಅಷ್ಟೇ ಅಲ್ಲ, ಮನುಷ್ಯನ ಜೀವಕ್ಕೂ ಅಪಾಯವಾಗುವ ವಾತಾವರಣ ಸೃಷ್ಟಿಯಾಗಿರುವುದು ಆತಂಕಕಾರಿ. ಇದಕ್ಕೆಲ್ಲ ಮನುಷ್ಯನ ದುರಾಸೆಯೇ ಕಾರಣ.

ವಿಜ್ಞಾನ– ತಂತ್ರಜ್ಞಾನ ಕ್ಷೇತ್ರದಲ್ಲಿ ಎಷ್ಟೇ ಪ್ರಗತಿ ಸಾಧಿಸಿದರೂ ಮನುಷ್ಯ ತಾನು ಪ್ರಕೃತಿಯ ಅಂಗವೇ ವಿನಾ ತಾನೇ ಎಲ್ಲವೂ ಅಲ್ಲ ಎಂಬ ಸತ್ಯವನ್ನು ಅರಿಯಬೇಕಿದೆ. ಈ ಆಯಾಮದಲ್ಲಿ ಕೋವಿಂದ್ ಅವರ ಮಾತು ಸಮಯೋಚಿತವಾಗಿದೆ. ನಮ್ಮ ಸುತ್ತಲಿನ ನೆಲ– ಜಲ, ಪ್ರಾಣಿ– ಪಕ್ಷಿಗಳ ರಕ್ಷಣೆಯ ಜೊತೆಗೆ ಪ್ರಕೃತಿ ವಿನಾಶವನ್ನು ಇನ್ನಾದರೂ ತಡೆಯೋಣ.

ಎಚ್.ಎನ್. ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

ತಾರತಮ್ಯ ದೂರ

ಎರಡನೇ ಮಹಿಳಾ
ರಾಷ್ಟ್ರಪತಿಯಾಗಿ
ದ್ರೌಪದಿ ಮುರ್ಮು
ಪ್ರಮಾಣವಚನ ಸ್ವೀಕಾರ...
ಮಹಿಳೆಯರಿಗೆ ಹೀಗೇ
ಎಲ್ಲಾ ಕ್ಷೇತ್ರಗಳಲ್ಲೂ
ಹೆಚ್ಚಿನ ಸ್ಥಾನಮಾನ
ಸಿಕ್ಕರೆ ತಾರತಮ್ಯ ದೂರ....

ಚೆಲುವರಾಜು ಕೆ.
ಧನಗೆರೆ, ಕೊಳ್ಳೇಗಾಲ

ಖಾಸಗಿತನಕ್ಕೆ ಧಕ್ಕೆ: ಒಪ್ಪತಕ್ಕ ವಿಚಾರವಲ್ಲ

ಕೇರಳದ ಕೊಲ್ಲಂ ಜಿಲ್ಲೆಯಲ್ಲಿ ಇತ್ತೀಚೆಗೆ 'ನೀಟ್' ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿನಿಯರ ಒಳ ಉಡುಪು ತೆಗೆಸಿದ ವಿಚಾರವು ವಿವಾದಕ್ಕೀಡಾಗಿದ್ದು, ಇದು ನಾಗರಿಕ ಸಮಾಜ ತಲೆ ತಗ್ಗಿಸುವ ಸಂಗತಿಯಾಗಿದೆ. ಪರೀಕ್ಷೆಗಳು ಪಾರದರ್ಶಕವಾಗಿ ಮತ್ತು ನ್ಯಾಯಸಮ್ಮತವಾಗಿ ನಡೆಯಬೇಕು, ನಿಜ. ಆದರೆ ಅದರ ಹೆಸರಲ್ಲಿ ವಿದ್ಯಾರ್ಥಿನಿಯರ ಖಾಸಗಿತನಕ್ಕೆ ಧಕ್ಕೆ ತರುವುದು ಒಪ್ಪತಕ್ಕ ವಿಚಾರವಲ್ಲ. ವಿದ್ಯಾರ್ಥಿನಿಯರು ತೀವ್ರ ಮುಜುಗರ, ಅವಮಾನದ ಸಂದರ್ಭ ಎದುರಿಸಬೇಕಾಗಿಬಂದದ್ದು ಸರಿಯಲ್ಲ. ಇದು, ಅವರ ಸೂಕ್ಷ್ಮ ಮನಸಿನ ಮೇಲೆ ಪರಿಣಾಮ ಬೀರದೇ ಇರದು.

ಒಳ ಉಡುಪು ತೆಗೆಸಿದ ಕಾರಣ ತನ್ನ ತಲೆಗೂದಲನ್ನು ಎದೆಗೆ ಮುಚ್ಚಿಕೊಂಡು ಪರೀಕ್ಷೆ ಬರೆಯಬೇಕಾಯಿತು. ಇದು ಅತ್ಯಂತ ಕೆಟ್ಟ ಅನುಭವ ಎಂದು ಯುವತಿಯೊಬ್ಬರು ತಮಗಾದ ಅವಮಾನವನ್ನು ವಿವರಿಸಿದ್ದಾರೆ. ಪರೀಕ್ಷೆಗಳನ್ನು ನಡೆಸುವ ಸಂಸ್ಥೆಗಳು ಲಿಂಗಸೂಕ್ಷ್ಮತೆಯನ್ನು ಹೊಂದಿಲ್ಲದಿದ್ದರೆ ಏನಾಗುತ್ತದೆ ಎಂಬುದಕ್ಕೆ ಇದು ಸಾಕ್ಷಿ. ಇಂಥ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸುವುದು ಅತ್ಯಗತ್ಯ.

ಬೇ.ನ. ಶ್ರೀನಿವಾಸಮೂರ್ತಿ, ತುಮಕೂರು

ಭಿನ್ನ ಧ್ವನಿಯನ್ನೂ ಆಲಿಸಿ

ಶಾಲೆಗಳ ವಿಲೀನಕ್ಕೆ ಸಂಬಂಧಿಸಿದಂತೆ ಸಚಿವ ಬಿ.ಸಿ. ನಾಗೇಶ್ ಹೇಳಿಕೆಗೆ ವಿರುದ್ಧವಾಗಿ ಸಾಮಾಜಿಕ ಜಾಲತಾಣದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ ಕಾರಣಕ್ಕೆ ಶಿಕ್ಷಕ ವೀರಣ್ಣ ಮಡಿವಾಳರ ಅವರಿಗೆ ಕಾರಣ ಕೇಳಿ ಡಿಡಿಪಿಐ ನೋಟಿಸ್ ನೀಡಿರುವುದು ವರದಿಯಾಗಿದೆ. ವೀರಣ್ಣ ಅವರು ಕವಿ, ಚಿಂತಕರೂ ಹೌದು. ಶಿಕ್ಷಕರಾಗಿ ಅಪಾರ ಅನುಭವ ಹೊಂದಿದ್ದಾರೆ. ಅವರ ಮಾತಿನಲ್ಲಿ ಸತ್ಯಾಂಶ ಇರಬಹುದು. ಇಂತಹ ಶಿಕ್ಷಕರ ಅಭಿಪ್ರಾಯವನ್ನೂ ಸರ್ಕಾರ ಪರಿಗಣಿಸಲಿ ಮತ್ತು ಸ್ವೀಕರಿಸಲಿ. ಅದಕ್ಕೂ ಮೊದಲು ಅವರಿಗೆ ನೀಡಿರುವ ನೋಟಿಸ್ ಅನ್ನು ಹಿಂದಕ್ಕೆ ಪಡೆಯಬೇಕು.

ಈ. ಬಸವರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದೇಶದ ಮುಖ್ಯಸ್ಥರಿಗೆ ಸೀಮಿತ ಅಧಿಕಾರ



ಲ್ಯುಟೆನ್ಸ್ ದೆಹಲಿಯ ಹೃದಯ ಭಾಗದಲ್ಲಿರುವ 330 ಎಕರೆ ವಿಸ್ತಾರ ಪ್ರದೇಶದಲ್ಲಿ ರಾಷ್ಟ್ರಪತಿ ಭವನವಿದೆ. ರಾಷ್ಟ್ರಪತಿ ಭವನದ ಕಟ್ಟಡದ ವಿಸ್ತಾರವೇ ಐದು ಎಕರೆಗಳಷ್ಟಿದೆ. ಭಾರತ ಗಣರಾಜ್ಯದ ಮುಖ್ಯಸ್ಥರಾದ ರಾಷ್ಟ್ರಪತಿಯ ನಿವಾಸ ಮತ್ತು ಕಚೇರಿಯನ್ನು ಒಳಗೊಂಡ ಈ ಸಂಕೀರ್ಣಕ್ಕೆ ದೀರ್ಘ ಇತಿಹಾಸವಿದೆ. ಈ ಕಟ್ಟಡವು ಅಸ್ತಿತ್ವಕ್ಕೆ ಬಂದಾಗ, ಅದು ಭಾರತದ ಅತ್ಯುನ್ನತ ಅಧಿಕಾರಿಯ ನಿವಾಸವಾಗಿತ್ತು ಮತ್ತು ಅದೇ ದೇಶದ ಸಾರ್ವಭೌಮ ಶಕ್ತಿ ಕೇಂದ್ರವೂ ಆಗಿತ್ತು. ಈಗಲೂ ರಾಷ್ಟ್ರಪತಿ ಭವನವು ದೇಶದ ಅತ್ಯುನ್ನತ ಹುದ್ದೆಯ ಪ್ರತೀಕವಾಗಿದ್ದರೂ, ಅದರ ಅಧಿಕಾರಗಳು ಸೀಮಿತವಾಗಿವೆ.

ರಾಷ್ಟ್ರಪತಿ ಭವನದ ಮೂಲ ಹೆಸರು ಹೀಗಿರಲಿಲ್ಲ. ಬ್ರಿಟಿಷರ ಆಳ್ವಿಕೆಯಲ್ಲಿದ್ದ ಭಾರತದ ಸಮಸ್ತ ಆಡಳಿತವನ್ನು ನಿರ್ದೇಶಿಸುತ್ತಿದ್ದ ವೈಸ್‌ರಾಯ್ ಹುದ್ದೆಯಲ್ಲಿದ್ದವರ ನಿವಾಸವಾಗಿತ್ತು. ವೈಸ್‌ರಾಯ್ ಅವರ ನಿವಾಸ, ಕಚೇರಿ, ಅತಿಥಿಗೃಹ, ಸಭಾಂಗಣಗಳನ್ನು ಒಳಗೊಂಡ ಈ ಕಟ್ಟಡವನ್ನು 1929ರಲ್ಲಿ ಲೋಕಾರ್ಪಣೆ ಮಾಡಲಾಗಿತ್ತು. ಈ ಕಟ್ಟಡ ಮತ್ತು ಅದರ ಸುತ್ತಲಿನ 330 ಎಕರೆಯ ಆವರಣವನ್ನು ಒಳಗೊಂಡ ವಿಶಾಲವಾದ ಎಸ್ಟೇಟ್ ಅನ್ನು 'ವೈಸ್‌ರಾಯ್ ಹೌಸ್' ಎಂದು ಕರೆಯಲಾಗುತ್ತಿತ್ತು. ವೈಸ್‌ರಾಯ್ ಅವರು ಬ್ರಿಟಿಷ್ ಭಾರತದ ಕಾರ್ಯಾಂಗದ ಮುಖ್ಯಸ್ಥರಾಗಿದ್ದರು ಮತ್ತು ಅವರದ್ದು ಪರಮಾಧಿಕಾರವಾಗಿತ್ತು. ಬ್ರಿಟನ್ ರಾಣಿಗಷ್ಟೇ ವೈಸ್‌ರಾಯ್ ಉತ್ತರದಾಯಿಯಾಗಿದ್ದರು.

ಸ್ವತಂತ್ರ ಭಾರತದಲ್ಲಿ, ರಾಷ್ಟ್ರಪತಿಯ ನಿವಾಸ–ಕಚೇರಿಗಾಗಿ 'ವೈಸ್‌ರಾಯ್ ಹೌಸ್' ಅನ್ನು ಬಿಟ್ಟುಕೊಡಲಾಯಿತು. ಆಗ ಅದರ ಹೆಸರನ್ನು 'ಗವರ್ನ್‌ಮೆಂಟ್ ಹೌಸ್' ಎಂದು ಬದಲಿಸಲಾಯಿತು. 1950ರಲ್ಲಿ ಬಾಬು ರಾಜೇಂದ್ರ ಪ್ರಸಾದ್ ಅವರು ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ ನಂತರ 'ಗವರ್ನ್‌ಮೆಂಟ್ ಹೌಸ್'ಗೆ, 'ರಾಷ್ಟ್ರಪತಿ ಭವನ' ಎಂದು ಮರುನಾಮಕರಣ ಮಾಡಲಾಯಿತು.

ಸ್ವತಂತ್ರ ಭಾರತದಲ್ಲಿ ರಾಷ್ಟ್ರಪತಿಯೇ ಸರ್ಕಾರದ ಮುಖ್ಯಸ್ಥರಾಗಿದ್ದರೂ ಬಹುಪಾಲು ಅಧಿಕಾರ ಇರುವುದು ಸಂಸತ್ತಿಗೆ ಹಾಗೂ ಸಚಿವ ಸಂಪುಟಕ್ಕೆ. ರಾಷ್ಟ್ರಪತಿ ಅವರು ತಮಗೆ ಇರುವ ಅಧಿಕಾರವನ್ನೂ, ಸಚಿವ ಸಂಪುಟದ ಶಿಫಾರಸಿನ ಆಧಾರದಲ್ಲೇ ಚಲಾಯಿಸಬೇಕಾಗುತ್ತದೆ. ರಾಷ್ಟ್ರಪತಿಯು ತಮ್ಮ ವಿವೇಚನೆ ಬಳಸಿ ತೀರ್ಮಾನ ತೆಗೆದುಕೊಳ್ಳುವ ಅಥವಾ ಆದೇಶಿಸುವ ಅಧಿಕಾರವಿರುವುದು ಕ್ಷಮಾ ಅರ್ಜಿಗಳ ವಿಲೇವಾರಿಯಲ್ಲಿ ಮಾತ್ರ.



ಆಧಾರ: ರಾಷ್ಟ್ರಪತಿ ಭವನ, ಪಿಟಿಐ, ಸಂವಿಧಾನದ 61ನೇ ವಿಧಿ

ಅಧಿಕಾರಗಳು

- ದೇಶದ ಮೂರೂ ಸೇನಾಪಡೆಗಳ ಮುಖ್ಯಸ್ಥರಾಗಿರುತ್ತಾರೆ
- ಸಂಸತ್ತಿನ ಉಭಯ ಸದನಗಳ ಅಧಿವೇಶನ ಇಲ್ಲದೇ ಇರುವಾಗ ಸರ್ಕಾರವು ಹೊರಡಿಸುವ ಸುಗ್ರೀವಾಜ್ಞೆಗಳನ್ನು ಅನುಮೋದಿಸುವ ಅಧಿಕಾರ
- ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರವಾದ ಮಸೂದೆಗಳನ್ನು ಅನುಮೋದಿಸುವ ಅಧಿಕಾರ. ರಾಷ್ಟ್ರಪತಿಯ ಸಹಿ ಬಿದ್ದ ನಂತರವಷ್ಟೇ ಯಾವುದೇ ಮಸೂದೆ ಕಾಯ್ದೆಯಾಗುತ್ತದೆ
- ಯಾವುದೇ ಮಸೂದೆಗೆ ತಿದ್ದುಪಡಿ ಸೂಚಿಸಿ, ಸಂಸತ್ತಿಗೆ ವಾಪಸ್ ಕಳುಹಿಸುವ ಅಧಿಕಾರ ರಾಷ್ಟ್ರಪತಿಗೆ ಇದೆ. ಹೀಗೆ ಕಳುಹಿಸಲಾದ ಮಸೂದೆಗೆ ಅವರು ಸೂಚಿಸಿರುವ ತಿದ್ದುಪಡಿ ಅಥವಾ ಬದಲಾವಣೆಗಳಿಗೆ ಸಂಸತ್ತು ಬದ್ಧವಾಗಿರಬೇಕಿಲ್ಲ. ಯಾವುದೇ ಬದಲಾವಣೆ ಇಲ್ಲದೆ ಅದೇ ಮಸೂದೆ ಮತ್ತೆ ತಮ್ಮ ಬಳಿಗೆ ಬಂದರೆ ಅದನ್ನು ಅವರು ಮತ್ತೆ ತಿರಸ್ಕರಿಸಬಹುದು. ಆದರೆ ಮೂರನೇ ಬಾರಿ ಅದೇ ಮಸೂದೆ ತಮ್ಮ ಬಳಿಗೆ ಬಂದರೆ, ರಾಷ್ಟ್ರಪತಿಯು ಅದನ್ನು ಅನುಮೋದಿಸಲೇಬೇಕಾಗುತ್ತದೆ
- ಸಚಿವ ಸಂಪುಟದ ಶಿಫಾರಸಿನ ಆಧಾರದಲ್ಲಿ ಲೋಕಸಭೆಯನ್ನು ವಿಸರ್ಜಿಸುವ ಅಧಿಕಾರ
- ಕ್ಷಮಾ ಅರ್ಜಿಗಳನ್ನು ವಿಲೇವಾರಿ ಮಾಡುವ ಅಧಿಕಾರ
- ರಾಷ್ಟ್ರಪತಿ ಆಳ್ವಿಕೆಯ ಸಂದರ್ಭದಲ್ಲಿ ರಾಜ್ಯಪಾಲರ ಮೂಲಕ ರಾಜ್ಯಗಳಲ್ಲಿ ಆಡಳಿತ ನಡೆಸುವ ಅಧಿಕಾರ

ವಾಗ್ದಂಡನೆ

ಸಂವಿಧಾನವನ್ನು ಉಲ್ಲಂಘಿಸಿದ ಆರೋಪದಲ್ಲಿ ರಾಷ್ಟ್ರಪತಿಯನ್ನು ಅಧಿಕಾರದಿಂದ ಕೆಳಗಿಳಿಸುವ ಪ್ರಕ್ರಿಯೆಯನ್ನು 'ವಾಗ್ದಂಡನೆ' ಎಂದು ಕರೆಯಲಾಗುತ್ತದೆ. ಈ ಪ್ರಕ್ರಿಯೆ ಹೇಗೆ ನಡೆಯಬೇಕು ಎಂಬುದನ್ನು ಸಂವಿಧಾನದ 61ನೇ ವಿಧಿಯಲ್ಲಿ ವಿವರಿಸಲಾಗಿದೆ.

ಸಂವಿಧಾನವನ್ನು ರಾಷ್ಟ್ರಪತಿ ಉಲ್ಲಂಘಿಸಿದ್ದಾರೆ ಎಂದು ಸಂಸತ್ತು ಭಾವಿಸಿದರೆ, ಅದಕ್ಕೆ ಸಂಬಂಧಿಸಿದ ಗೊತ್ತುವಳಿಯನ್ನು ಯಾವುದೇ ಒಂದು ಸದನದಲ್ಲಿ ಮಂಡಿಸಬಹುದು. ಆದರೆ, ಸದನ ಒಟ್ಟು ಸದಸ್ಯರಲ್ಲಿ ನಾಲ್ಕನೇ ಒಂದರಷ್ಟು ಸದಸ್ಯರ ಸಹಿ ಇದ್ದರಷ್ಟೇ ಅಂತಹ ಗೊತ್ತುವಳಿಯನ್ನು ಮಂಡಿಸಬಹುದು. ರಾಷ್ಟ್ರಪತಿಯ ಮೇಲಿರುವ ಆರೋಪವನ್ನು ಪರಿಶೀಲಿಸಿ, ಒಟ್ಟು ಸದಸ್ಯರಲ್ಲಿ ಮೂರನೇ ಎರಡರಷ್ಟು ಸದಸ್ಯರ ಸಹಮತವಿದ್ದರಷ್ಟೇ ಗೊತ್ತುವಳಿ ಅಂಗೀಕಾರವಾಗುತ್ತದೆ.

ಒಂದು ಸದನದಲ್ಲಿ ಆ ಗೊತ್ತುವಳಿಯು ಅಂಗೀಕಾರವಾದ ನಂತರವೂ, ಇನ್ನೊಂದು ಸದನವು ಆರೋಪವನ್ನು ತನಿಖೆಗೆ ಒಳಪಡಿಸಬಹುದು. ಆರೋಪವು ಸಾಬೀತಾದರೆ ಮತ್ತು ಆ ಸದನದ ಒಟ್ಟು ಸದಸ್ಯರ ಮೂರನೇ ಎರಡರಷ್ಟು ಸದಸ್ಯರು ಅನುಮೋದಿಸಿದರೆ ಗೊತ್ತುವಳಿಯು ಅಂಗೀಕಾರವಾಗುತ್ತದೆ. ಆಗ ರಾಷ್ಟ್ರಪತಿ ಅವರನ್ನು ಹುದ್ದೆಯಿಂದ ಕೆಳಗೆ ಇಳಿಸಬಹುದು.

ರಾಷ್ಟ್ರಪತಿ ಭವನದ ಬೆರಗು

ರಾಷ್ಟ್ರಪತಿ ಅವರ ಅಧಿಕೃತ ನಿವಾಸವು ಉದ್ಯಾನವನ, ಮ್ಯೂಸಿಯಂ, ಸಮಾರಂಭ ಸಭಾಂಗಣ, ವಿಶಾಲವಾದ ಹೊರಾಂಗಣ, ಅಂಗರಕ್ಷಕರು ಹಾಗೂ ಸಿಬ್ಬಂದಿ ಗೃಹಗಳನ್ನು ಒಳಗೊಂಡಿದೆ. ಇದು ದೇಶವೊಂದರ ಮುಖ್ಯಸ್ಥರ ಅತಿವಿಶಾಲವಾದ ನಿವಾಸ ಎನಿಸಿದೆ. ಇದರ ಮುಖ್ಯ ಆಕರ್ಷಣೆಯೇ ಬೃಹತ್ ಗುಮ್ಮಟ. ಅಧ್ಯಕ್ಷರ ಅರಮನೆ ಎಂದೂ ಕರೆಯಲಾಗುವ ರಾಷ್ಟ್ರಪತಿ ಭವನವು ಇಟಲಿಯ ರೋಮ್‌ನ ಕ್ವಿರಿನಲ್ ಅರಮನೆಯನ್ನು ಹೊರತುಪಡಿಸಿದರೆ, ಅತಿದೊಡ್ಡ ಭವನವಾಗಿದೆ

- 1912ರಲ್ಲಿ ಇದರ ನಿರ್ಮಾಣ ಆರಂಭವಾಯಿತು. ಒಟ್ಟು 17 ವರ್ಷಗಳಲ್ಲಿ ಕಟ್ಟಡ ನಿರ್ಮಾಣ (1929) ಪೂರ್ಣಗೊಂಡಿತು. 29 ಸಾವಿರ ಜನರು ಕಟ್ಟಡ ನಿರ್ಮಾಣಕ್ಕೆ ಕೆಲಸ ಮಾಡಿದ್ದಾರೆ. 70 ಕೋಟಿ ಇಟ್ಟಿಗೆ ಹಾಗೂ 30 ಲಕ್ಷ ಘನ ಅಡಿಯಷ್ಟು ಕಲ್ಲುಗಳನ್ನು ಬಳಸಲಾಗಿದೆ, ರಾಷ್ಟ್ರಪತಿ ಕಚೇರಿ, ಅತಿಥಿಗಳ ಕೊಠಡಿ, ಸಿಬ್ಬಂದಿ ಕೋಣೆಗಳು ಸೇರಿದಂತೆ 320 ಕೊಠಡಿಗಳು ಇಲ್ಲಿವೆ; 750ಕ್ಕೂ ಹೆಚ್ಚು ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಸರ್ ಎಡ್ವಿನ್ ಲ್ಯಾಂಡ್‌ಸೀರ್ ಲ್ಯುಟೆನ್ಸ್ ಅವರು ಇದರ ವಾಸ್ತುಶಿಲ್ಪಿ
- ರೈಸಿನಾ ಹಿಲ್ ಪ್ರದೇಶದಲ್ಲಿ ಇದು ನಿರ್ಮಾಣವಾಗಿದೆ. ಸುಮಾರು 300 ಕುಟುಂಬಗಳಿದ್ದ ರೈಸಿನಿ ಮತ್ತು ಮಾಲ್ಚಾ ಎಂಬ ಎರಡು ಹಳ್ಳಿಗಳನ್ನು 1894ರ ಭೂಸ್ವಾಧೀನ ಕಾಯ್ದೆಯಡಿ ವಶಪಡಿಸಿಕೊಂಡು ವೈಸ್‌ರಾಯ್ ಭವನವನ್ನು ನಿರ್ಮಿಸಲಾಗಿತ್ತು. ಸುತ್ತಮುತ್ತಲ ಪ್ರದೇಶಗಳಿಗಿಂತ ಸ್ವಲ್ಪ ಎತ್ತದಲ್ಲಿರುವ ಕಾರಣಕ್ಕೆ ರೈಸಿನಾ ಹಿಲ್ ಎಂಬ ಹೆಸರು ಬಂದಿತು.
- ಪ್ರತಿವರ್ಷದ ಫೆಬ್ರುವರಿಯಲ್ಲಿ ರಾಷ್ಟ್ರಪತಿ ಭವನದ ಮೊಘಲ್ ಉದ್ಯಾನವನ್ನು ಸಾರ್ವಜನಿಕರ ಪ್ರವೇಶಕ್ಕೆ ಮುಕ್ತಗೊಳಿಸಲಾಗುತ್ತದೆ. ನೂರಾರು ಜಾತಿಯ ಸಸ್ಯಗಳು, ಹೂಗಳಿಂದ ಉದ್ಯಾನ ಕಂಗೊಳಿಸುತ್ತದೆ. ದರ್ಬಾರ್ ಹಾಲ್‌ನಲ್ಲಿ ಇರಿಸಿರುವ ಗುಪ್ತರ ಕಾಲದ ಬುದ್ಧನ ಪ್ರತಿಮೆ ರಾಷ್ಟ್ರಪತಿ ಭವನದ ಆಕರ್ಷಣೆಗಳಲ್ಲೊಂದು.
- ಉಡುಗೊರೆಗಳ ಮ್ಯೂಸಿಯಂನಲ್ಲಿ ದೊರೆ ಜಾರ್ಜ್–5 ಅವರು 1911ರಲ್ಲಿ ದೆಹಲಿ ದರ್ಬಾರ್ ನಡೆಸುವಾಗ ಕುಳಿತುಕೊಳ್ಳುತ್ತಿದ್ದ 640 ಕೆ.ಜಿಯ ಬೆಳ್ಳಿ ಕುರ್ಚಿಯಿದೆ. ಮಾರ್ಬಲ್ ಹಾಲ್‌ನಲ್ಲಿ ವೈಸ್‌ರಾಯ್‌ಗಳು, ಬ್ರಿಟನ್ ರಾಜಮನೆತನದವರ ಪುತ್ಥಳಿ ಹಾಗೂ ಚಿತ್ರಗಳಿವೆ.

ದ್ರೌಪದಿಯ ಮೂಲ ಹೆಸರು ಪುತಿ

ದೇಶದ ಮೊದಲ ಆದಿವಾಸಿ ರಾಷ್ಟ್ರಪತಿ ಮುರ್ಮು ಅವರಿಗೆ 'ದ್ರೌಪದಿ' ಎಂಬ ಮಹಾಭಾರತದ ಹೆಸರನ್ನು ಇರಿಸಿದ್ದು ಅವರ ಶಾಲಾ ಶಿಕ್ಷಕಿ. ಮುರ್ಮು ಅವರ ಮೂಲ ಹೆಸರು 'ಪುತಿ'. ಒರಿಯಾದ ಸುದ್ದಿವಾಹಿನಿಯೊಂದಕ್ಕೆ ಇತ್ತೀಚೆಗೆ ಸಂದರ್ಶನ ನೀಡಿದ್ದ ಮುರ್ಮು ಅವರು ಇದನ್ನು ಬಹಿರಂಗಪಡಿಸಿದ್ದರು. ಆರಂಭದಲ್ಲಿ, ಸಂತಾಲ್ ಬುಡಕಟ್ಟು ಸಮುದಾಯದ 'ಪುತಿ' ಎಂಬ ಹೆಸರನ್ನು ಅವರಿಗೆ ಇಡಲಾಗಿತ್ತು. ಮುರ್ಮು ಅವರಿಗೆ ಇದು ಸರಿಹೊಂದುವುದಿಲ್ಲ ಎಂದು ಭಾವಿಸಿದ ಶಿಕ್ಷಕಿಯೊಬ್ಬರು ಹೆಸರು ಬದಲಿಸಿದ್ದರು.



ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡಿದ್ದನ್ನು ದೇಶದ ವಿವಿಧ ಬುಡಕಟ್ಟು ಸಮುದಾಯಗಳು ಸಂಭ್ರಮದಿಂದ ಆಚರಿಸಿದವು. ಭುವನೇಶ್ವರದ ಸಂತಾಲ್ ಬುಡಕಟ್ಟು ಮಹಿಳೆಯರು ಸೋಮವಾರ ಸಾಂಪ್ರದಾಯಿಕ ನೃತ್ಯ ಮಾಡಿದರು –ಪಿಟಿಐ ಚಿತ್ರ

ರಾಷ್ಟ್ರಪತಿಯಾಗಿ ಮುರ್ಮು ಅವರ ಅಧಿಕಾರ ಸ್ವೀಕಾರವು ಬಡವರು, ಸಮಾಜದ ಅಂಚಿನಲ್ಲಿರುವ ನಿರ್ಲಕ್ಷಿತ ಸಮುದಾಯಗಳ ಪಾಲಿಗೆ ಮಹತ್ವದ ಕ್ಷಣ
ನರೇಂದ್ರ ಮೋದಿ, ಪ್ರಧಾನಿ

ಮುರ್ಮು ಅವರು ತಮ್ಮ ಭಾಷಣದಲ್ಲಿ ಬುಡಕಟ್ಟು ಜನರು, ಮಹಿಳೆ, ಯುವಕರ ಬಗ್ಗೆ ನೈಜ ಕಳಕಳಿ ವ್ಯಕ್ತಪಡಿಸಿದ್ದಾರೆ. ಆದರೆ ಬಿಜೆಪಿ ಸರ್ಕಾರದ ನೀತಿಗಳು ಹಾಗೂ ಮುರ್ಮು ಅವರ ಕನಸುಗಳು ಜೊತೆಯಾಗಿ ಸಾಗುವುದು ಕಷ್ಟ
ಬಿನೊಯ್ ವಿಶ್ವಂ, ಸಿಪಿಐ ಸಂಸದ

ಸಿಎಎ, ವಿಶೇಷ ಸ್ಥಾನ ರದ್ದತಿಯಂತಹ ವಿಚಾರಗಳಲ್ಲಿ ಸಂವಿಧಾನವನ್ನು ಹಲವು ಬಾರಿ ದಮನಿಸಿದ ಪರಂಪರೆಯೊಂದನ್ನು ಬಿಟ್ಟುಹೋಗಿರುವ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಬಿಜೆಪಿಯ ರಾಜಕೀಯ ಕಾರ್ಯ ಸೂಚಿಯನ್ನು ಪೂರ್ಣಗೊಳಿಸಿದ್ದಾರೆ
ಮೆಹಬೂಬಾ ಮುಫ್ತಿ, ಪಿಡಿಪಿ ಮುಖ್ಯಸ್ಥೆ

ರಾಷ್ಟ್ರಪತಿ ಮುರ್ಮು ಅವರ ದೃಷ್ಟಿಕೋನ ಉತ್ತಮವಾಗಿದೆ. ಅವರ ಪ್ರತಿಯೊಂದು ಮಾತೂ ಅರ್ಥಗರ್ಭಿತ. ಅವರ ಮಾತುಗಳ ನನ್ನ ಮೇಲೆ ಸಾಕಷ್ಟು ಪ್ರಭಾವ ಬೀರಿವೆ
ಅಶೋಕ್ ಗೆಹಲೋತ್, ರಾಜಸ್ಥಾನ ಮುಖ್ಯಮಂತ್ರಿ


ಖರ್ಗೆಗೆ ಸೂಕ್ತ ಆಸನ ಇಲ್ಲ: ಪ್ರತಿಪಕ್ಷ ಕಿಡಿ

ರಾಷ್ಟ್ರಪತಿ ಪ್ರಮಾಣವಚನ ಸಮಾರಂಭದಲ್ಲಿ ರಾಜ್ಯಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸೂಕ್ತ ಆಸನದ ವ್ಯವಸ್ಥೆ ಕಲ್ಪಿಸಿಲ್ಲ ಎಂದು ಪ್ರತಿಪಕ್ಷಗಳು ಆರೋಪಿಸಿವೆ. ಆದರೆ ಈ ಆರೋಪವನ್ನು ಸರ್ಕಾರ ತಳ್ಳಿಹಾಕಿದೆ. ಖರ್ಗೆ ಅವರಿಗೆ ಮುಂದಿನ ಸಾಲಿನಲ್ಲೇ ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು ಎಂದು ಸ್ಪಷ್ಟಪಡಿಸಿದೆ.

ಸದನದ ಹಿರಿಯ ನಾಯಕರಿಗೆ ಅಗೌರವ ತೋರಲಾಗಿದ್ದು, ಶಿಷ್ಟಾಚಾರ ಪಾಲಿಸಲಾಗಿಲ್ಲ ಎಂದು ಆರೋಪಿಸಿ ರಾಜ್ಯಸಭೆ ಸಭಾಪತಿ ಎಂ. ವೆಂಕಯ್ಯ ನಾಯ್ಡು ಅವರಿಗೆ ಬರೆದ ಪತ್ರವನ್ನು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಅವರು ಟ್ವೀಟ್ ಮಾಡಿದ್ದಾರೆ.

'ಎಲ್ಲ ಸಂಪುಟ ದರ್ಜೆ ಸಚಿವರ ಆಸನಗಳ ನಂತರ ಪ್ರತಿಪಕ್ಷದ ನಾಯಕರಿಗೆ ಆದ್ಯತೆ ನೀಡಲಾಗುತ್ತದೆ. ಇದರ ಪ್ರಕಾರ, ಖರ್ಗೆ ಅವರ ಆಸನವು ಮೂರನೇ ಸಾಲಿನಲ್ಲಿ ಬರುತ್ತದೆ. ಆದರೆ, ಖರ್ಗೆ ಅವರ ಹಿರಿತನವನ್ನು ಪರಿಗಣಿಸಿ, ಅವರಿಗೆ ಮೊದಲ ಸಾಲಿನಲ್ಲೇ ಆಸನ ವ್ಯವಸ್ಥೆ ಕಲ್ಪಿಸಲಾಗಿತ್ತು. ಮೂಲೆಯಲ್ಲಿ ಆಸನ ಸಿಕ್ಕಿದ್ದಕ್ಕೆ ಖರ್ಗೆ ಆಕ್ಷೇಪಿಸಿದ್ದರಿಂದ ಸಾಲಿನ ಮಧ್ಯದಲ್ಲಿ ಕುಳಿತುಕೊಳ್ಳಲು ಅವರಿಗೆ ಸಿಬ್ಬಂದಿ ಮನವಿ ಮಾಡಿದರೂ, ಅವರು ಅದನ್ನು ಒಪ್ಪಿಕೊಳ್ಳಲಿಲ್ಲ. ಬಹುತೇಕ ಸಂಪುಟ ದರ್ಜೆ ಸಚಿವರು ಎರಡನೇ ಸಾಲಿನಲ್ಲಿ ಕುಳಿತಿದ್ದರು. ಇದು ವಿವಾದ ಮಾಡುವ ವಿಷಯವೇ ಅಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಜನಪಥ್‌ನ ಐಷಾರಾಮಿ ಬಂಗಲೆಗೆ ಕೋವಿಂದ್



ಅಧಿಕಾರಾವಧಿ ಮುಗಿದ ಬಳಿಕ ರಾಷ್ಟ್ರಪತಿ ನಿವಾಸ ತೊರೆದ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ದೆಹಲಿಯ ಲ್ಯುಟೆನ್ಸ್ ಪ್ರದೇಶದ 12–ಜನಪಥ್ ಐಷಾರಾಮಿ ಬಂಗಲೆಗೆ ಸೋಮವಾರ ಸ್ಥಳಾಂತರವಾದರು.

ಮಾಜಿ ಕೇಂದ್ರ ಸಚಿವ ರಾಮ್ ವಿಲಾಸ್ ಪಾಸ್ವಾನ್ ಅವರು ಈ ನಿವಾಸದಲ್ಲಿ ಸುಮಾರು ಮೂರು ದಶಕಗಳ ಕಾಲ ವಾಸವಿದ್ದರು.

ಕೋವಿಂದ್ ಅವರಿಗೆ ಮಾಸಿಕ ₹2.5 ಲಕ್ಷ ಪಿಂಚಣಿ ದೊರಕಲಿದೆ. ಅವರ ಸಹಾಯಕ್ಕೆ ಒಬ್ಬರು ಆಪ್ತ ಕಾರ್ಯದರ್ಶಿ, ಒಬ್ಬರು ಹೆಚ್ಚುವರಿ ಕಾರ್ಯದರ್ಶಿ, ಒಬ್ಬ ಸಹಾಯಕ, ಇಬ್ಬರು ಜವಾನರನ್ನು ಸರ್ಕಾರ ನೀಡಲಿದೆ. ವಾರ್ಷಿಕ ₹1 ಲಕ್ಷದವರೆಗೆ ಕಚೇರಿ ವೆಚ್ಚವನ್ನು ಸರ್ಕಾರ ಭರಿಸುತ್ತದೆ.

ಪ್ರಮಾಣ: ಜುಲೈ 25ರ ಮಹತ್ವ

ದ್ರೌಪದಿ ಮುರ್ಮು ಅವರು ಜುಲೈ 25ರಂದು ರಾಷ್ಟ್ರಪತಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಜುಲೈ 25ರಂದು ಪ್ರಮಾಣವಚನ ಸ್ವೀಕರಿಸಿದ ರಾಷ್ಟ್ರಪತಿಗಳಲ್ಲಿ ಇವರು 10ನೆಯವರು. 1977ರಿಂದ ಈ ಪರಿಪಾಟ ನಡೆದುಬಂದಿದೆ. ಆದರೆ, ಜುಲೈ 25ರಂದೇ ರಾಷ್ಟ್ರಪತಿ ಅಧಿಕಾರ ಸ್ವೀಕರಿಸಬೇಕು ಎಂಬ ನಿಯಮವಿಲ್ಲ.

ಮೊದಲ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದ್ ಅವರು ಜನವರಿಯಲ್ಲಿ, ಸರ್ವಪಲ್ಲಿ ರಾಧಾಕೃಷ್ಣನ್ ಅವರು ಮೇ ತಿಂಗಳಲ್ಲಿ ಅಧಿಕಾರ ವಹಿಸಿಕೊಂಡಿದ್ದರು. ಆದರೆ, ಜಾಕಿರ್ ಹುಸೇನ್ ಮತ್ತು ಫಕ್ರುದ್ದೀನ್ ಅಲಿ ಅಹಮದ್ ಅವರು ಅಧಿಕಾರ ಪೂರ್ಣಗೊಳಿಸದ ಕಾರಣ, ಮಧ್ಯಂತರ ಚುನಾವಣೆ ನಡೆಯಿತು. 1977ರಲ್ಲಿ ಆರನೇ ರಾಷ್ಟ್ರಪತಿಯಾಗಿ ನೀಲಂ ಸಂಜೀವರೆಡ್ಡಿ ಅವರು ಜುಲೈ 25ರಂದು ಅಧಿಕಾರ ವಹಿಸಿಕೊಂಡರು. ಅಂದಿನಿಂದ ಇದು ಸಂಪ್ರದಾಯದಂತೆಯೇ ಆಯಿತು.




ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ: ಹೌದು 90% | ಇಲ್ಲ 10%

ವಿಶ್ವ ಅಥ್ಲೆಟಿಕ್ಸ್‌ನ ಪುರುಷರ ಜಾವೆಲಿನ್ ಥ್ರೋನಲ್ಲಿ ನೀರಜ್ ಚೋಪ್ರಾ ಬೆಳ್ಳಿ ಪದಕ ಗೆದ್ದಿರುವುದು, ಪೋಷಕರು ಮಕ್ಕಳನ್ನು ಕ್ರೀಡಾ ಕ್ಷೇತ್ರದಲ್ಲಿ ತೊಡಗಿಸಲು ಪ್ರೇರಣೆ ಆಗುವುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 182

ವಿಷ್ಣು-ವೀರಭದ್ರ ಮುಖಾಮುಖಿ

ಯುದ್ಧದಲ್ಲಿ ಗೆಲುವು ಬಯಸಿದ ಇಂದ್ರಾದಿ ದೇವತೆಗಳಿಗೆ ದೇವಾಚಾರ್ಯರಾದ ಬೃಹಸ್ಪತಿ ಮಾತಿನಿಂದ ತುಂಬಾ ನಿರಾಸೆಯಾಗುತ್ತದೆ. ಚಿಂತಾಕ್ರಾಂತರಾದ ದೇವತೆಗಳ ಬಳಿ ಬಂದ ವೀರಭದ್ರ 'ಎಲೈ ದೇವತೆಗಳಿರಾ, ನೀವೆಲ್ಲರೂ ಯಜ್ಞದ ಹವಿರ್ಭಾಗವನ್ನು ತೆಗೆದುಕೊಳ್ಳಲು ಬಂದಿದ್ದೀರಾ ಅಲ್ಲವೆ? ನನ್ನ ಬಳಿಗೆ ಬನ್ನಿ. ನಾನು ನಿಮಗೆ ತೃಪ್ತಿಯಾಗುವಷ್ಟು ಯಜ್ಞಭಾಗವನ್ನು ಕೊಡುವೆ' ಎಂದು ವ್ಯಂಗ್ಯವಾಗಿ ಹೇಳಿ, ಹರಿತವಾದ ಬಾಣಗಳಿಂದ ದೇವತೆಗಳ ಮೇಲೆ ಪ್ರಹಾರ ಮಾಡಿದ. ಏಟು ತಿಂದ ದೇವನಾಯಕರು ದಶದಿಕ್ಕುಗಳಿಗೆ ಓಡಿಹೋದರು.

ವೀರಭದ್ರ ತನ್ನ ಗಣಗಳೊಡನೆ ಯಜ್ಞಮಂಟಪಕ್ಕೆ ಬಂದ. ಋಷಿಗಳೆಲ್ಲರೂ ಭಯಗೊಂಡು ವಿಷ್ಣುವಿನ ಬಳಿಗೆ ಬಂದು 'ಯಜ್ಞಸ್ವರೂಪನಾದ ಹರಿಯೇ, ದಕ್ಷನ ಯಜ್ಞವನ್ನು ರಕ್ಷಿಸು. ನಿನ್ನ ಹೊರತು ಇನ್ನಾರೂ ರಕ್ಷಿಸಲಾರರು' ಎಂದು ಪ್ರಲಾಪಿಸಿದರು. ಆಗ ಹರಿಯು ಚಕ್ರವನ್ನು ಹಿಡಿದು ದೇವಗಣಗಳೊಡನೆ ಯುದ್ಧ ಮಾಡಲು ಬಂದ. ಆಗ ವೀರಭದ್ರ 'ಎಲೈ ಹರಿಯೆ, ಶಿವನ ಪ್ರತಿಜ್ಞೆಯನ್ನು ಏಕೆ ಮೀರಿ ನಡೆದಿರುವೆ? ಶಿವಭಕ್ತನಾದ ನೀನು ಶಿವದ್ವೇಷಿಯಾದ ದಕ್ಷನ ಯಜ್ಞವನ್ನು ರಕ್ಷಿಸಲು ಹೇಗೆ ಸಿದ್ಧನಾಗಿ ನಿಂತಿರುವೆ? ಸತೀದೇವಿಯು ಶಿವಾಪಮಾನಕ್ಕಾಗಿ ಪ್ರಾಣತ್ಯಾಗಮಾಡಿದುದನ್ನು ನೀನು ನೋಡಲಿಲ್ಲವೆ? ದಧೀಚಮುನಿಯು ಹೇಳಿದುದನ್ನೂ ಕೇಳಲಿಲ್ಲವೇ? ಹೀಗಿದ್ದರೂ ನೀನೂ ಯಜ್ಞಭಾಗವನ್ನು ತೆಗೆದುಕೊಳ್ಳಲು ಇಲ್ಲೇ ಕಾದಿದ್ದೂ ಅಲ್ಲದೆ, ಈಗ ನನ್ನ ಬಳಿ ಕಾದಾಡಲು ಬಂದಿರುವೆ. ಶಿವನಿಗೆ ವಿರುದ್ಧನಾಗಿ ನಿಂತಿರುವ ನಿನ್ನನ್ನು ಈಗಲೇ ನಾಶಗೊಳಿಸುವೆ' ಎಂದನು.

ವೀರಭದ್ರನ ಮಾತನ್ನು ಕೇಳಿ ವಿಷ್ಣುವು ನಗುತ್ತಾ 'ಎಲೈ ವೀರಭದ್ರನೇ, ಶಂಕರನ ಭಕ್ತನಾದ ನನ್ನನ್ನು ರುದ್ರದ್ವೇಷಿ ಎಂದು ಹೇಳಬೇಡ. ನಾನು ಪರಮೇಶ್ವರನಂತೆ ಭಕ್ತಪರಾಧೀನ. ಮೂಢನೂ ಕರ್ಮನಿಷ್ಠನೂ ಆದ ಈ ದಕ್ಷ ಬ್ರಹ್ಮ ನನ್ನ ಪರಮ ಭಕ್ತ. ಅತ ಪ್ರಾರ್ಥಿಸಿದ್ದಕ್ಕೆ ಈ ಯಜ್ಞಕ್ಕೆ ಬಂದಿರುವೆ. ರುದ್ರನ ಕೋಪದಿಂದ ಜನಿಸಿದ ನೀನು, ರುದ್ರನ ತೇಜಸ್ಸನ್ನು ಹೊಂದಿರುವೆ. ರುದ್ರನ ತೇಜಸ್ಸು ತುಂಬಾ ಪ್ರತಾಪವುಳ್ಳದ್ದು. ಅದನ್ನು ನಿವಾರಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೂ ನಾನು ನಿನ್ನನ್ನು ತಡೆಯುವೆ. ನನ್ನ ಭಕ್ತನಿಗಾಗಿ ಯುದ್ಧವನ್ನು ಮಾಡುವೆ. ಮುಂದೆ ಏನಾಗಬೇಕಾಗಿರುವುದೋ ಅದೇ ಆಗುವುದು. ಪರಮೇಶ್ವರನ ಇಚ್ಛೆ ಮುಂದೆ ನಾನು-ನೀನು ನಿಮಿತ್ತ ಅಷ್ಟೆ' ಎಂದ.

ವಿಷ್ಣುವಿನ ಮಾತು ಕೇಳಿ ಪ್ರಸನ್ನ ಚಿತ್ತನಾದ ವೀರಭದ್ರ 'ಎಲೈ ವಿಷ್ಣು, ನೀನು ನಮ್ಮ ಪ್ರಭು ಶಿವನಿಗೆ ಭಕ್ತನಾಗಿರುವುದನ್ನು ತಿಳಿದು ನನಗೆ ತುಂಬಾ ಸಂತೋಷವಾಗಿದೆ. ನಿನ್ನ ಸ್ವಭಾವವನ್ನು ಪರೀಕ್ಷೆಮಾಡಲು ನಾನು ಕಠೋರವಾಗಿ ಮಾತನಾಡಿದೆ. ಶಿವನಂತೆಯೇ ವಿಷ್ಣುವೂ ಮಹಿಮೆಯುಳ್ಳವನೆಂದು ವೇದಗಳು ವರ್ಣಿಸಿವೆ. ಶಂಕರ ಸೇವಕರಾದ ನಾವೆಲ್ಲರೂ ಅವನ ಆಜ್ಞೆಯಂತೆ ನಡೆಯುತ್ತೇವೆ. ನಿನಗೆ ಯಾವುದು ಯೋಗ್ಯವೆಂದು ತೋರುವುದೋ ಅದನ್ನು ಮಾಡು' ಎಂದು ಹೇಳಿದ.

ವೀರಭದ್ರನ ಮಾತನ್ನು ಕೇಳಿ ಹರಿಯು ನಗುತ್ತಾ, ಸೋದರವಾತ್ಸಲ್ಯದಿಂದ ಹೇಳಿದ: 'ಎಲೈ ವೀರನಾದ ವೀರಭದ್ರನೆ, ನನ್ನೊಡನೆ ಧೈರ್ಯದಿಂದ ಯುದ್ಧವನ್ನು ಮಾಡು. ನಿನ್ನ ಅಸ್ತ್ರಗಳಿಂದ ಹೊಡೆಯಲ್ಪಟ್ಟು ನಾನು ನನ್ನ ಸ್ಥಾನಕ್ಕೆ ತೆರಳುವೆ. ನನ್ನ ಮೂರ್ಖಭಕ್ತನ ನಂಬಿಬಂದಿದ್ದಕ್ಕೆ ನನಗೂ ಪ್ರಾಯಶ್ಚಿತ್ತವಾದಂತಾಗುತ್ತೆ' ಎಂದ. ನಂತರ ವಿಷ್ಣು ತನ್ನ ಭಕ್ತನ ಕೋರಿಕೆ ಈಡೇರಿಸುವ ಭಕ್ತಪರಾಧೀನನಾಗಿ ವೀರಭದ್ರನೊಂದಿಗೆ ಯುದ್ಧ ಮಾಡಲು ಸಿದ್ಧನಾದ. ವೀರಭದ್ರನೂ ತನ್ನ ಗಣಗಳೊಡನೆ ಯುದ್ಧಕ್ಕೆ ಸನ್ನದ್ಧನಾದ ಎಂಬಲ್ಲಿಗೆ ಶಿವಮಹಾಪುರಾಣದ ರುದ್ರಸಂಹಿತೆಯಲ್ಲಿನ ಸತೀಖಂಡದ ಮೂವತ್ತಾರನೆಯ ಅಧ್ಯಾಯ ಮುಗಿಯುತ್ತದೆ.

ಬೆರಗಿನ ಬೆಳಕು



ಗುರುರಾಜ ಕರಜಗಿ

ಅನಾಸಕ್ತ ಯೋಗ

ಶಿಶುಗಳವಲಕ್ಕಿ ಬೆಲ್ಲದ ಸಂಭ್ರಮವ ನೋಡಿ |
ಹಸಿವನೊಂದುವನೆ ಹಿರಿಯನು? ನಲಿಯದಿಹನೆ?||
ವಿಷಯಸಂಸಕ್ತ ಲೋಕವನ್ ಅನಾಸಕ್ತಿಯಿಂ |
ದೊಸೆದುನೋಳ್ಪನು ಜಾಣ – ಮಂಕುತಿಮ್ಮ
||679||

ಪದ-ಅರ್ಥ: ಶಿಶುಗಳವಲ್ಲಕ್ಕಿಬೆಲ್ಲದ = ಶಿಶುಗ-ಳ + ಅವಲಕ್ಕಿ + ಬೆಲ್ಲದ, ಹಸಿವನೊಂದುವನೆ- = ಹಸಿವನು + ಒಂದುವನೆ (ಹೊಂದುವನೆ), ವಿಷಯಸಂಸಕ್ತಲೋಕವನ್ = ವಿಷಯ + -ಸಂಸಕ್ತ(ಆಸಕ್ತಿ ಹೊಂದಿದ) + ಲೋಕವನ್ (ಲೋಕವನ್ನು), ಅನಾಸಕ್ತಿಯಿಂದೊಸೆದು-ನೋಳ್ಪನು = ಅನಾಸಕ್ತಿಯಿಂದ + ಒಸೆದು(ಬಗೆ-ದು) + ನೋಳ್ಪನು(ನೋಡುವನು).

ವಾಚ್ಯಾರ್ಥ: ಮಕ್ಕಳು ಸಂಭ್ರಮದಿಂದ ತಿನ್ನುವ ಅವಲಕ್ಕಿ ಬೆಲ್ಲವನ್ನು ಕಂಡು ಹಿರಿಯನಾದವನು, ಹಸಿವಿನಿಂದ ಕಿತ್ತುಕೊಳ್ಳುತ್ತಾನೆಯೇ? ಸಂತೋಷ-ಪಡುವುದಿಲ್ಲವೆ? ಹಾಗೆಯೇ ವಿಷಯ ಪ್ರಪಂಚದಲ್ಲಿ ಮಗ್ನವಾಗಿರುವ ಲೋಕವನ್ನು ಅನಾಸಕ್ತಿಯಿಂದ ತಿಳಿದು ನೋಡುವವನು ಜಾಣ.

ವಿವರಣೆ: ಡಿ.ವಿ.ಜಿ ಈ ಕಗ್ಗದಲ್ಲಿ ಒಂದು ಸುಂದರವಾದ ಚಿತ್ರವನ್ನು ಕಟ್ಟಿಕೊಡುತ್ತಾರೆ. ಮನೆಯಲ್ಲಿ ಅಜ್ಜ ಕುಳಿತಿದ್ದಾರೆ. ಮೊಮ್ಮಕ್ಕಳು ಮುಂದೆ ಆಟವಾಡುತ್ತ ನಲಿಯುತ್ತಿದ್ದಾರೆ. ಆಗ ತಾಯಿ, ಮಕ್ಕಳಿಗೆ ತುಂಬ ಇಷ್ಟವಾದ ಅವಲಕ್ಕಿ ಬೆಲ್ಲವನ್ನು ತಂದು ಕೊಡುತ್ತಾಳೆ. ಮಕ್ಕಳಿಗೆ ತುಂಬ ಸಂಭ್ರಮ. ಕುಣಿಯುತ್ತ, ಮಾತನಾಡುತ್ತ ಅದನ್ನು ಸಂತೋಷದಿಂದ ಮೆಲ್ಲುತ್ತಿದ್ದಾರೆ. ಆಗ ಅಜ್ಜ ಏನು ಮಾಡುತ್ತಾರೆ? ನನಗೂ ಹಸಿವೆಯಾಗಿದೆ ಎಂದು ಕೂಗಿ ಮಕ್ಕಳ ಕೈಯಲ್ಲಿದ್ದ ಅವಲಕ್ಕಿ ಬೆಲ್ಲವನ್ನು ಕಿತ್ತುಕೊಂಡು ತಿನ್ನುತ್ತಾರೆಯೇ? ಅಥವಾ ಛೇ ಅವಲಕ್ಕಿ ಬೆಲ್ಲವೇನು ಒಳ್ಳೆಯ ತಿಂಡಿಯೇ ಎಂದು ತಿರಸ್ಕಾರ ಮಾಡುತ್ತಾರೆಯೇ? ಸಾಮಾನ್ಯವಾಗಿ ಹಿರಿಯರು ಮಕ್ಕಳ ಸಂಭ್ರಮವನ್ನು ಕಂಡು ಸಂತೋಷಪಡುತ್ತಾರೆ. ಆ ತಿಂಡಿಗೆ ಆಸೆ ಪಡದೆ ಅನಾಸಕ್ತಿಯಿಂದ ಮಕ್ಕಳ ಸಂತೋಷವನ್ನು ನೋಡುತ್ತಾರೆ.

ಈ ಒಂದು ಪುಟ್ಟ ಪ್ರಸಂಗ ಅಧ್ಯಾತ್ಮಿಕ ಅನಾ-ಸಕ್ತಿಯೋಗವನ್ನು ಸುಂದರವಾಗಿ ನಮ್ಮ ಮುಂದೆ ಪ್ರಸ್ತುತಪಡಿಸುತ್ತದೆ. ಮಹಾತ್ಮ ಗಾಂಧೀಜಿ 'ಅನಾಸಕ್ತಿ ಯೋಗ' ಎಂಬ ಗ್ರಂಥವನ್ನು ಗುಜರಾತಿ ಭಾಷೆಯಲ್ಲಿ ರಚಿಸಿದ್ದರು. ಅದನ್ನು ಕನ್ನಡಕ್ಕೆ ಸಿದ್ಧವನಹಳ್ಳಿ ಕೃಷ್ಣಶರ್ಮರು ಅನುವಾದಿಸಿದ್ದಾರೆ. ಅನಾಸಕ್ತಿ ಬೇರೆ, ನಿರಾಸಕ್ತಿ ಬೇರೆ. ಗಾಂಧೀಜಿ ಅತ್ಯಂತ ಸರಳವಾಗಿ, "ನಿಷಿದ್ಧವಾದುದು ಫಲಾಸಕ್ತಿ, ವಿಹಿತವಾದದ್ದು ಅನಾಸಕ್ತಿ" ಎನ್ನುತ್ತಾರೆ. ಅನಾಸಕ್ತ ಯೋಗಿ ಪ್ರಪಂಚವನ್ನು ದೂಷಿಸುವುದಿಲ್ಲ, ತಿರಸ್ಕರಿಸುವು-ದಿಲ್ಲ. ಅವನು ಅದರಿಂದ ಫಲವನ್ನು ಅಪೇಕ್ಷಿಸುವು-ದಿಲ್ಲ. ಅಂಥ ಯೋಗಿಗೆ ತಾರ್ಕಿದ ಹಂಗಿಲ್ಲ. ಅವನು ಯಾವುದನ್ನೂ ಅಪೇಕ್ಷಿಸದಿದ್ದರೂ, ತನ್ನ ಕರ್ಮವನ್ನು ಯಥಾವತ್ತಾಗಿ ಮಾಡುತ್ತಾನೆ. ಪ್ರಪಂಚದ ಜನ ವಿಷಯಗಳಲ್ಲಿ ಆಸಕ್ತರಾದದ್ದನ್ನು ಕಂಡು ದೂಷಿಸುವದಿಲ್ಲ ಮತ್ತು ತಾನೂ ಆ ವಿಷಯಗಳಿಗೆ ಸಿಕ್ಕಿಕೊಳ್ಳುವುದಿಲ್ಲ. ಜಗತ್ತಿನ ಪ್ರಗತಿಯನ್ನು, ಸಾಧನೆಯನ್ನು, ಕಂಡುಬರುವ ಹೊಸದನ್ನು ಕಂಡು ಸಂತೋಷಪಡುತ್ತಾನೆ. ಆದರೆ ಅವನಲ್ಲಿ ಯಾವ ಅಪೇಕ್ಷೆಯೂ ಇಲ್ಲ.

ಮನೆಯಲ್ಲಿ ಹಿರಿಯ, ಮಕ್ಕಳ ಸಂಭ್ರಮವನ್ನು ಕಂಡು ಸಂತೋಷಿಸುವಂತೆ, ತಾನೂ ಆಸಕ್ತಿಯಿಂದ ಅವರ ಸಂತಸವನ್ನು ಕಿತ್ತುಕೊಳ್ಳದಂತೆ, ಪ್ರಪಂಚದ ಅನಾಸಕ್ತ ಯೋಗಿ, ವಿಷಯಗಳಲ್ಲಿ ಮಗ್ನವಾದ ಜನರನ್ನು ಕಂಡು, ತಾನೂ ಅವರಂತೆಯೇ ಆಗಬೇಕೆಂದು ಅಪೇಕ್ಷಿಸುವುದಿಲ್ಲ. ಅದರ ತಿರಸ್ಕಾ-ರವನ್ನೂ ಮಾಡುವುದಿಲ್ಲ. ಯಾಕೆಂದರೆ ಅದೂ ಒಂದು ಬ್ರಹ್ಮದ ಲೀಲೆ ಎಂಬುದು ಅವನಿಗೆ ತಿಳಿದಿದೆ. ಅಂಥವನು ಜಾಣ, ಜ್ಞಾನಿ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜುಲೈ 26, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣತ್ರಯೋದಶಿ ಗಂ. 18-48 ನಕ್ಷತ್ರ: ಆರ್ದ್ರಾ ಗಂ. 28-09 ಯೋಗ: ವ್ಯಾಘಾತ ಗಂ. 16-07, ಕರಣ: ಗರಜೆ ಗಂ. 05-32, ಕರ್ಕಾಟಕ ಮಾಸದ 09 ನೇ ದಿನ.
ರಾಹುಕಾಲ : ಮಧ್ಯಾಹ್ನ 03:00 – 04:30
ಸೂರ್ಯೋದಯ : 06-18 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 26 ಜುಲ್‌ಹಿಜಾನ್
ದಿನ ವಿಶೇಷ : ಖೇರ್ ಪೂಜಾ (ತ್ರಿಪುರ), ಅದೃಷ್ಟ ಸಂಖ್ಯೆ : 1, 7

ಮೇಷ : ಕಾರ್ಯಕ್ಷೇತ್ರದಲ್ಲಿ ಶ್ರಮಕ್ಕೆ ತಕ್ಕಂತೆ ದಿನದಿಂದ ದಿನಕ್ಕೆ ಅಭಿವೃದ್ಧಿಯಾಗಲಿದೆ. ಹಿತಶತ್ರುಗಳ ಬಗ್ಗೆ ಹೆಚ್ಚು ಜಾಗ್ರತೆ ಇರಲಿ. ನಿಮ್ಮ ಮನೆಯ ಮಂಗಳ ಕಾರ್ಯಗಳಿಗೆ ಅಡ್ಡಿ ಉಂಟುಮಾಡುವ ಪ್ರಯತ್ನ ನಡೆಯಬಹುದು.

ವೃಷಭ : ಕಾನೂನಿಗೆ ವಿರುದ್ಧವಾದ ಕೆಲವು ಸಂಗತಿಗಳು ನಿಮ್ಮಿಂದ ನಡೆಯಬಹುದು. ತಾಯಿಯ ಆರೋಗ್ಯ ಸ್ಥಿತಿಯಲ್ಲಿ ಚೇತರಿಕೆ ಕಂಡು ಬರುತ್ತದೆ. ಆಕಸ್ಮಿಕ ಪ್ರಯಾಣದಿಂದ ದಿನಚರಿಯ ಕಾರ್ಯಗಳು ವಿಳಂಬವಾಗಲಿವೆ.

ಮಿಥುನ : ಅಡಿಕೆ ಮತ್ತು ರಬ್ಬರ್ ಪದಾರ್ಥದ ವ್ಯಾಪಾರಿಗಳಿಗೆ ನೂತನ ವ್ಯಕ್ತಿಯ ಪರಿಚಯವು ಉತ್ತಮ ವ್ಯವಹಾರ ನಡೆಸಲು ಉಪಯೋಗವಾಗುವುದು. ಬಂಧುಗಳ ಆಗಮನ ಮನಸ್ಸಿಗೆ ಸಂತೋಷ ಕೊಡಲಿದೆ.

ಕರ್ಕಾಟಕ : ಕಂದಾಯ ಇಲಾಖೆಯ ಉನ್ನತ ಅಧಿಕಾರಿಗಳಿಗೆ ದೂರದ ಊರಿಗೆ ವರ್ಗಾವಣೆಯಾಗುವ ಸಾಧ್ಯತೆಗಳಿವೆ. ಸಂಬಂಧದಲ್ಲಿ ವ್ಯವಹಾರ ಮಾಡುವುದರಿಂದ ವ್ಯವಹಾರದಲ್ಲಿಯೂ ಮೋಸ ಆಗಬಹುದು.

ಸಿಂಹ: ಸ್ವಂತವಾಗಿ ವ್ಯಾಪಾರ ಮಾಡಲು ಯೋಚನೆ ಮಾಡಬಹುದು. ನಿಮ್ಮ ಆಲೋಚನೆಗಳಿಗೆ ಪೂರಕವಾಗಿ ತಂದೆಯವರು ನೆರವು ಸಿಗಲಿದೆ. ಅವಶ್ಯಕತೆ-ಗಿಂತ ಜಾಸ್ತಿಯಾಗಿ ಮಾತನಾಡುವುದು ಸಮಸ್ಯೆಯನ್ನು ಕರೆದಂತಾಗುವುದು.

ಕನ್ಯಾ : ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ಸಿಗುವ ಸಂಭವಗಳಿವೆ. ರಸ ಪದಾರ್ಥಗಳ ವ್ಯವಹಾರ ನಡೆಸುವವರಿಗೆ ಹೆಸರು ಹೆಚ್ಚಿಸಿಕೊಳ್ಳಲು ಉತ್ತಮ ಅವಕಾಶ ಸಿಗಲಿದೆ. ಕುಟುಂಬ ವರ್ಗದವರು ಸಕಾರಾತ್ಮಕ ಸಹಾಯ ನೀಡುತ್ತಾರೆ.

ತುಲಾ : ನಿಮ್ಮ ನಿಸ್ವಾರ್ಥ ಶ್ರಮಕ್ಕೆ ಹೆಚ್ಚಿನ ಫಲ ದೊರೆಯುತ್ತದೆ. ಸಾಲದ ಮರುಪಾವತಿಯ ಬಗ್ಗೆ ಹೆಚ್ಚಿನ ಗಮನವಿರಲಿ. ಜನರನ್ನು ಆಕರ್ಷಿಸುವ ಕಲೆ ಹೊಂದಿರುವ ನಿಮಗೆ ವ್ಯವಹಾರದಲ್ಲಿ ಆಕರ್ಷಿಸುವುದು ಕಷ್ಟವಾಗುವುದಿಲ್ಲ.

ವೃಶ್ಚಿಕ : ಭೂಮಿಗೆ ಸಂಬಂಧಿಸಿದಂತೆ ವ್ಯಾಜ್ಯಗಳು ಸಂಭವಿಸಬಹುದು. ಶತ್ರುಗಳು ನಿಮ್ಮ ಕಾರ್ಯವೈಖರಿಯಿಂದ ಚಕಿತಗೊಂಡು ನಿಮ್ಮ ಸನಿಹಕ್ಕೂ ಬರಲಾರರು. ಲೆಕ್ಕಾಚಾರವನ್ನು ನೋಡುವ ಅಮೋಘ ಅವಕಾಶಗಳು ಸಿಗಲಿವೆ

ಧನು : ವಿದ್ಯಾರ್ಥಿಗಳು ಪಾಠದ ವಿಚಾರದಲ್ಲಿ ಮತ್ತು ಪಠ್ಯೇತರ ಚಟುವಟಿಕೆಗ-ಳಲ್ಲಿ ಸಮಾನವಾದ ಗಮನವನ್ನು ನೀಡಿದರೆ ಸಮಾಜದಲ್ಲಿ ಗುರುತಿಸುವ ವ್ಯಕ್ತಿ ಆಗಬಹುದು. ಹನುಮಂತನ ನಾಮ ಸ್ಮರಣೆ ಮಾಡಿ.

ಮಕರ : ಹಣದ ವಿಚಾರದಲ್ಲಿ ಆದಷ್ಟು ಲಾಭ-ನಷ್ಟದ ಯೋಚನೆ ಇದ್ದರೆ ಉತ್ತಮ. ಸದ್ಯದ ಪರಿಸ್ಥಿತಿಯಲ್ಲಿ ಸದಾ ವಿಜಯ ನಿಮ್ಮದೇ ಆದ್ದರಿಂದ ನೂತನ ಆಸ್ತಿ ಸಂಪಾದಿಸುವ ಬಗ್ಗೆ ನಿಮ್ಮ ಆದಷ್ಟು ಪ್ರಯತ್ನವಿರಲಿ.


ಕುಂಭ : ಇತರರ ಸಂಕಷ್ಟಗಳಿಗೆ ನೆರವಾಗುವ ಮನೋಭಾವವನ್ನು ಬೆಳೆಸಿಕೊಳ್ಳಿರಿ. ನಿಮ್ಮ ಚಟುವಟಿಕೆಗಳಿಂದ ಸಮಾಜದಲ್ಲಿ ಉತ್ತಮವಾದ ಸಂಪರ್ಕ ಆಗುವುದು. ಪಾಲುದಾರಿಕೆಯಲ್ಲಿ ಅಭಿಪ್ರಾಯ ಬೇಧ ಉಂಟಾಗಬಹುದು.

ಮೀನ : ಧಾರ್ಮಿಕ ವ್ಯಕ್ತಿಯ ಭೇಟಿಯಿಂದ ಆಶ್ಚರ್ಯಕರ ಬದಲಾವಣೆ ಆಗಲಿದೆ. ವ್ಯವಹಾರದಲ್ಲಿ ಇಂದು ತೆಗೆದುಕೊಳ್ಳುವ ನಿರ್ಧಾರದಲ್ಲಿ ಎಡವುವ ಸಾಧ್ಯತೆಗಳಿದೆ. ಅಪೇಕ್ಷಿತರಿಗೆ ಬ್ಯಾಂಕ್ ನಿಂದ ಸಾಲ ಸೌಲಭ್ಯ ಸಿಗಲಿದೆ.

ಪದಬಂಧ 5030 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಇದು ಹೋಲಿಕೆಗೆ ಮೀರಿದ್ದು(5)
4.ಕೊನೆಗೆ ಬೆಲೆ ಇಟ್ಟಾಗ ಹೊಟ್ಟೆ ಕಾಣಿಸಿತು(3)
5.ಸುತನಿಗೆಂದು ತಂದಿರುವ ತಿನ್ನುವ ಪದಾರ್ಥ(3)
9.ಮಧ್ಯಾಹ್ನವೇ ಹರಿದಿರುವ ಲಕ್ಷ್ಯ(2)
10.ತುತ್ತೂರಿ ಊದುತ್ತಾ ನಡೆಸಿರುವ ಒಳಸಂಚು(3)
11.ಹೊರಗೆ ಕಾಣಿಸಿಕೊಂಡ ಧೂಮ(2)
12.ಮಗನಿಗೆ ಕಾಣಿಸಿರುವ ವೇದ(3)
15.ಗಮಾರನು ನೋಡುತ್ತಿರುವ ಷಹರು(3)
16.ರಜದಲ್ಲಿ ಆಚರಿಸಿದ ಬೆಳ್ಳಿ ಹಬ್ಬ(5)

ಮೇಲಿಂದ ಕೆಳಕ್ಕೆ
1.ಮಾನಿನಿಗೆ ಮೂಡಿರುವ ಶಂಕೆ(3)
2.ಉರಗದ ಎದೆ(2)
3.ತರಗತಿಯಲ್ಲಿ ನೆರೆದ ಗುಂಪು(2)
4.ಪದ್ಯ ಕಲಿಸಿದ ಶಿಕ್ಷಕಿ(5)
6.ಈತ ಕೊಳ್ಳೆಹೊಡೆಯುವವನು (5)
7. ಪಿತನ ಬಳಿಯಲ್ಲಿರುವ ಕ್ಷೌರಿಕ
8.ಈ ಪರಿ ಕಾಣಿಸುತ್ತಿರುವ ಜಾತ್ರೆ(3)
13.ಮಧುರ ಫಲ ನೀಡುತ್ತಿರುವ ವೃಕ್ಷ(2)
14.ಆನಂದ ಹೀಗೆ ಬಂದಿದೆ(3)
15.ವನದಲ್ಲಿ ಹೊಸತು ಕಾಣುತ್ತಿದೆ(2)



5029ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಾರವ4.ರಥೋತ್ಸವ6.ಶತಾಯುಷಿ8.ನವೀನ11.ಕಸೂತಿ13.ಹಸುಗೂಸು17.ಮದಕರಿ18.ಲಿಲಾವು

ಮೇಲಿಂದ ಕೆಳಕ್ಕೆ:
1.ಹಾಜರಿ2.ವರಮಾನ3.ಅಲ್ಪಾಯು5.ವಶ7.ಷಿಕಾರಿ9.ನಡುಕ10.ವಿವಾಹ12.ತಿಲಾಂಜಲಿ14.ಸುಷುಪ್ತಿ15.ಸುಮ16.ಹಗೇವು

ಸುಡೊಕು 5416

1		9		2			8	
	6				9		5	2
	8			4	5			
2							6	
		4		3				1
5					2			
		5		9			7	6
7			2		6	8		
9	4			7			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5415 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

ಎಚ್ಚರಿಕೆ ನಡುವೆಯೂ ಫಲಕ ಪ್ರದರ್ಶಿಸಿ ಕಲಾಪಕ್ಕೆ ಅಡ್ಡಿ ಪಡಿಸಿದ ಸದಸ್ಯರು

ಕಾಂಗ್ರೆಸ್‌ನ ನಾಲ್ವರು ಸಂಸದರ ಅಮಾನತು



ಬೆಲೆ ಏರಿಕೆ ವಿರುದ್ಧ ಫಲಕ ಹಿಡಿದು ಪ್ರತಿಭಟಿಸಿದ ಕಾಂಗ್ರೆಸ್ ಸಂಸದರಾದ ಮಾಣಿಕ್ಕಂ ಟಾಗೋರ್, ಟಿ.ಎನ್. ಪ್ರತಾಪನ್, ಜ್ಯೋತಿಮಣಿ ಹಾಗೂ ರಮ್ಯಾ ಹರಿದಾಸ್

ನವದೆಹಲಿ(ಪಿಟಿಐ): ಬೆಲೆ ಏರಿಕೆ, ಜಿಎಸ್‌ಟಿ ಮತ್ತು ಇತರ ವಿಷಯಗಳ ಕುರಿತು ವಿರೋಧ ಪಕ್ಷಗಳು ನಡೆಸಿದ ಪ್ರತಿಭಟನೆಯು ಸತತ ಆರನೇ ದಿನವೂ ಲೋಕಸಭೆಯಲ್ಲಿ ಕಲಾಪವನ್ನು ನುಂಗಿ ಹಾಕಿತು.

ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರ ಎಚ್ಚರಿಕೆಯ ಹೊರತಾಗಿಯೂ ಫಲಕಗಳನ್ನು ಪ್ರದರ್ಶಿಸಿ ಕಲಾಪಕ್ಕೆ ಅಡ್ಡಿಪಡಿಸಿದ ಕಾಂಗ್ರೆಸ್‌ನ ನಾಲ್ವರು ಸಂಸದರನ್ನು ಮುಂಗಾರು ಅಧಿವೇಶನದ ಉಳಿದ ಅವಧಿಗೆ ಅಮಾನತು ಮಾಡಲಾಗಿದೆ.

ಕಾಂಗ್ರೆಸ್ ಸಂಸದರಾದ ಮಾಣಿಕ್ಕಂ ಟಾಗೋರ್, ಟಿ.ಎನ್. ಪ್ರತಾಪನ್, ಜ್ಯೋತಿಮಣಿ ಹಾಗೂ ರಮ್ಯಾ ಹರಿದಾಸ್ ಅವರನ್ನು ಅಮಾನತು ಮಾಡಲಾಗಿದೆ.

ನಾಲ್ವರು ಸಂಸದರನ್ನು ಅಧಿವೇಶನದ ಉಳಿದ ಅವಧಿಗೆ ಅಮಾನತು ಮಾಡುವುದಕ್ಕೆ ಸಂಬಂಧಿಸಿದ ನಿಲುವಳಿಯನ್ನು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಮಂಡಿಸಿದರು. ಧ್ವನಿಮತದ ಮೂಲಕ ನಿಲುವಳಿಗೆ ಅಂಗೀಕಾರ ಪಡೆಯಲಾಯಿತು.

ಕಲಾಪದ ವೇಳೆ ವಿರೋಧ ಪಕ್ಷಗಳ ಕೆಲವು ಸದಸ್ಯರು ಸದನದ ಬಾವಿಗಿಳಿದು ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಏರಿಕೆಯ ಫಲಕಗಳನ್ನು ಪ್ರದರ್ಶಿಸಿದರು. ಗದ್ದಲದ ನಡುವೆಯೇ 20 ನಿಮಿಷಗಳ ಕಾಲ ಪ್ರಶ್ನೋತ್ತರ ಅವಧಿ ನಡೆದ ನಂತರ ಕಲಾಪವನ್ನು ಮಧ್ಯಾಹ್ನ 3ಗಂಟೆಗೆ ಮುಂದೂಡಲಾಯಿತು.

ಕಲಾಪ ಪುನಾರಾರಂಭಗೊಂಡ ಬಳಿಕ ಮತ್ತೆ ವಿರೋಧ ಪಕ್ಷಗಳ ಸದಸ್ಯರು ಭಿತ್ತಿಪತ್ರಗಳನ್ನು ಪ್ರದರ್ಶಿಸಿ ಘೋಷಣೆ ಕೂಗಿದರು. ಕಲಾಪಕ್ಕೆ ನಿರಂತರ ಅಡ್ಡಿಪಡಿಸಿದ ಕಾರಣ ಕಾಂಗ್ರೆಸ್‌ನ ನಾಲ್ವರು ಸಂಸದರನ್ನು ಅಮಾನತು-ಗೊಳಿಸಲಾಯಿತು. ಬಳಿಕ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ಕಾಂಗ್ರೆಸ್ ಖಂಡನೆ: ಸಂಸದರ ಅಮಾನತನ್ನು ಕಾಂಗ್ರೆಸ್ ಖಂಡಿಸಿದೆ. ಸಂಸತ್ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ಲೋಕಸಭೆಯ ಕಾಂಗ್ರೆಸ್ ಉಪನಾಯಕ ಗೌರವ್ ಗೊಗೊಯ್, 'ಸಂಸದರನ್ನು ಅಮಾನತು ಮಾಡುವ ಮೂಲಕ ಜನರ ಪರವಾಗಿ ಬೆಲೆ ಏರಿಕೆ ವಿರುದ್ಧ ಧ್ವನಿ ಎತ್ತಿದ ಪಕ್ಷವನ್ನು ಬೆದರಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಕಾಂಗ್ರೆಸ್ ಇಂಥ ಬೆದರಿಕೆಗೆ ಬಗ್ಗುವುದಿಲ್ಲ' ಎಂದು ಹೇಳಿದರು.

'ಸಂಸದರು ಫಲಕಗಳನ್ನು ಹಿಡಿದು ಅಡುಗೆ ಅನಿಲ, ಹಾಲು, ಮೊಸರು ಮುಂತಾದ ಪದಾರ್ಥಗಳಿಗೆ ಜಿಎಸ್‌ಟಿ ವಿಧಿಸಿರುವ ಬಗ್ಗೆ ಧ್ವನಿ ಎತ್ತಿದ್ದರು. ಈ ಬಗ್ಗೆ ಚರ್ಚಿಸಲು ನಿಲುವಳಿ ಸೂಚನೆಗೆ ಕೋರಿದ್ದರು. ಆದರೆ ಯಾವುದೇ ಚರ್ಚೆ ನಡೆಯಲಿಲ್ಲ' ಎಂದು ಹೇಳಿದರು.

ಬೆಲೆ ಏರಿಕೆ ಚರ್ಚೆಗೆ ಸಿದ್ಧ: ಜೋಶಿ

ನವದೆಹಲಿ: ಲೋಕಸಭೆ ಕಲಾಪಕ್ಕೆ ಅಡ್ಡಿಪಡಿಸಿದ ನಾಲ್ವರು ಕಾಂಗ್ರೆಸ್ ಸಂಸದರನ್ನು ಮುಂಗಾರು ಅಧಿವೇಶನದ ಉಳಿದ ಅವಧಿಗೆ ಅಮಾನತು ಮಾಡಿರುವ ನಿರ್ಧಾರವನ್ನು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಸಮರ್ಥಿಸಿಕೊಂಡಿದ್ದಾರೆ.

ಸರ್ಕಾರವು ಬೆಲೆ ಏರಿಕೆ ಬಗ್ಗೆ ಚರ್ಚೆಗೆ ಖಂಡಿತಾ ಸಿದ್ಧವಿದೆ. ಆದರೆ, ಸಂಸದರು ಸ್ಪೀಕರ್ ಅವರ ಪೀಠಕ್ಕೆ ಗೌರವ ನೀಡದಿರುವುದು ಮತ್ತು ನಿಯಮಗಳನ್ನು ಉಲ್ಲಂಘಿಸಿ ಗದ್ದಲ ಸೃಷ್ಟಿಸಿರುವುದು ಸರಿಯಲ್ಲ ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ಸಂಸದರ ಅಮಾನತಿಗೆ ಸಂಬಂಧಿಸಿ ವರದಿಗಾರರ ಬಳಿ ಪ್ರತಿಕ್ರಿಯೆ ನೀಡಿದ ಜೋಶಿ, 'ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೋವಿಡ್‌ನಿಂದ ಚೇತರಿಸಿಕೊಂಡ ಕೂಡಲೇ ಬೆಲೆ ಏರಿಕೆ ಬಗ್ಗೆ ಚರ್ಚಿಸಲು ಸರ್ಕಾರ ಸಿದ್ಧವಿದೆ ಎಂದು ತಿಳಿಸಲಾಗಿತ್ತು' ಎಂದರು.

ಸುದ್ದಿ 2 ನಿಮಿಷ

ತಮಿಳುನಾಡು: ಹಾಸ್ಟೆಲ್‌ನಲ್ಲಿ 12ನೇ ತರಗತಿ ವಿದ್ಯಾರ್ಥಿನಿ ಆತ್ಮಹತ್ಯೆ

ತಿರುವಳ್ಳೂರು (ತಮಿಳುನಾಡು) (ಪಿಟಿಐ): ತಮಿಳುನಾಡಿನ ತಿರುವಳ್ಳೂರು ಸಮೀಪದ ಸರ್ಕಾರಿ ಅನುದಾನಿತ ಶಾಲೆಯ ಹಾಸ್ಟೆಲ್ ಆವರಣದಲ್ಲಿ 12ನೇ ತರಗತಿ ವಿದ್ಯಾರ್ಥಿನಿಯ ಮೃತದೇಹ ಸೋಮವಾರ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿಯು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಮಾಹಿತಿ ಬಂದಿದೆ. ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಾಗಿದ್ದು, ತನಿಖೆಯನ್ನು ಸಿಬಿಸಿಐಡಿಗೆ ವರ್ಗಾಯಿಸಲಾಗಿದೆ ಎಂದು ಉಪ ಪೊಲೀಸ್ ಮಹಾನಿರ್ದೇಶಕಿ ಎಂ.ಸಾತಿಯಾ ಪ್ರಿಯಾ ತಿಳಿಸಿದ್ದಾರೆ.

ಇಂಥದ್ದೇ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್ ನೀಡಿದ ಆದೇಶದಂತೆ ಬಾಲಕಿ ಮೃತದೇಹದ ಮರಣೋತ್ತರ ಪರೀಕ್ಷೆಯ ವಿಡಿಯೊಗ್ರಫಿ ಮಾಡಲಾಗುವುದು ಎಂದು ಪೊಲೀಸ್ ವರಿಷ್ಠಾಧಿಕಾರಿ ಪಿ.ಸೆಫಸ್ ಕಲ್ಯಾಣ್ ತಿಳಿಸಿದ್ದಾರೆ.

ಈ ಹಿಂದೆ ಜುಲೈ 13ರಂದು ಕಲ್ಲಕುರಿಚಿಯಲ್ಲಿ 17 ವರ್ಷದ ಬಾಲಕಿ ಮೃತಪಟ್ಟಿದ್ದಳು. ಸಾವಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಕುಟುಂಬಸ್ಥರು, ಸ್ಥಳೀಯರು ಪ್ರತಿಭಟಿಸಿದ್ದರು. ಅದು ಹಿಂಸಾಚಾರಕ್ಕೆ ತಿರುಗಿತ್ತು.

ಲಾಲ್‌ಚೌಕ್‌ನಿಂದ ತಿರಂಗ ಯಾತ್ರೆಗೆ ಚಾಲನೆ



ಶ್ರೀನಗರ (ಪಿಟಿಐ): 1999ರ ಕಾರ್ಗಿಲ್ ಯುದ್ಧದಲ್ಲಿ ಮಡಿದ ವೀರ ಯೋಧರಿಗೆ ಗೌರವ ಸಲ್ಲಿಸಲು ಬಿಜೆಪಿ ಹಮ್ಮಿಕೊಂಡಿರುವ ತಿರಂಗ ಬೈಕ್ ರ‍್ಯಾಲಿಗೆ ಸೋಮವಾರ ಇದೇ ಮೊದಲ ಬಾರಿಗೆ ಜಮ್ಮು ಮತ್ತು ಕಾಶ್ಮೀರದ ಲಾಲ್‌ಚೌಕ್‌ನಿಂದ ಚಾಲನೆ ನೀಡಲಾಯಿತು.

ಲಡಾಖ್‌ನ ದ್ರಾಸ್‌ನಲ್ಲಿರುವ ಕಾರ್ಗಿಲ್ ಯುದ್ಧ ಸ್ಮಾರಕದವರೆಗಿನ ಯಾತ್ರೆಗೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್, ಸಂಸದ ತೇಜಸ್ವಿ ಸೂರ್ಯ ಅವರು ಹಸಿರು ನಿಶಾನೆ ತೋರಿದರು. ಸುಮಾರು ನೂರಕ್ಕೂ ಹೆಚ್ಚು ಬೈಕ್‌ಗಳು ರ‍್ಯಾಲಿಯಲ್ಲಿ ಭಾಗಿಯಾಗಿದ್ದವು. ಈ ವೇಳೆ ಬಿಜೆಪಿ ನಾಯಕರು ತಿರಂಗ ಹಿಡಿದು, 'ಆಜಾದ್ ಹಿಂದೂಸ್ತಾನ್ ಜಿಂದಾಬಾದ್', 'ಅಖಂಡ ಭಾರತ ಜಿಂದಾಬಾದ್' ಘೋಷಣೆ ಕೂಗಿದರು.

ಲಾಲ್‌ಚೌಕ್ ಪ್ರತ್ಯೇಕತಾವಾದಿಗಳ ಹಿಡಿತದಲ್ಲಿರುವ ಕಾರಣ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಭದ್ರತೆಯಲ್ಲಿ ಐತಿಹಾಸಿಕ 'ಘಂಟಾ ಘರ್'ನಲ್ಲಿ ಬೈಕ್ ರ‍್ಯಾಲಿಯನ್ನು ಆರಂಭಿಸಲಾಯಿತು. ಕಾರ್ಯಕ್ರಮದ ಮೇಲೆ ನಿಗಾ ವಹಿಸಲು ಭದ್ರತಾ ಪಡೆ ಡ್ರೋನ್‌ಗಳನ್ನು ಬಳಸಿತ್ತು.



'ಸುಪ್ರೀಂ' ಮೆಟ್ಟಿಲೇರಿದ ಉದ್ಧವ್ ಠಾಕ್ರೆ ಬಣ

ಮುಂಬೈ: ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಬಣವನ್ನು ನೈಜ ಶಿವಸೇನಾ ಎಂದು ಗುರುತಿಸುವ ಭಾರತೀಯ ಚುನಾವಣಾ ಆಯೋಗದ ಪ್ರಕ್ರಿಯೆಗೆ ತಡೆಯೊಡ್ಡಬೇಕು ಎಂದು ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಬಣ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

ಶಿವಸೇನಾ ಪ್ರಧಾನ ಕಾರ್ಯದರ್ಶಿ ಸುಭಾಷ್ ದೇಸಾಯಿ ಅವರು ಅರ್ಜಿ ಸಲ್ಲಿಸಿದ್ದಾರೆ. ಪ್ರತಿವಾದಿಗಳು 'ಚುನಾವಣಾ ಚಿಹ್ನೆಗಳ (ಮೀಸಲು ಮತ್ತು ಹಂಚಿಕೆ) ಆದೇಶ 1968'ರ 15ನೇ ನಿಯಮದ ಅಡಿಯಲ್ಲಿ ಚುನಾವಣಾ ಆಯೋಗದಿಂದ ಶಿವಸೇನಾ ಎಂದು ಮಾನ್ಯತೆ ಪಡೆಯುವ ಪ್ರಕ್ರಿಯೆ ಆರಂಭಿಸಿದ್ದಾರೆ ಎಂದು ಸುಭಾಷ್ ದೇಸಾಯಿ ಉಲ್ಲೇಖಿಸಿದ್ದಾರೆ.

ಕುವೈತ್‌ನಿಂದ ಹೈದರಾಬಾದ್‌ಗೆ ಬಂದಿದ್ದರು

ತೆಲಂಗಾಣ ವ್ಯಕ್ತಿಗೆ ಮಂಕಿಪಾಕ್ಸ್?


ಹೈದರಾಬಾದ್ (ಪಿಟಿಐ): ಕುವೈತ್‌ನಿಂದ ತೆಲಂಗಾಣಕ್ಕೆ ಬಂದಿದ್ದ 35 ವರ್ಷದ ವ್ಯಕ್ತಿಯಲ್ಲಿ ಮಂಕಿಪಾಕ್ಸ್ ಲಕ್ಷಣ ಪತ್ತೆಯಾಗಿದೆ.

'ವ್ಯಕ್ತಿಯಿಂದ ಮಾದರಿ ಸಂಗ್ರಹಿಸಿ ಪರೀಕ್ಷೆಗಾಗಿ ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಗೆ ಕಳುಹಿಸಲಾಗಿದೆ. ಹೈದರಾಬಾದ್‌ನಲ್ಲಿರುವ ಗಾಂಧಿ ಸರ್ಕಾರಿ ಆಸ್ಪತ್ರೆಯಲ್ಲೂ ಅದರ ಪರೀಕ್ಷೆ ನಡೆಸಲಾಗುತ್ತದೆ. ಮಂಗಳವಾರ ಪರೀಕ್ಷಾ ವರದಿ ಲಭ್ಯವಾಗುವ ನಿರೀಕ್ಷೆ ಇದೆ' ಎಂದು ತೆಲಂಗಾಣ ಆರೋಗ್ಯ ಸಚಿವ ಟಿ.ಹರೀಶ್ ರಾವ್ ಹೇಳಿದ್ದಾರೆ.

'ವ್ಯಕ್ತಿಯನ್ನು ಚಿಕಿತ್ಸೆಗಾಗಿ ಹೈದರಾಬಾದ್‌ನ 'ಫೀವರ್ ಆಸ್ಪತ್ರೆ'ಗೆ ದಾಖಲಿಸಲಾಗಿದೆ. ರಾಜ್ಯದಲ್ಲಿ ಮಂಕಿಪಾಕ್ಸ್ ಹರಡದಂತೆ ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ವಿದೇಶಗಳಿಂದ ಅದರಲ್ಲೂ ಮುಖ್ಯವಾಗಿ ಆಫ್ರಿಕಾ ರಾಷ್ಟ್ರಗಳಿಂದ ಬರುವವರನ್ನು ಪರೀಕ್ಷಿಸುವ ಸಲುವಾಗಿ ವಿಮಾನ ನಿಲ್ದಾಣಗಳಲ್ಲಿ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ' ಎಂದು ತಿಳಿಸಿದ್ದಾರೆ.

ಸೋಂಕಿನ ಲಕ್ಷಣ ಕಾಣಿಸಿಕೊಂಡಿರುವ ವ್ಯಕ್ತಿಯು ಜುಲೈ 6ರಂದು ಕುವೈತ್‌ನಿಂದ ಬಂದಿದ್ದರು. ಜುಲೈ 20ರಂದು ಅವರಿಗೆ ಜ್ವರ ಬಾಧಿಸಿತ್ತು. ಜುಲೈ 23ರಂದು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರಲ್ಲಿ ಮಂಕಿಪಾಕ್ಸ್‌ನ ಲಕ್ಷಣ ಇರುವುದು ಪರೀಕ್ಷೆಯಿಂದ ಗೊತ್ತಾಗಿತ್ತು. 'ರೋಗಿಯ ಸಂಪರ್ಕಕ್ಕೆ ಬಂದಿದ್ದ ಆರು ಮಂದಿಯನ್ನು ಗುರುತಿಸಲಾಗಿದೆ. ಅವರಲ್ಲಿ ಸೋಂಕಿನ ಲಕ್ಷಣ ಕಂಡುಬಂದಿಲ್ಲಎಂದು ಅಧಿಕಾರಿ ಹೇಳಿದ್ದಾರೆ.

'ಸೋಂಕಿತರ ಆರೋಗ್ಯ ಸ್ಥಿರವಾಗಿದೆ'



ತಿರುವನಂತಪುರ (ಪಿಟಿಐ): 'ಮಂಕಿಪಾಕ್ಸ್ ಬಾಧಿತ ಮೂವರು ವ್ಯಕ್ತಿಗಳ ಆರೋಗ್ಯ ಸ್ಥಿರವಾಗಿದೆ. ಅವರೊಂದಿಗೆ ಪ್ರಾಥಮಿಕ ಸಂಪರ್ಕ ಸಾಧಿಸಿದ್ದವರಿಗೆ ಸೋಂಕು ತಗುಲಿಲ್ಲ ಎಂಬುದು ಪರೀಕ್ಷೆಯಿಂದ ದೃಢಪಟ್ಟಿದೆ. ಹೀಗಾಗಿ ಈ ಕಾಯಿಲೆ ಬಗ್ಗೆ ಯಾರೂ ಆತಂಕಕ್ಕೆ ಒಳಗಾಗಬಾರದು' ಎಂದು ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಸೋಮವಾರ ಹೇಳಿದ್ದಾರೆ.

'ರಾಜ್ಯದೆಲ್ಲೆಡೆ ಪರೀಕ್ಷಾ ಪ್ರಮಾಣ ಹೆಚ್ಚಿಸಲಾಗಿದೆ. ರೋಗ ಪತ್ತೆಹಚ್ಚಲು ಹಾಗೂ ಅದನ್ನು ನಿಯಂತ್ರಿಸಲು ಅನುಸರಿಸಬೇಕಾದ ವಿಧಾನಗಳ ಬಗ್ಗೆ ಆರೋಗ್ಯ ಕಾರ್ಯಕರ್ತರಿಗೆ ವಿಶೇಷ ತರಬೇತಿ ನೀಡಲಾಗಿದೆ' ಎಂದಿದ್ದಾರೆ.

ಅಗತ್ಯ ವಸ್ತುಗಳು ಕೈಗೆಟಕುವ ದರದಲ್ಲಿರಲಿ: ಹೊಸಬಾಳೆ

ನವದೆಹಲಿ (ಪಿಟಿಐ): 'ಆಹಾರ, ಬಟ್ಟೆ ಹಾಗೂ ವಸತಿ ಮನುಷ್ಯರ ಪ್ರಾಥಮಿಕ ಅಗತ್ಯಗಳು. ಇವು ಕೈಗೆಟಕುವಂತಿರಬೇಕು. ಇದು ಜನರ ಬಯಕೆ ಕೂಡ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅಭಿಪ್ರಾಯಪಟ್ಟರು.

ಭಾರತೀಯ ಕಿಸಾನ್ ಸಂಘವು ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮತ್ತು ಭಾರತೀಯ ಆಗ್ರೋ ಎಕನಾಮಿಕ್ ರಿಸರ್ಚ್ ಸೆಂಟರ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕೃಷಿ ಕುರಿತಾದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದರು.

ಅಮುಲ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಆರ್.ಎಸ್.ಸೋಧಿ ಅವರು 'ಹಣದುಬ್ಬರ ಹಾಗೂ ಆಹಾರ ಪದಾರ್ಥದ ದರಗಳ ನಡುವಣ ಸಂಯೋಜನೆ' ಕುರಿತು ವಿಷಯ ಮಂಡಿಸಿದರು.

ಇದನ್ನು ಉಲ್ಲೇಖಿಸಿ ಮಾತನಾಡಿದ ಹೊಸಬಾಳೆ, 'ಜನರು ಕೈಗಾರಿಕಾ ಉತ್ಪನ್ನಗಳನ್ನು ಹೆಚ್ಚು ಬೆಲೆಗೆ ಖರೀದಿಸಲು ಸಿದ್ಧರಿದ್ದಾರೆಯೇ ಹೊರತು ಆಹಾರ ಪದಾರ್ಥಗಳನ್ನಲ್ಲ. ಅದು ಸಹಜ ಕೂಡ. ಏಕೆಂದರೆ ಆಹಾರ, ಬಟ್ಟೆ ಹಾಗೂ ವಸತಿ ಪ್ರಾಥಮಿಕ ಅಗತ್ಯಗಳು' ಎಂದು ಅವರು ಹೇಳಿದರು.

ಪಶ್ಚಿಮ ಬಂಗಾಳ: ಶಾಲಾ ಶಿಕ್ಷಕರ ನೇಮಕಾತಿ ಹಗರಣ

ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ: ಮಮತಾ

ಕೋಲ್ಕತ್ತ (ಪಿಟಿಐ): 'ನನ್ನ ಬದುಕು ಸುಧಾರಿಸಿಕೊಳ್ಳಲು ನಾನು ರಾಜಕೀಯಕ್ಕೆ ಬಂದಿಲ್ಲ. ನನ್ನ ಜೀವನದುದ್ದಕ್ಕೂ ಭ್ರಷ್ಟಾಚಾರದ ವಿರುದ್ಧ ಹೋರಾಡಿದ್ದೇನೆ. ರಾಜ್ಯದಲ್ಲಿ ಇತ್ತೀಚೆಗೆ ಆಗಿರುವ ಬೆಳವಣಿಗೆಗಳ ಬಗ್ಗೆ ನನಗೆ ಬೇಸರವಿದೆ. ನಾನು ಅನ್ಯಾಯವನ್ನು ಎಂದಿಗೂ ಬೆಂಬಲಿಸುವುದಿಲ್ಲ. ಆ ವ್ಯಕ್ತಿ ಸಚಿವನಾಗಿದ್ದರೂ ಬಿಡುವುದಿಲ್ಲ. ತಪ್ಪಿತಸ್ಥರು ಶಿಕ್ಷೆ ಅನುಭವಿಸಲೇಬೇಕು' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಗುಡುಗಿದ್ದಾರೆ.

ತಮ್ಮ ಸರ್ಕಾರದ ಸಂಪುಟ ಸಹೋದ್ಯೋಗಿ ಪಾರ್ಥ ಚಟರ್ಜಿ ಅವರನ್ನು ಶಿಕ್ಷಕರ ನೇಮಕಾತಿ ಹಗರಣ ಸಂಬಂಧ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಬಂಧಿಸಿದ ಒಂದು ದಿನದ ನಂತರ ಅವರು ಪ್ರತಿಕ್ರಿಯೆ ನೀಡಿದ್ದಾರೆ.

ಇಲ್ಲಿ ರಾಜ್ಯ ಸರ್ಕಾರದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಮಮತಾ ಬ್ಯಾನರ್ಜಿ, 'ಅನ್ಯಾಯವನ್ನು ನಾನು ಎಂದಿಗೂ ಬೆಂಬಲಿಸುವುದಿಲ್ಲ. ಆದರೆ, ನನ್ನ ಮೇಲೆ ದುರುದ್ದೇಶಪೂರಿತ ಅಪಪ್ರಚಾರ ನಡೆಸಲಾಗುತ್ತಿದೆ. ಕೇಂದ್ರ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ತೃಣಮೂಲ ಕಾಂಗ್ರೆಸ್ ಪಕ್ಷ ಒಡೆಯಬಹುದೆಂದು ಬಿಜೆಪಿ ಭಾವಿಸಿದ್ದರೆ ಅದು ತಪ್ಪು ಮತ್ತು ಅಸಾಧ್ಯ' ಎಂದು ಕಿಡಿಕಾರಿದರು.

ಮನೆಯಲ್ಲಿ ₹22 ಕೋಟಿ ನಗದು ಪತ್ತೆಯಾಗಿರುವ ಅರ್ಪಿತಾ ಮುಖರ್ಜಿ ತನ್ನ ಜತೆಗೆ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿರುವ ವಿಡಿಯೊ ಅನ್ನು ಬಿಜೆಪಿ ಹಂಚಿಕೊಂಡಿರುವುದನ್ನು ಉಲ್ಲೇಖಿಸಿದ ಮಮತಾ ಬ್ಯಾನರ್ಜಿ, 'ಅರ್ಪಿತಾ ಅವರಿಗೂ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ. ನಾನು ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುತ್ತೇನೆ. ಯಾರಾದರೂ ನನ್ನೊಂದಿಗೆ ಕಾಣಿಸಿಕೊಂಡ ದೃಶ್ಯವನ್ನು ಕ್ಲಿಕ್ಕಿಸಿಕೊಂಡರೆ ಅದು ನನ್ನ ತಪ್ಪೇ' ಎಂದು ಪ್ರಶ್ನಿಸಿದರು.

'ತನಿಖೆಯು ನನ್ನ ಪಕ್ಷ ಮತ್ತು ನನ್ನನ್ನು ಅಪಮಾನಿಸುವ ಒಂದು ತಂತ್ರ. ನಾನು ಭ್ರಷ್ಟಾಚಾರ ಬೆಂಬಲಿಸುವವಳಲ್ಲ, ಭ್ರಷ್ಟಾಚಾರ ಬೆಳೆಯಲೂ ಬಿಡುವುದಿಲ್ಲ' ಎಂದರು. 'ನಮಗೆ ನ್ಯಾಯಾಂಗದ ಮೇಲೆ ಸಂಪೂರ್ಣ ನಂಬಿಕೆ ಇದೆ. ಸತ್ಯ ಮತ್ತು ನ್ಯಾಯಾಲಯದ ತೀರ್ಪು ಕಾಲಮಿತಿಯೊಳಗೆ ಹೊರಬರಬೇಕು. ತಪ್ಪು ಮಾಡಿದವರ ಮೇಲೆ ಪಕ್ಷವು ಕ್ರಮ ಕೈಗೊಳ್ಳಲಿದೆ' ಎಂದು ಮಮತಾ ಹೇಳಿದ್ದಾರೆ.

ಸಚಿವ ಪಾರ್ಥ ಚಟರ್ಜಿ, ಅರ್ಪಿತಾ ಮುಖರ್ಜಿ ಹತ್ತು ದಿನ ಇ.ಡಿ ವಶಕ್ಕೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿ ಬಂಧಿಸಿರುವ ಕೈಗಾರಿಕೆ ಹಾಗೂ ವಾಣಿಜ್ಯ ಸಚಿವ ಪಾರ್ಥ ಚಟರ್ಜಿ ಹಾಗೂ ಅವರ ಆಪ್ತೆ ಅರ್ಪಿತಾ ಮುಖರ್ಜಿ ಅವರನ್ನು ವಿಶೇಷ ನ್ಯಾಯಾಲಯವು ಹತ್ತು ದಿನ ಜಾರಿ ನಿರ್ದೇಶನಾಲಯ (ಇ.ಡಿ) ವಶಕ್ಕೆ ನೀಡಿದೆ.

ಪಾರ್ಥ ಚಟರ್ಜಿ ಅವರನ್ನು 14 ದಿನ ಹಾಗೂ ಅರ್ಪಿತಾ ಮುಖರ್ಜಿಯನ್ನು 13 ದಿನ ವಶಕ್ಕೆ ನೀಡುವಂತೆ ತನಿಖಾ ಸಂಸ್ಥೆ ಸಲ್ಲಿಸಿದ ಅರ್ಜಿ ವಿಚಾರಣೆಯನ್ನು ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಜಿಬೋನ್ ಕುಮಾರ್ ಸಾಧು ನಡೆಸಿದರು.

ಅನಿವಾರ್ಯ ಕಾರಣಗಳಿಂದಾಗಿ ಚಟರ್ಜಿ ಆಸ್ಪತ್ರೆಯಲ್ಲಿ ರಾತ್ರಿ ಕಳೆದು ಮಂಗಳವಾರ ಬೆಳಿಗ್ಗೆ ಕೋಲ್ಕತ್ತಗೆ ಮರಳಲಿದ್ದಾರೆ ಎಂದು ಇ.ಡಿ ಮೂಲಗಳು ತಿಳಿಸಿವೆ.

ಚಟರ್ಜಿಯವರ ಆರೋಗ್ಯ ಪರೀಕ್ಷಿಸಿರುವ ಏಮ್ಸ್ ವೈದ್ಯರು, ದೀರ್ಘಕಾಲದ ಕಾಯಿಲೆಗಳಿಂದ ಚಟರ್ಜಿ ಬಳಲುತ್ತಿದ್ದಾರೆ. ಆದರೆ, ತಕ್ಷಣ ಆಸ್ಪತ್ರೆಗೆ ದಾಖಲಾಗುವ ಅಗತ್ಯವಿಲ್ಲವೆಂದು ಹೇಳಿದ್ದಾರೆ.

ಇದಕ್ಕೂ ಮೊದಲು ಸೋಮವಾರ ಬೆಳಿಗ್ಗೆ ಸಚಿವ ಪಾರ್ಥ ಚಟರ್ಜಿ ಅವರನ್ನು ಇ.ಡಿ ಅಧಿಕಾರಿಗಳು ಕೋಲ್ಕತ್ತದಿಂದ ಭುವನೇಶ್ವರಕ್ಕೆ ಏರ್ ಆಂಬುಲೆನ್ಸ್‌ನಲ್ಲಿ ಕರೆತಂದು ಏಮ್ಸ್ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ಮಾಡಿಸಿದ್ದಾರೆ.

ಪಾರ್ಥ ಚಟರ್ಜಿ ಆಪ್ತೆ 12 ಶೆಲ್ ಕಂಪನಿಗಳ ಒಡತಿ




ಅರ್ಪಿತಾ

ಕೋಲ್ಕತ್ತ (ಪಿಟಿಐ): 'ಶಿಕ್ಷಕರ ನೇಮಕಾತಿ ಹಗರಣ ಸಂಬಂಧ ಬಂಧನಕ್ಕೊಳಗಾಗಿರುವ ಪಶ್ಚಿಮ ಬಂಗಾಳದ ಸಚಿವ ಪಾರ್ಥ ಚಟರ್ಜಿ ಅವರ ಆಪ್ತೆ ಅರ್ಪಿತಾ ಮುಖರ್ಜಿ 12 ಶೆಲ್ ಕಂಪನಿಗಳನ್ನು ನಡೆಸುತ್ತಿರುವುದು ಪ್ರಾಥಮಿಕ ತನಿಖೆಯಿಂದ ಬಹಿರಂಗಗೊಂಡಿದೆ' ಎಂದು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಅರ್ಪಿತಾ ಅವರಿಗೆ ಸೇರಿದ ಜೋಕಾ ಫ್ಲ್ಯಾಟ್‌ನಲ್ಲಿ ಶನಿವಾರ ಸಂಜೆ ಶೋಧ ಕಾರ್ಯಾಚರಣೆ ನಡೆಸಲಾಗಿತ್ತು. ಈ ವೇಳೆ ಶೆಲ್ ಕಂಪನಿಗಳನ್ನು ನಡೆಸುತ್ತಿರುವುದಕ್ಕೆ ಸಂಬಂಧಿಸಿದ ದಾಖಲೆಗಳು ಲಭ್ಯವಾಗಿದ್ದು, ಅವುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಹೇಳಿದ್ದಾರೆ.

'ಅರ್ಪಿತಾ ಅವರು ಬೆಂಗಾಲಿ ಹಾಗೂ ಒರಿಯಾ ಭಾಷೆಯ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. ಅವರು, ಒಡಿಶಾ ಹಾಗೂ ತಮಿಳುನಾಡಿನ ಹಲವು ನಟ–ನಟಿಯರ ಜೊತೆ ಸಂಪರ್ಕ ಹೊಂದಿದ್ದು ಅವರ ಮೂಲಕ ಹಣವನ್ನು ಅಕ್ರಮವಾಗಿ ವರ್ಗಾಯಿಸಿರುವ ಅನುಮಾನವಿದೆ. ನಟ–ನಟಿಯರ ಚಲನ ವಲನಗಳ ಮೇಲೆ ನಿಗಾ ಇಡಲಾಗಿದ್ದು, ಶೀಘ್ರವೇ ವಿಚಾರಣೆಗೆ ಕರೆಸಿ ಮಾಹಿತಿ ಪಡೆಯುವ ಸಾಧ್ಯತೆ ಇದೆ' ಎಂದು ಮಾಹಿತಿ ನೀಡಿದ್ದಾರೆ.

ರಣವೀರ್ ವಿರುದ್ಧ ಪೊಲೀಸರಿಗೆ ದೂರು



ಮುಂಬೈ: ತಮ್ಮ ನಗ್ನ ಚಿತ್ರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವ ಮೂಲಕ ಬಾಲಿವುಡ್ ನಟ ರಣವೀರ್ ಸಿಂಗ್ ಮಹಿಳೆಯರ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ. ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಮುಂಬೈ ಪೊಲೀಸರಿಗೆ ದೂರು ಸಲ್ಲಿಕೆಯಾಗಿರುವುದಾಗಿ ಅಧಿಕಾರಿಗಳು ಸೋಮವಾರ ಮಾಹಿತಿ ನೀಡಿದ್ದಾರೆ.

ಪೂರ್ವ ಮುಂಬೈ ಉಪನಗರ ಮೂಲದ ಸ್ವಯಂಸೇವಾ ಸಂಸ್ಥೆಯೊಂದರ (ಎನ್‌ಜಿಒ) ಕಾರ್ಯಕರ್ತರೊಬ್ಬರು ಚೆಂಬೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ತಮ್ಮ ನಗ್ನ ಚಿತ್ರಗಳನ್ನು ಪೋಸ್ಟ್ ಮಾಡುವ ಮೂಲಕ ರಣವೀರ್ ಸಿಂಗ್ ಮಹಿಳೆಯರ ಭಾವನಗಳಿಗೆ ಧಕ್ಕೆ ಉಂಟು ಮಾಡಿರುವುದಲ್ಲದೆ, ಅವರ ಘನತೆಗೆ ಕುಂದು ಉಂಟಾಗುವಂತೆ ಮಾಡಿದ್ದಾರೆ ಎಂಬುದಾಗಿ ದೂರುದಾರರು ಉಲ್ಲೇಖಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ದಂಡಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ನಟನ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ದೂರುದಾರರು ಒತ್ತಾಯಿಸಿದ್ದಾರೆ.

ಈವರೆಗೆ ಎಫ್‌ಐಆರ್ ದಾಖಲಿಸಿಲ್ಲ. ವಿವರ ತಿಳಿಯುತ್ತಿದ್ದೇವೆ ಎಂದು ಅಧಿಕಾರಿ ತಿಳಿಸಿದ್ದಾರೆ.

ರಣವೀರ್ ಸಿಂಗ್ ಇತ್ತೀಚೆಗೆ ನಿಯತಕಾಲಿಕೆಯೊಂದರ ಫೋಟೊಶೂಟ್‌ಗೆ ಬೆತ್ತಲೆಯಾಗಿ ಕಾಣಿಸಿಕೊಂಡು ಸುದ್ದಿಯಾಗಿದ್ದರು. ತಮ್ಮ ನಗ್ನ ಫೋಟೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿಯೂ ಪ್ರಕಟಿಸಿದ್ದರು. ಇದು ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

ಇದೀಗ ರಣವೀರ್ ಸಿಂಗ್ ಅವರಿಂದ ಪ್ರೇರಿತರಾಗಿ ತಮಿಳು ನಟ ವಿಷ್ಣು ವಿಶಾಲ್ ಕೂಡ ಬೆತ್ತಲೆ ಫೋಟೊಶೂಟ್ ಮಾಡಿಸಿದ್ದಾರೆ.

ಕತ್ರಿನಾ ಕೈಫ್, ವಿಕ್ಕಿ ಕೌಶಲ್‌ಗೆ ಬೆದರಿಕೆ

ಮುಂಬೈ (ಪಿಟಿಐ): ಬಾಲಿವುಡ್ ತಾರಾ ಜೋಡಿ ನಟಿ ಕತ್ರಿನಾ ಕೈಫ್ ಮತ್ತು ನಟ ವಿಕ್ಕಿ ಕೌಶಲ್ ಅವರಿಗೆ ಅಪರಿಚಿತ ವ್ಯಕ್ತಿ ಸಾಮಾಜಿಕ ಮಾಧ್ಯಮದಲ್ಲಿ ಬೆದರಿಕೆ ಹಾಕಿದ್ದಾನೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

'ಇನ್‌ಸ್ಟಾಗ್ರಾಮ್‌ನಲ್ಲಿ ನನಗೆ ಮತ್ತು ಪತ್ನಿಗೆ ಬೆದರಿಕೆ ಹಾಕಿದ್ದಾನೆ' ಎಂಬ ವಿಕ್ಕಿ ಕೌಶಲ್ ದೂರು ಆಧರಿಸಿ, ಅಪರಿಚಿತ ವ್ಯಕ್ತಿಯ ವಿರುದ್ಧ ಮುಂಬೈನ ಸಾಂತಾ ಕ್ರೂಜ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅಭಿವೃದ್ಧಿ ಕಾಮಗಾರಿಗೆ ಪ್ರತಿಪಕ್ಷಗಳ ಅಡ್ಡಿ'

ಕಾನ್ಪುರ (ಪಿಟಿಐ): 'ಪ್ರತಿಪಕ್ಷಗಳು ಸಮಾಜ ಮತ್ತು ದೇಶದ ಹಿತಕ್ಕಿಂತಲೂ ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಪಡಿಸುತ್ತಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಆರೋಪಿಸಿದ್ದಾರೆ.

ಸಮಾಜವಾದಿ ಪಕ್ಷದ ಮಾಜಿ ರಾಜ್ಯಸಭಾ ಸದಸ್ಯ ಹರ್ಮೋಹನ್ ಸಿಂಗ್ ಯಾದವ್ ಅವರ 10 ನೇ ಪುಣ್ಯತಿಥಿಯ ವರ್ಚುವಲ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ತಮ್ಮದೇ ಅಧಿಕಾರಾವಧಿಯಲ್ಲಿ ಕೈಗೊಂಡ ಯೋಜನೆಗಳನ್ನು ಜಾರಿಗೆ ತರಲು ಪ್ರತಿಪಕ್ಷಗಳಿಗೆ ಸಾಧ್ಯವಾಗಿಲ್ಲ. ಹೀಗಾಗಿ ನಮ್ಮ ಅವಧಿಯಲ್ಲಿ ನಡೆಯುತ್ತಿರುವ ಸರ್ಕಾರಿ ಕಾಮಗಾರಿಗಳಿಗೆ ಅಡ್ಡಿ ಉಂಟುಮಾಡಲು ಆಗಾಗ ಪ್ರಯತ್ನಿಸುತ್ತಿವೆ' ಎಂದರು.

'ಅವರ ಅವಧಿಯ ಯೋಜನೆಗಳನ್ನು ಈಗ ಜಾರಿಗೊಳಿಸಲು ಮುಂದಾದರೂ ಕೂಡ ವಿರೋಧದ ಧ್ವನಿ ಎತ್ತುತ್ತವೆ. ಇದನ್ನು ದೇಶದ ಜನರು ಇಷ್ಟಪಡುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಸಮಾಜ, ದೇಶಕ್ಕಿಂತ ಸಿದ್ಧಾಂತ ಅಥವಾ ರಾಜಕೀಯ ಹಿತಾಸಕ್ತಿಗೆ ಆದ್ಯತೆ ನೀಡಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'1971ರ ಭಾರತ–ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ ದೇಶದ ಎಲ್ಲಾ ಪ್ರಮುಖ ಪಕ್ಷಗಳೂ ಸರ್ಕಾರಕ್ಕೆ ಹೆಗಲುಕೊಟ್ಟು ನಿಂತಿದ್ದು ನನಗೆ ನೆನಪಿದೆ. ಮೊದಲ ಬಾರಿ ದೇಶದಲ್ಲಿ ಪರಮಾಣು ಪರೀಕ್ಷೆ ನಡೆಸಿದಾಗಲೂ ಎಲ್ಲಾ ಪಕ್ಷಗಳು ಸರ್ಕಾರದ ಬೆನ್ನಿಗೆ ನಿಂತಿದ್ದವು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಪ್ರಜಾಪ್ರಭುತ್ವಕ್ಕೆ ಧಕ್ಕೆ ಉಂಟಾದಾಗ ಸಂವಿಧಾನ ಉಳಿಸುವ ಸಲುವಾಗಿ ಎಲ್ಲಾ ಪಕ್ಷಗಳು ಒಗ್ಗೂಡಿದ್ದವು' ಎಂದು ಹೇಳಿದ್ದಾರೆ.

'ಸಮಾಜವಾದವು ಸಮಾನತೆಯ ಮೂಲ ತತ್ವ ಎಂಬುದನ್ನು ಲೋಹಿಯಾ ಅವರು ಬಲವಾಗಿ ನಂಬಿದ್ದರು. ಸಮಾಜವಾದದ ಅವನತಿಯು ಅಸಮಾನತೆಗೆ ದಾರಿಮಾಡಿಕೊಡಲಿದೆ ಎಂಬುದನ್ನೂ ಜನರಿಗೆ ಮನವರಿಕೆ ಮಾಡಿಕೊಡುತ್ತಿದ್ದರು. ನಮಾಮಿ ಗಂಗೆ, ಬೇಟಿ ಬಚಾವೊ–ಬೇಟಿ ಪಡಾವೊ ಹೀಗೆ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಹಲವು ಯೋಜನೆಗಳು ಲೋಹಿಯಾ ಅವರ ಕನಸನ್ನು ಅರಿಯಲು ಭಾರತೀಯರಿಗೆ ಸಹಕಾರಿಯಾಗಿವೆ' ಎಂದರು.

ಹೈಕೋರ್ಟ್ ಮೊರೆ ಹೋಗಲು ಸುರ್ಜೆವಾಲಾಗೆ ಸೂಚನೆ

ನವದೆಹಲಿ (ಪಿಟಿಐ): ಆಧಾರ್ ಸಂಖ್ಯೆಯನ್ನು ಮತದಾರರ ಗುರುತಿನ ಚೀಟಿ ಜತೆಗೆ ಸಂಯೋಜಿಸಲು ಅನುವು ಮಾಡಿಕೊಡುವ ಚುನಾವಣಾ ಕಾನೂನು (ತಿದ್ದುಪಡಿ) ಕಾಯ್ದೆ 2021 ಪ್ರಶ್ನಿಸಿದ್ದ ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೆವಾಲಾ ಅವರಿಗೆ ಹೈಕೋರ್ಟ್ ಮೊರೆ ಹೋಗಲು ಸುಪ್ರೀಂ ಕೋರ್ಟ್ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎ.ಎಸ್. ಬೋಪಣ್ಣ ಅವರ ಪೀಠವು, ಮೊದಲು ಹೈಕೋರ್ಟ್‌ನಲ್ಲಿ ಏಕೆ ಪ್ರಶ್ನಿಸಲಿಲ್ಲ ಎಂದು ಸುರ್ಜೆವಾಲಾ ಪರ ವಕೀಲರನ್ನು ಪ್ರಶ್ನಿಸಿತು.

'ನೀವು ದೆಹಲಿ ಹೈಕೋರ್ಟ್‌ಗೆ ಏಕೆ ಹೋಗಬಾರದು. ಚುನಾವಣಾ ಕಾನೂನು (ತಿದ್ದುಪಡಿ) ಕಾಯ್ದೆಯ ಸೆಕ್ಷನ್ 4 ಮತ್ತು 5 ಅನ್ನು ಪ್ರಶ್ನಿಸಿದ್ದೀರಿ. ಹೈಕೋರ್ಟ್ ಗೆ ಹೋಗಬಹುದು' ಎಂದು ಪೀಠ ಹೇಳಿತು.

ಉನ್ನತ ಹುದ್ದೆಗಳಿಗೆ ₹100 ಕೋಟಿ: ವಂಚಕರ ಜಾಲ ಭೇದಿಸಿದ ಸಿಬಿಐ

ಒಂದನೇ ಪುಟದಿಂದ...

'ತಾನು ಸಿಬಿಐ ಅಧಿಕಾರಿ, ತನಗೆ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಸಂಪರ್ಕ ಇದೆ ಎಂದು ಬಾಂದಗರ ಹೇಳಿಕೊಳ್ಳುತ್ತಿದ್ದ. ಭಾರಿ ಹಣ ಕೊಟ್ಟರೆ ಯಾವುದೇ ಕೆಲಸವನ್ನಾದರೂ ಮಾಡಿಕೊಡುವುದಾಗಿ ತಿಳಿಸುತ್ತಿದ್ದ. ಹಣ ಕೊಡಲು ಸಿದ್ಧರಿರುವ ಜನರನ್ನು ಕರೆತರುವಂತೆ ಬೂರಾ, ಅರೋರಾ ಹಾಗೂ ಖಾನ್ ಅವರಿಗೆ ಸೂಚಿಸುತ್ತಿದ್ದ' ಎಂದು ಆರೋಪಿಸಲಾಗಿದೆ.

'ರಾಜ್ಯಪಾಲರ ಹುದ್ದೆ ಹಾಗೂ ರಾಜ್ಯಸಭಾ ಸೀಟು ಕೊಡಿಸುವ, ಕೇಂದ್ರ ಸರ್ಕಾರದ ವಿವಿಧ ಸಚಿವಾಲಯ ಹಾಗೂ ಇಲಾಖೆಗಳಡಿ ಕಾರ್ಯ ನಿರ್ವಹಿಸುವ ಸಂಸ್ಥೆಗಳ ಅಧ್ಯಕ್ಷರನ್ನಾಗಿ ನೇಮಕ ಮಾಡಿಸುವುದಾಗಿ ಜನರನ್ನು ನಂಬಿಸಿ ಅವರಿಂದ ಕೋಟ್ಯಂತರ ರೂಪಾಯಿ ಪಡೆದು ವಂಚಿಸಲು ಆರೋಪಿಗಳು ಸಂಚು ರೂಪಿಸಿದ್ದರು' ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

'ನೇರವಾಗಿ ಅಥವಾ ಅಭಿಷೇಕ್ ಬೂರಾ ಅವರಂತಹ ಮಧ್ಯವರ್ತಿಗಳ ಮೂಲಕ ತಮ್ಮನ್ನು ಸಂಪರ್ಕಿಸುತ್ತಿದ್ದವರನ್ನು ಮೆಚ್ಚಿಸುವ ಸಲುವಾಗಿ ಆರೋಪಿಗಳು ಹಿರಿಯ ಅಧಿಕಾರಿಗಳು ಹಾಗೂ ರಾಜಕೀಯ ವ್ಯಕ್ತಿಗಳ ಹೆಸರುಗಳನ್ನು ಹೇಳುತ್ತಿದ್ದರು. ತಾನು ಸಿಬಿಐ ಹಿರಿಯ ಅಧಿಕಾರಿ ಎಂದು ಹೇಳಿಕೊಳ್ಳುತ್ತಿದ್ದ ಬಾಂದಗರ ವಿವಿಧ ಪೊಲೀಸ್ ಠಾಣೆಗಳಿಗೆ ಕರೆಮಾಡಿ ಅಲ್ಲಿನ ಅಧಿಕಾರಿಗಳಿಗೆ ಬೆದರಿಸುತ್ತಿದ್ದ. ತನ್ನ ಹೆಸರು ಹೇಳಿಕೊಂಡು ಬರುವವರಿಗೆ ನೆರವಾಗುವಂತೆ ಸೂಚಿಸುತ್ತಿದ್ದ. ತನಿಖಾ ಹಂತದಲ್ಲಿರುವ ಪ್ರಕರಣಗಳನ್ನು ಮುಚ್ಚಿಹಾಕಲೂ ಪ್ರಯತ್ನಿಸುತ್ತಿದ್ದ' ಎಂದೂ ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಶ್ರೀಲಂಕಾ ಅಧ್ಯಕ್ಷರ ನಿವಾಸದಲ್ಲಿ ಕಳವು: ಮೂವರ ಬಂಧನ

ಕೊಲಂಬೊ (ಪಿಟಿಐ): ಶ್ರೀಲಂಕಾ ಅಧ್ಯಕ್ಷರ ನಿವಾಸದಿಂದ ಚಿನ್ನಲೇಪಿತ 40 ಹಿತ್ತಾಳೆಯ ಸಾಕೆಟ್‌ಗಳನ್ನು ದ್ದು ಮಾರಾಟ ಮಾಡಲು ಯತ್ನಿಸಿದ ಆರೋಪ ಸಂಬಂಧ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಜೂನ್ 9ರಂದು ಸರ್ಕಾರ ವಿರೋಧಿ ಪ್ರತಿಭಟನಾಕಾರರು ಮಾಜಿ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ಅಧಿಕೃತ ನಿವಾಸ ಮತ್ತು ಮಾಜಿ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರ ಖಾಸಗಿ ನಿವಾಸಕ್ಕೆ ನುಗ್ಗಿದ್ದರು. ಈ ವೇಳೆ ಚಿನ್ನ ಲೇಪಿತ ಸಾಕೆಟ್ ಕದ್ದ ಆರೋಪ ಸಂಬಂಧ ಮೂವರನ್ನು ಬಂಧಿಸಲಾಗಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಆರೋಪಿಗಳು 28, 34 ಮತ್ತು 37 ವರ್ಷದವರು. ಮೂವರೂ ಶಂಕಿತ ಮಾದಕ ದ್ರವ್ಯ ವ್ಯಸನಿಗಳು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆ ಪ್ರಕಾರ ಪ್ರತಿಭಟನೆ ಬಳಿಕ ಅಧ್ಯಕ್ಷೀಯ ಮತ್ತು ಪ್ರಧಾನಿ ನಿವಾಸದ ಬೆಲೆಬಾಳುವ ಸುಮಾರು ಸಾವಿರ ವಸ್ತುಗಳು ನಾಪತ್ತೆಯಾಗಿವೆ. ಈ ಬಗ್ಗೆ ತನಿಖೆಗೆ ವಿಶೇಷ ತನಿಖಾ ತಂಡ ರಚನೆ ಮಾಡಲಾಗಿದೆ ಎನ್ನಲಾಗಿದೆ.

ಚೀನಾ: 2025ರ ವೇಳೆಗೆ ಜನಸಂಖ್ಯೆ ಬೆಳವಣಿಗೆ ದರ ಕುಸಿತ

ಬೀಜಿಂಗ್ (ಪಿಟಿಐ): ಚೀನಾದಲ್ಲಿ ಕಡಿಮೆ ಆಗುತ್ತಿರುವ ಜನಸಂಖ್ಯೆಯು 2025ರ ವೇಳೆಗೆ ನಕಾರಾತ್ಮಕ ಬೆಳವಣಿಗೆ ಮುಟ್ಟಲಿದ್ದು, ಈ ಕುಸಿತ ಶತಮಾನಕ್ಕೂ ಹೆಚ್ಚು ಕಾಲ ಮುಂದುವರಿಯಬಹುದು ಎಂದು ಮಾಧ್ಯಮ ವರದಿ ಸೋಮವಾರ ಹೇಳಿದೆ.

ಚೀನಾ ಪಾಪ್ಯುಲೇಶನ್ ಅಸೋಸಿಯೇಷನ್‌ನ ವಾರ್ಷಿಕ ಸಮ್ಮೇಳನದಲ್ಲಿ ರಾಷ್ಟ್ರೀಯ ಆರೋಗ್ಯ ಆಯೋಗದ ಜನಸಂಖ್ಯೆ ಮತ್ತು ಕುಟುಂಬ ವ್ಯವಹಾರಗಳ ಮುಖ್ಯಸ್ಥ ಯಾಂಗ್ ವೆನ್‌ಜುವಾಂಗ್ ಮಾತನಾಡಿ, ಜನಸಂಖ್ಯೆಯ ಒಟ್ಟಾರೆ ಗುಣಮಟ್ಟ ಸುಧಾರಿಸುವ ಮತ್ತು ಸಮಸ್ಯೆ ಪರಿಹರಿಸಲು ಆರ್ಥಿಕ ಅಭಿವೃದ್ಧಿ ಯೋಜನೆ ಬದಲಾಯಿಸುವ ಅಗತ್ಯವನ್ನು ಇದು ಎತ್ತಿ ತೋರಿಸಿದೆ ಎಂದರು.

ಒಟ್ಟು ಜನಸಂಖ್ಯೆಯ ಬೆಳವಣಿಗೆ ದರ ಗಣನೀಯವಾಗಿ ಕಡಿಮೆ ಆಗುತ್ತಿದೆ. ಪ್ರಸ್ತುತ 14ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲೇ (2021-25) ನಕಾರಾತ್ಮಕ ಬೆಳವಣಿಗೆಯತ್ತ ದೇಶ ಪ್ರವೇಶಿಸುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

ಕೋವಿಡ್: ಪಾಕಿಸ್ತಾನಕ್ಕೆ ತೆರಳುವವರಿಗೆ ಕಠಿಣ ಪರೀಕ್ಷೆ

ಇಸ್ಲಾಮಾಬಾದ್ (ಪಿಟಿಐ): ಭಾರತದಲ್ಲಿ ಈಚಿನ ದಿನಗಳಲ್ಲಿ ಕೋವಿಡ್ ದೃಢ ಪ್ರಕರಣಗಳು ಹೆಚ್ಚಿರುವ ಹಿನ್ನೆಲೆಯಲ್ಲಿ, ವಿಮಾನ ಮತ್ತು ರಸ್ತೆ ಮೂಲಕ ಪಾಕಿಸ್ತಾನಕ್ಕೆ ಬರುವ ಪ್ರಯಾಣಿಕರನ್ನು ಕಠಿಣ ಪರೀಕ್ಷೆಗೆ ಒಳಪಡಿಸಲು ನಿರ್ಧರಿಸಲಾಗಿದೆ ಎಂದು ಮಾಧ್ಯಮ ವರದಿಯೊಂದು ತಿಳಿಸಿದೆ.

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ತೆರೆ; ಪದಕ ಗಳಿಕೆಯಲ್ಲಿ ಅಮೆರಿಕಕ್ಕೆ ಅಗ್ರಸ್ಥಾನ

ಡುಪ್ಲಾಂಟಿಸ್, ಟೋಬಿ ವಿಶ್ವ ದಾಖಲೆ

ಯೂಜಿನ್, ಅಮೆರಿಕ (ರಾಯಿಟರ್ಸ್, ಎಎಫ್‌ಪಿ): ಸ್ವೀಡನ್‌ನ ಅರ್ಮಾಂಡ್ ಡುಪ್ಲಾಂಟಿಸ್ ಮತ್ತು ನೈಜೀರಿಯದ ಟೋಬಿ ಅಮ್ಯುಸನ್ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಕೊನೆಯ ದಿನ ವಿಶ್ವದಾಖಲೆಯೊಂದಿಗೆ ಚಿನ್ನ ಗೆದ್ದರು.

ಭಾನುವಾರ ನಡೆದ ಪುರುಷರ ಪೋಲ್‌ವಾಲ್ಟ್ ಸ್ಪರ್ಧೆಯಲ್ಲಿ ಡುಪ್ಲಾಂಟಿಸ್ 6.21 ಮೀ. ಎತ್ತರ ಜಿಗಿದು, ತಮ್ಮದೇ ಹೆಸರಿನಲ್ಲಿರುವ ದಾಖಲೆಯನ್ನು ಒಂದು ಸೆಂ.ಮೀ. ಅಂತರದಿಂದ ಉತ್ತಮಪಡಿಸಿಕೊಂಡರು. ಮಾರ್ಚ್ ತಿಂಗಳಲ್ಲಿ ನಡೆದಿದ್ದ ವಿಶ್ವ ಒಳಾಂಗಣ ಚಾಂಪಿಯನ್‌ಷಿಪ್‌ನಲ್ಲಿ ಅವರು 6.20 ಮೀ. ಸಾಧನೆ ಮಾಡಿದ್ದರು.

ಅಮೆರಿಕದ ಕ್ರಿಸ್ ನಿಲ್ಸೆನ್ (5.94 ಮೀ.) ಬೆಳ್ಳಿ ಜಯಿಸಿದರೆ, ಫಿಲಿಪ್ಪೀನ್ಸ್‌ನ ಅರ್ನೆಸ್ಟ್ ಜಾನ್ ಒಬೀನಾ (5.94 ಮೀ.) ಕಂಚು ಪಡೆದುಕೊಂಡರು.

ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ ಟೋಬಿ 12.06 ಸೆ.ಗಳಲ್ಲಿ ಗುರಿ ತಲುಪಿ ಚಿನ್ನ ತಮ್ಮದಾಗಿಸಿಕೊಂಡರು. ಸೆಮಿಫೈನಲ್‌ನಲ್ಲಿ ಅವರು 12.12 ಸೆ.ಗಳೊಂದಿಗೆ ವಿಶ್ವದಾಖಲೆ ಸ್ಥಾಪಿಸಿದ್ದರು. ಫೈನಲ್‌ನಲ್ಲಿ ಗಾಳಿಯ ನೆರವು ಕೂಡಾ ಇದ್ದ ಕಾರಣ ಆ ಸಮಯವನ್ನು ದಾಖಲೆಗೆ ಪರಿಗಣಿಸಲಿಲ್ಲ.

ಅಮೆರಿಕದ ಕೆನಿ ಹ್ಯಾರಿಸನ್ ಅವರು 2016 ರಲ್ಲಿ ಸ್ಥಾಪಿಸಿದ್ದ ವಿಶ್ವದಾಖಲೆಯನ್ನು (12.20 ಸೆ.) ಟೋಬಿ ಮುರಿದರು.

ಜಮೈಕದ ಬ್ರಿಟ್ನಿ ಆ್ಯಂಡರ್ಸನ್ (12.23 ಸೆ.) ಎರಡನೇ ಹಾಗೂ ಪೋರ್ಟೊರಿಕೊದ ಜಾಸ್ಮಿನ್ ಕಮಾಚೊ ಕ್ವಿನ್ (12.23 ಸೆ.) ಮೂರನೇ ಸ್ಥಾನ ಗಳಿಸಿದರು.

ಜರ್ಮನಿಯ ಒಲಿಂಪಿಕ್ ಚಾಂಪಿಯನ್ ಮಲೈಕಾ ಮಿಹಾಂಬೊ, ಮಹಿಳಾ ಲಾಂಗ್‌ಜಂಪ್‌ನಲ್ಲಿ 7.12 ಮೀ. ಸಾಧನೆಯೊಂದಿಗೆ ಅಗ್ರಸ್ಥಾನ ಪಡೆದರು.

ಮೊದಲ ಎರಡು ಪ್ರಯತ್ನಗಳಲ್ಲಿ ಫೌಲ್ ಆದರೂ ಒತ್ತಡಕ್ಕೊಳಗಾಗದ ಮಿಹಾಂಬೊ ಬಳಿಕ ಚೇತರಿಕೆಯ ಪ್ರದರ್ಶನ ನೀಡಿ ಕೊನೆಯ ಅವಕಾಶದಲ್ಲಿ ಚಿನ್ನದೆಡೆಗೆ ಜಿಗಿದರು.

ನೈಜೀರಿಯದ ಇಸೆ ಬ್ರೂಮ್ (7.02 ಮೀ.) ಬೆಳ್ಳಿ ಹಾಗೂ ಬ್ರೆಜಿಲ್‌ನ ಲೆಟಿಸಿಯಾ ಮೆಲೊ (6.89 ಮೀ.) ಕಂಚು ಪಡೆದುಕೊಂಡರು.

ಫ್ರಾನ್ಸ್‌ನ ಕೆವಿನ್ ಮೇಯರ್ ಅವರು ಪುರುಷರ ಡೆಕಥ್ಲಾನ್‌ನಲ್ಲಿ ಚಿನ್ನ ಗೆದ್ದರು. ಒಟ್ಟು 8,816 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನ ಗಳಿಸಿದರು.

ಕೆನಡಾದ ಲಿಯರ್ಸ್ ಲೆಪೇಜ್ (8,701) ಮತ್ತು ಅಮೆರಿಕದ ಜಾಕ್ ಜೀಮೆಕ್ (8,676) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡರು.

ಅಮೆರಿಕಕ್ಕೆ ದಾಖಲೆಯ ಪದಕ: 10 ದಿನ ನಡೆದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಅತಿಥೇಯ ಅಮೆರಿಕ ಪೂರ್ಣ ಪ್ರಭುತ್ವ ಮೆರೆಯಿತು. 13 ಚಿನ್ನ ಸೇರಿದಂತೆ ಒಟ್ಟು 33 ಪದಕಗಳೊಂದಿಗೆ ಅಗ್ರಸ್ಥಾನ ಗಳಿಸಿತು. ವಿಶ್ವ ಅಥ್ಲೆಟಿಕ್ಸ್‌ನ ಇತಿಹಾಸದಲ್ಲಿ ತಂಡವೊಂದು ಪಡೆದ ಅತ್ಯಧಿಕ ಪದಕ ಇದಾಗಿದೆ.


ನಾಲ್ಕು ಚಿನ್ನ ಒಳಗೊಂಡಂತೆ 10 ಪದಕ ಜಯಿಸಿದ ಇಥಿಯೋಪಿಯ ಎರಡನೇ ಸ್ಥಾನ ಗಳಿಸಿದರೆ, ಜಮೈಕಾ ಮೂರನೇ ಸ್ಥಾನ ಪಡೆಯಿತು.



ಮುಖ್ಯಾಂಶಗಳು

- ಡುಪ್ಲಾಂಟಿಸ್ 6.21 ಮೀ. ಎತ್ತರ ಸಾಧನೆ
- ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ ಟೋಬಿಗೆ ಚಿನ್ನ
- ಅಮೆರಿಕಕ್ಕೆ ಒಟ್ಟು 33 ಪದಕ

ಪೋಲ್‌ವಾಲ್ಟ್‌ನಲ್ಲಿ ಚಿನ್ನ ಗೆದ್ದ ಅರ್ಮಾಂಡ್ ಡುಪ್ಲಾಂಟಿಸ್ –ಎಎಫ್‌ಪಿ ಚಿತ್ರ



ಟೋಬಿ ಅಮ್ಯುಸನ್ –ಎಎಫ್‌ಪಿ ಚಿತ್ರ

ಪದಕ ಪಟ್ಟಿ (ಅಗ್ರ 10 ಸ್ಥಾನ)

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಅಮೆರಿಕ	13	9	11	33
ಇಥಿಯೋಪಿಯ	4	4	2	10
ಜಮೈಕಾ	2	7	1	10
ಕೆನ್ಯಾ	2	5	3	10
ಚೀನಾ	2	1	3	6
ಆಸ್ಟ್ರೇಲಿಯಾ	2	0	1	3
ಪೆರು	2	0	0	2
ಪೋಲೆಂಡ್	1	3	0	4
ಕೆನಡಾ	1	2	1	4
ಜಪಾನ್	1	2	1	4

ಭಾರತಕ್ಕೆ 33ನೇ ಸ್ಥಾನ

ಕೂಟದಲ್ಲಿ ಏಕೈಕ ಬೆಳ್ಳಿ ಪದಕ ಗೆದ್ದಿರುವ ಭಾರತ, ಪಟ್ಟಿಯಲ್ಲಿ ಜಂಟಿ 33ನೇ ಸ್ಥಾನ ಪಡೆದುಕೊಂಡಿತು. ಭಾರತ ಅಲ್ಲದೆ ಇತರ ಐದು ದೇಶಗಳು ತಲಾ ಒಂದು ಬೆಳ್ಳಿ ಜಯಿಸಿವೆ. ನೀರಜ್ ಚೋಪ್ರಾ ಅವರು ಜಾವೆಲಿನ್ ಥ್ರೋನಲ್ಲಿ ಬೆಳ್ಳಿ ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದರು. ಈ ಬಾರಿ ಒಟ್ಟು 45 ರಾಷ್ಟ್ರಗಳು ಪದಕ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡವು.

‘ಸಿಂಧು, ಲಕ್ಷ್ಯ ಫೇವರಿಟ್ಸ್’

ಕಾಮನ್‌ವೆಲ್ತ್ ಕ್ರೀಡಾಕೂಟ: ಗೋಪಿಚಂದ್ ಅಭಿಮತ

• ಬಸವರಾಜ ದಳವಾಯಿ

ಬೆಂಗಳೂರು: ಲಕ್ಷ್ಯ ಸೇನ್, ಕಿದಂಬಿ ಶ್ರೀಕಾಂತ್ ಮತ್ತು ಪಿ.ವಿ. ಸಿಂಧು ಅವರು ಈ ಬಾರಿಯ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಜಯಿಸಬಲ್ಲ ಫೇವರಿಟ್ ಅಥ್ಲೀಟ್‌ಗಳು ಎಂದು ಭಾರತ ಬ್ಯಾಡ್ಮಿಂಟನ್ ತಂಡದ ಮುಖ್ಯ ಕೋಚ್ ಪುಲ್ಲೇಲ ಗೋಪಿಚಂದ್ ಅಭಿಪ್ರಾಯಪಟ್ಟರು.

ನಗರದಲ್ಲಿ ಜೈನ್ ವಿಶ್ವವಿದ್ಯಾಲಯದ ‘ದ ಸ್ಪೋರ್ಟ್ಸ್ ಸ್ಕೂಲ್’ನಲ್ಲಿ ಸೋಮವಾರ ಆಯೋಜಿಸಿದ್ದ ಯುವ ಅಥ್ಲೀಟ್‌ಗಳೊಂದಿಗೆ ಸಂವಾದದ ಬಳಿಕ ಅವರು ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದರು.

- **ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಸಿದ್ಧತೆ ಹೇಗಿದೆ? ಪದಕದ ನಿರೀಕ್ಷೆ ಇದೆಯೇ?**

ಕ್ರೀಡಾಕೂಟಕ್ಕೆ ನಮ್ಮ ತಂಡ ಉತ್ತಮವಾಗಿ ಸಜ್ಜುಗೊಂಡಿದೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಲಕ್ಷ್ಯ ಮತ್ತು ಶ್ರೀಕಾಂತ್, ಮಹಿಳಾ ಸಿಂಗಲ್ಸ್‌ನಲ್ಲಿ ಸಿಂಧು ಪದಕ ಜಯಿಸುವ ನಿರೀಕ್ಷೆಯಿದೆ. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಕೂಡ ಉತ್ತಮ ಸಾಮರ್ಥ್ಯ ತೋರಬಲ್ಲರು. ತಂಡ ವಿಭಾಗದಲ್ಲೂ ನಾವು ಪ್ರಶಸ್ತಿ ಗೆಲ್ಲುವ ಅವಕಾಶ ಹೆಚ್ಚು.

- **ಥಾಮಸ್ ಕಪ್ ಟೂರ್ನಿಯ ವಿಜಯದ ಕುರಿತು ಹೇಳಿ..**

ಥಾಮಸ್ ಕಪ್ ವಿಜಯ ಒಂದು ಮಹತ್ವದ ಸಾಧನೆ. ವಿಶ್ವ ಚಾಂಪಿಯನ್‌ಷಿಪ್ ಗೆದ್ದಷ್ಟೇ ಖುಷಿ ಅದು. ನಾವು ಇಲ್ಲಿ ಜಯಿಸುತ್ತೇವೆ ಎಂದಾಗ ಹಲವರು ವ್ಯಂಗ್ಯವಾಡಿದ್ದರು. ಈ ಐತಿಹಾಸಿಕ ಗೆಲುವು ದೇಶದ ಇನ್ನುಳಿದ ಆಟಗಾರರಿಗೆ ಸ್ಫೂರ್ತಿಯ ಸೆಲೆಯಾಗಿತ್ತು. ಸಾತ್ವಿಕ್– ಚಿರಾಗ್ ಡಬಲ್ಸ್‌ನಲ್ಲಿ ತೋರಿದ ಸಾಮರ್ಥ್ಯ ಅದ್ಭುತವಾಗಿತ್ತು. ಹಿಂದೆಂದೂ ಆ ರೀತಿಯ ಆಟ ಅವರಿಂದ ಮೂಡಿಬಂದಿರಲಿಲ್ಲ. ಲಕ್ಷ್ಯ, ಶ್ರೀಕಾಂತ್, ಪ್ರಣಯ್ ಕೂಡ ಸಂಚಲನ ಮೂಡಿಸಿದರು.

- **ಇತ್ತೀಚಿನ ದಿನಗಳಲ್ಲಿ ಭಾರತದ ಆಟಗಾರರು ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ತೋರುತ್ತಿರುವುದಕ್ಕೆ ಕಾರಣ?**

ಸೈನಾ ನೆಹ್ವಾಲ್, ಶ್ರೀಕಾಂತ್, ಚಿರಾಗ್, ಸಿಂಧು ಮತ್ತಿತರ ಪ್ರಮುಖ ಆಟಗಾರರಿಂದಾಗಿ ಭಾರತ ಬ್ಯಾಡ್ಮಿಂಟನ್‌ನಲ್ಲಿ ಸಕಾರಾತ್ಮಕ ಬದಲಾವಣೆ ಕಂಡುಬರುತ್ತಿದೆ. ಸರ್ಕಾರ, ಭಾರತ ಬ್ಯಾಡ್ಮಿಂಟನ್ ಸಂಸ್ಥೆಗಳು, ಕಾರ್ಪೊರೇಟ್ ಕಂಪನಿಗಳ ಬೆಂಬಲವೂ ಇದರಲ್ಲಿ ಮಹತ್ವದ ಪಾತ್ರ ವಹಿಸಿದೆ.

- **ಸೈನಾ ನೆಹ್ವಾಲ್ ಅವರು ಹಳೆಯ ಲಯದಲ್ಲಿ ಆಡುತ್ತಿಲ್ಲ. ಕಾರಣ ಏನಿರಬಹುದು?**

ಸೈನಾ ಅವರು ಲಯಕ್ಕೆ ಮರಳುವ ವಿಶ್ವಾಸವಿದೆ. ಈ ಹಿಂದೆ ಅವರು ಹೆಚ್ಚಿನ ಸಾಧನೆ ಮಾಡಿದ್ದಾರೆ. ಗಾಯಗಳೂ ವ್ಯತಿರಿಕ್ತ ಫಲಿತಾಂಶಕ್ಕೆ ಕಾರಣವಾಗಿರಬಹುದು. ಸಿಂಗಪುರ ಓಪನ್ ಟೂರ್ನಿಯಲ್ಲಿ ಚೀನಾದ ಬಿಂಗ್ ಜಿಯಾವೊ ಅವರನ್ನು ಮಣಿಸಿದ್ದು ಸಕಾರಾತ್ಮಕ ಪರಿವರ್ತನೆ.

- **ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಮಾನ್ಯತೆ ರದ್ದಾಗಿರುವುದರಿಂದ ಆಟಗಾರರ ಮೇಲೆ ಪರಿಣಾಮ ಬೀರುತ್ತದೆಯಲ್ಲ?**

ಈ ಸಮಸ್ಯೆಗೆ ಶೀಘ್ರ ಪರಿಹಾರ ಸಿಗುವ ನಿರೀಕ್ಷೆಯಿದೆ. ಬ್ಯಾಡ್ಮಿಂಟನ್‌ಗೆ ಸಂಬಂಧಿಸಿದಂತೆ ಕರ್ನಾಟಕ ಪ್ರಮುಖ ರಾಜ್ಯವಾಗಿದೆ. ಉದಯೋನ್ಮುಖ ಪ್ರತಿಭೆಗಳು ಇಲ್ಲಿದ್ದಾರೆ. ಈ ವಿವಾದ ದೀರ್ಘಕಾಲ ಮುಂದುವರಿಯುವುದು ಕ್ರೀಡೆಯ ಬೆಳವಣಿಗೆ ದೃಷ್ಟಿಯಿಂದ ಒಳ್ಳೆಯದಲ್ಲ.



ಸಂವಾದದ ಬಳಿಕ ಅಥ್ಲೀಟ್‌ಗಳೊಂದಿಗೆ ಪುಲ್ಲೇಲ ಗೋಪಿಚಂದ್ (ಮಧ್ಯೆ) ಸಂಭ್ರಮ. ‘ದ ಸ್ಪೋರ್ಟ್ಸ್ ಸ್ಕೂಲ್’ನ ನಿರ್ದೇಶಕ ಯು.ವಿ.ಶಂಕರ್ (ಎಡ) ಮತ್ತು ಸಹ ಸಂಸ್ಥಾಪಕ ಟಿ.ಆರ್‌. ಶ್ರೀನಿವಾಸ್ ಇದ್ದರು.

‘ಕ್ರೀಡೆಯಲ್ಲಿ ಶಿಸ್ತು ಮಹತ್ವದ್ದು’

‘ಯಾವುದೇ ಕ್ರೀಡೆಯಲ್ಲಿ ಸೋಲು, ಗೆಲುವಿಗಿಂತ ಶಿಸ್ತು ಮುಖ್ಯ’ ಎಂದು ಪುಲ್ಲೇಲ ಗೋಪಿಚಂದ್ ಕಿವಿಮಾತು ಹೇಳಿದರು.

ಯುವ ಅಥ್ಲೀಟ್‌ಗಳು ಹಾಗೂ ಅವರ ಪೋಷಕರೊಂದಿಗೆ ನಡೆಸಿದ ಸಂವಾದದಲ್ಲಿ ಅವರು ಮಾತನಾಡಿದರು.

‘ಕ್ರೀಡೆಯಲ್ಲಿ ಸಾಧನೆ ಮಾಡುವ ಮನಸ್ಸಿದ್ದರೆ ಯಾವುದೇ ಸಮಸ್ಯೆಗಳು ನಮಗೆ ಅಡ್ಡಿಯಾಗುವುದಿಲ್ಲ. ಆಟದಷ್ಟೇ ಆಹಾರ, ನಿದ್ರೆಯೂ ಮುಖ್ಯ’ ಎಂದು ಭಾರತ ಬ್ಯಾಡ್ಮಿಂಟನ್ ಸಂಸ್ಥೆಯ ಉಪಾಧ್ಯಕ್ಷರೂ ಆಗಿರುವ ಗೋಪಿಚಂದ್ ನುಡಿದರು.

ಗೋಪಿಚಂದ್, ಜೈನ್ ವಿವಿಯ ಬ್ಯಾಡ್ಮಿಂಟನ್ ಗುರುಕುಲ ಅಕಾಡೆಮಿಯ ಸಹ ಸಂಸ್ಥಾಪಕ ಮತ್ತು ಮುಖ್ಯ ಮಾರ್ಗದರ್ಶಕ ಕೂಡ ಆಗಿದ್ದಾರೆ.

ಬಾಲ್ ಬ್ಯಾಡ್ಮಿಂಟನ್: ಕರ್ನಾಟಕ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ತಮಿಳುನಾಡಿನಲ್ಲಿ ನಡೆದ ದಕ್ಷಿಣ ವಲಯ ಅಂತರರಾಜ್ಯ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ಮಹಿಳಾ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಪುರುಷರ ವಿಭಾಗದಲ್ಲಿ ಕರ್ನಾಟಕ ರನ್ನರ್ ಅಪ್ ಆಗಿದೆ.

ಭಾನುವಾರ ರಾತ್ರಿ ಮುಕ್ತಾಯಗೊಂಡ ಟೂರ್ನಿಯ ಮಹಿಳೆಯರ ವಿಭಾಗದ ರೌಂಡ್ ರಾಬಿನ್ ಪಂದ್ಯಗಳಲ್ಲಿ ರಾಜ್ಯದ ಮಹಿಳೆಯರು ಪುದುಚೇರಿ, ತೆಲಂಗಾಣ, ಆಂಧ್ರಪ್ರದೇಶ ಹಾಗೂ ಕೇರಳ ರಾಜ್ಯ ತಂಡಗಳನ್ನು ನೇರ ಸೆಟ್‌ಗಳಿಂದ ಮಣಿಸಿದ್ದರು. ಫೈನಲ್ ಲೀಗ್ ಹಣಾಹಣಿಯಲ್ಲಿ ಆತಿಥೇಯ ತಮಿಳುನಾಡು ತಂಡವನ್ನು 35-32, 35-16ರಲ್ಲಿ ಸೋಲಿಸಿ ತಂಡ ಪ್ರಶಸ್ತಿ ಗೆದ್ದುಕೊಂಡಿತು. ಈ ಮೂಲಕ ಸತತ ನಾಲ್ಕನೇ ಬಾರಿ ಚಾಂಪಿಯನ್ ಆಯಿತು.

ಕರ್ನಾಟಕ ಪುರುಷರ ತಂಡ ಫೈನಲ್‌ನಲ್ಲಿ ಅತಿಥೇಯ ತಮಿಳುನಾಡು ಎದುರು ಸೋತು ರನ್ನರ್ ಅಪ್ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡಿತು. ರಾಜ್ಯದ ಎರಡೂ ತಂಡಗಳು ಜಾರ್ಖಂಡ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿವೆ.



ಕರ್ನಾಟಕದ ತಂಡ (ಎಡದಿಂದ): ತೇಜಸ್ವಿನಿ, ಉತ್ಸವಿ, ಅಕ್ಷತಾ, ಮೇಘನಾ, ಕವನ, ದಿವ್ಯ, ಗಾಯತ್ರಿ, ಪಲ್ಲವಿ, ಸಹನ, ಹೇಮ

ಮಹಿಳಾ ಹಾಕಿ ತಂಡಕ್ಕೆ ಅಂಕಿತಾ ಸಹಾಯಕ ಕೋಚ್

ಸುಂಟಿಕೊಪ್ಪ: ಇಲ್ಲಿನ ಹಾಕಿ ಪ್ರತಿಭೆ ಅಂಕಿತಾ ಸುರೇಶ್ ಅವರು ಬರ್ಮಿಂಗ್‌ಹ್ಯಾಂನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ಭಾರತ ಮಹಿಳಾ ಹಾಕಿ ತಂಡದ ಸಹಾಯಕ ಕೋಚ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.

ಅಂಕಿತಾ ಅವರು ಸಹಾಯಕ ಕೋಚ್ ಹೊಣೆಯೊಂದಿಗೆ ತಂಡದ ವ್ಯವಸ್ಥಾಪಕರಾಗಿಯೂ ಜವಾಬ್ದಾರಿ ನಿಭಾಯಿಸಲಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲೂ ಅವರು ತಂಡದ ಸಹಾಯಕ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು.



ಅಂಕಿತಾ ಸುರೇಶ್

ಬ್ರಿಗೇಡ್– ಗೊ ಸ್ಪೋರ್ಟ್ಸ್ ಒಪ್ಪಂದ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದಯೋನ್ಮುಖ ಮಹಿಳಾ ಕ್ರಿಕೆಟಿಗರಿಗೆ ನೆರವು ನೀಡುವ ಉದ್ದೇಶದೊಂದಿಗೆ ಬ್ರಿಗೇಡ್ ಫೌಂಡೇಷನ್ ಸಂಸ್ಥೆಯು ಗೊ ಸ್ಪೋರ್ಟ್ಸ್‌ನ ‘ಈಕ್ವಲ್ ಹ್ಯೂ ಕ್ರಿಕೆಟ್ ಎಕ್ಸ್‌ಲೆನ್ಸ್’ ಕಾರ್ಯಕ್ಕೆ ನೆರವು ನೀಡಲಿದೆ.

ಈ ಕುರಿತು ನಗರದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಬ್ರಿಗೇಡ್ ಫೌಂಡೇಷನ್, ಗೊ ಸ್ಪೋರ್ಟ್ಸ್ ಸಂಸ್ಥೆಯೊಂದಿಗೆ ಮೂರು ವರ್ಷಗಳ ಪಾಲುದಾರಿಕೆಗೆ ಸಹಿ ಹಾಕಿತು.

ದೇಶದಾದ್ಯಂತ ಆಯ್ಕೆ ಮಾಡಲಾದ ಪ್ರತಿಭಾವಂತ ಯುವ ಕ್ರಿಕೆಟಿಗರಿಗೆ ಕ್ರೀಡಾ ಉಡುಪು, ಪ್ರವಾಸ, ವಿದ್ಯಾರ್ಥಿವೇತನ ಮತ್ತಿತರ ಸೌಲಭ್ಯಗಳನ್ನು ಬ್ರಿಗೇಡ್ ಫೌಂಡೇಷನ್ ನೀಡಲಿದ್ದು, ಇದಕ್ಕಾಗಿ ವಾರ್ಷಿಕ ₹ 50 ಲಕ್ಷ ವೆಚ್ಚ ಮಾಡಲಿದೆ.

ಷೇರುಪೇಟೆ ವಹಿವಾಟು ▼306



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,719
ಇಂದಿನ ಅಂತ್ಯ	16,631
▼	88
ದಿನದ ಕನಿಷ್ಠ	16,564

ವಿನಿಮಯ ದರ

$ ಡಾಲರ್	79.78
£ ಪೌಂಡ್	95.60
€ ಯುರೊ	81.45
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹425
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹425

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1640)
ಸೋಯಾ (ರಿಫೈನ್ಡ್)	₹1220 (1225)
ಸೂರ್ಯಕಾಂತಿ (ರಿಫೈನ್ಡ್)	₹1560 (1580)
ಪಾಮೋಲಿನ್	₹1185 (1185)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹325-585
ದ್ವಿತಳಿ (ಬಿ.ವಿ)	₹250-772

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹169.50
ಆರ್‌ಎಸ್‌ಎಸ್-5	₹160.50
ಗುಡ್ ಲಾಟ್	₹15450

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಅಜಂ ಖಾನ್ ಅರ್ಜಿ ತಿರಸ್ಕರಿಸಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ನಕಲಿ ಜನನ ಪ್ರಮಾಣ ಪತ್ರ ಸಲ್ಲಿಕೆ ಪ್ರಕರಣ ಸಂಬಂಧ ತಮ್ಮ ಮಗನ ವಿರುದ್ಧ ಅಲಹಾಬಾದ್ ಹೈಕೋರ್ಟ್ ನೀಡಿದ್ದ ತೀರ್ಪು ಪ್ರಶ್ನಿಸಿ ಸಮಾಜವಾದಿ ಪಕ್ಷದ (ಎಸ್‌ಪಿ) ಮುಖಂಡ ಅಜಂ ಖಾನ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಸೋಮವಾರ ತಿರಸ್ಕರಿಸಿದೆ.

‘ಹೈಕೋರ್ಟ್ ತೀರ್ಪಿನಲ್ಲಿ ಮಧ್ಯಪ್ರವೇಶಿಸುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಅಗತ್ಯವಿರುವ ಸಕಾರಣಗಳೂ ಅರ್ಜಿಯಲ್ಲಿ ಇಲ್ಲ’ ಎಂದು ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ವಿಕ್ರಂ ನಾಥ್ ಅವರಿದ್ದ ಪೀಠವು ಹೇಳಿತು.

ಜೊಮಾಟೊ ಷೇರು ದಾಖಲೆ ಕುಸಿತ

ನವದೆಹಲಿ (ಪಿಟಿಐ): ಆಹಾರ ವಸ್ತುಗಳನ್ನು ರೆಸ್ಟಾರೆಂಟ್‌ಗಳಿಂದ ಮನೆ ಬಾಗಿಲಿಗೆ ತಲುಪಿಸುವ ಜೊಮಾಟೊ ಕಂಪನಿಯ ಷೇರು ಮೌಲ್ಯವು ಸೋಮವಾರ ಶೇಕಡ 11ರಷ್ಟಕ್ಕಿಂತ ಹೆಚ್ಚು ಕುಸಿದಿದೆ. ಅಲ್ಲದೆ, ದಿನದ ವಹಿವಾಟಿನ ನಡುವಿನಲ್ಲಿ ಜೊಮಾಟೊ ಷೇರು ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟವನ್ನೂ ತಲುಪಿತ್ತು.

ಐಪಿಒ ಪ್ರಕ್ರಿಯೆಗೂ ಮೊದಲೇ ಜೊಮಾಟೊ ಷೇರುಗಳನ್ನು ಹೊಂದಿದ್ದವರು ಷೇರುಗಳನ್ನು ಮಾರಾಟ ಮಾಡಲು ಇದ್ದ ನಿರ್ಬಂಧವು ಸೋಮವಾರಕ್ಕೆ ಕೊನೆಗೊಂಡಿದೆ. ಇದಾದ ನಂತರದಲ್ಲಿ ಷೇರು ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ ಎಂದು ಸ್ವಸ್ತಿಕಾ ಇನ್ವೆಸ್ಟ್‌ಮೆಂಟ್ ಲಿಮಿಟೆಡ್‌ನ ಈಕ್ವಿಟಿ ಸಂಶೋಧನಾ ವಿಶ್ಲೇಷಕ ಪುನೀತ್ ಪತ್ನಿ ಹೇಳಿದ್ದಾರೆ.

‘ಈ ರೀತಿ ನಿರ್ಬಂಧ ಕೊನೆಯಾಗುವ ದಿನ ಷೇರುಗಳು ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ಬರುತ್ತವೆ. ಹೀಗಾಗಿ ಬೆಲೆ ಕುಸಿಯುತ್ತದೆ’ ಎಂದು ಹೇಳಿದ್ದಾರೆ.

ಸೋಮವಾರದ ವಹಿವಾಟಿನ ಕೊನೆಯಲ್ಲಿ ಷೇರು ಮೌಲ್ಯವು ಬಿಎಸ್‌ಇಯಲ್ಲಿ ಶೇ 11.37ರಷ್ಟು ಕುಸಿದು ₹ 47.55ಕ್ಕೆ ತಲುಪಿದೆ. ಎನ್‌ಎಸ್‌ಇಯಲ್ಲಿ ಷೇರು ಮೌಲ್ಯವು ₹ 47.60 ಆಗಿದೆ.

‘ಜೊಮಾಟೊ ಕಂಪನಿಯ ಷೇರುಗಳು ಮಾರುಕಟ್ಟೆ ಪ್ರವೇಶಿಸಿದ ನಂತರದಲ್ಲಿ ತಲುಪಿದ್ದ ಗರಿಷ್ಠ ಮಟ್ಟಕ್ಕೆ ಹೋಲಿಸಿದರೆ ಈಗ ಶೇ 71ರಷ್ಟು ಕುಸಿದಿವೆ. ಜಗತ್ತಿನಾದ್ಯಂತ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಿಸಲು ಆರಂಭಿಸಿದ ನಂತರದಲ್ಲಿ ಹೂಡಿಕೆದಾರರು ಜೊಮಾಟೊ ಷೇರುಗಳ ಮಾರಾಟಕ್ಕೆ ಗಮನ ಹರಿಸಿದ್ದಾರೆ’ ಎಂದು ಪತ್ನಿ ವಿವರಿಸಿದರು.

ಷೇರು ಮೌಲ್ಯವು 2021ರ ನವೆಂಬರ್‌ನಲ್ಲಿ ಗರಿಷ್ಠ ಮಟ್ಟ ತಲುಪಿದ್ದಾಗ ಜೊಮಾಟೊ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 1.29 ಲಕ್ಷ ಕೋಟಿ ಆಗಿತ್ತು. ಆದರೆ ಈಗ ಕಂಪನಿಯ ಮಾರುಕಟ್ಟೆ ಮೌಲ್ಯವು ಸರಿಸುಮಾರು ₹ 36 ಸಾವಿರ ಕೋಟಿಗೆ ಇಳಿಕೆ ಆಗಿದೆ.



ಲಾಭಗಳಿಕೆ ಒತ್ತಡಕ್ಕೆ ಒಳಗಾದ ತೈಲ, ಅನಿಲ, ವಾಹನೋದ್ಯಮ ಷೇರುಗಳು

ಷೇರುಪೇಟೆ: 6 ದಿನಗಳ ಓಟಕ್ಕೆ ತಡೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಆರು ದಿನಗಳಿಂದ ನಡೆದಿದ್ದ ಸಕಾರಾತ್ಮಕ ಓಟಕ್ಕೆ ಸೋಮವಾರ ತಡೆ ಬಿದ್ದಿದೆ. ಹೂಡಿಕೆದಾರರು ತೈಲ ಮತ್ತು ಅನಿಲ, ವಾಹನೋದ್ಯಮ ಮತ್ತು ದೂರಸಂಪರ್ಕ ವಲಯದ ಷೇರುಗಳಿಂದ ಲಾಭಗಳಿಸಿಕೊಳ್ಳಲು ಮುಂದಾಗಿದ್ದರಿಂದ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 306 ಅಂಶ ಇಳಿಕೆ ಕಂಡು 55,766 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 88 ಅಂಶ ಇಳಿಕೆಯಾಗಿ 16,631 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

‘ಜಾಗತಿಕ ಆರ್ಥಿಕ ಹಿಂಜರಿತದ ಆತಂಕದ ಜೊತೆಗೆ ಷೇರು ಮಾರುಕಟ್ಟೆಗಳು ಕೆಲವು ಕಂಪನಿಗಳ ತ್ರೈಮಾಸಿಕ ಫಲಿತಾಂಶಕ್ಕೆ ಪ್ರತಿಕ್ರಿಯೆ ನೀಡಿವೆ. ಹೀಗಾಗಿ, ದೇಶಿ ಷೇರುಪೇಟೆ ಸೂಚ್ಯಂಕಗಳು ಸೋಮವಾರ ಇಳಿಕೆ ಕಂಡವು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.


ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 1.24ರಷ್ಟು ಏರಿಕೆ ಆಗಿ ಒಂದು ಬ್ಯಾರಲ್‌ಗೆ 104.52 ಡಾಲರ್‌ಗೆ ತಲುಪಿತು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಸೋಮವಾರ ₹ 844 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ರಿಲಯನ್ಸ್ ಷೇರು ಮೌಲ್ಯ ಇಳಿಕೆ: ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯ ಜೂನ್ ತ್ರೈಮಾಸಿಕದ ಫಲಿತಾಂಶವು ಹೂಡಿಕೆದಾರರನ್ನು ಉತ್ತೇಜಿಸುವಲ್ಲಿ ವಿಫಲವಾಗಿದೆ. ಹೀಗಾಗಿ ಸೋಮವಾರದ ವಹಿವಾಟಿನಲ್ಲಿ ಕಂಪನಿಯ ಷೇರು ಮೌಲ್ಯವು ಶೇ 3ಕ್ಕೂ ಹೆಚ್ಚು ನಷ್ಟ ಕಂಡಿತು.

ಕಂಪನಿಯ ಮಾರುಕಟ್ಟೆ ಮೌಲ್ಯದಲ್ಲಿ ₹ 55,981 ಕೋಟಿ ಕರಗಿದ್ದು, ಒಟ್ಟಾರೆ ಮೌಲ್ಯವು ₹ 16.37 ಲಕ್ಷ ಕೋಟಿಗೆ ಇಳಿಕೆ ಕಂಡಿತು.

‘ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯ ಜೂನ್ ತ್ರೈಮಾಸಿಕದ ಫಲಿತಾಂಶವು ದೂರಸಂಪರ್ಕ ಮತ್ತು ರಿಟೇಲ್ ದೃಷ್ಟಿಯಿಂದ ಉತ್ತಮವಾಗಿದೆ. ಆದರೆ, ತೈಲ ಸಂಸ್ಕರಣೆ ವಿಭಾಗದಲ್ಲಿ ಮಾರುಕಟ್ಟೆ ನಿರೀಕ್ಷೆಗಿಂತಲೂ ತುಸು ಕಡಿಮೆ ಆಗಿದೆ’ ಎಂದು ವಿನೋದ್ ನಾಯರ್ ಹೇಳಿದ್ದಾರೆ.



ರೂಪಾಯಿ ಮೌಲ್ಯ 12 ಪೈಸೆ ಏರಿಕೆ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸೋಮವಾರ 12 ಪೈಸೆ ಏರಿಕೆ ಕಂಡು ಒಂದು ಡಾಲರ್‌ಗೆ ₹ 79.78ರಂತೆ ವಿನಿಮಯಗೊಂಡಿತು.

ರಸ್ತೆ ಬದಿ ಮಲಗಿದವರ ಮೇಲೆ ಹರಿದ ಟೆಂಪೊ: ಒಬ್ಬ ಸಾವು

ಪ್ರಜಾವಾಣಿ ವಾರ್ತೆ

ಕೊಪ್ಪಳ: ತಾಲ್ಲೂಕಿನ ಧಾರ್ಮಿಕ ಕ್ಷೇತ್ರ ಹುಲಗಿಯಲ್ಲಿ ಭಾನುವಾರ ರಾತ್ರಿ ರಸ್ತೆ ಬದಿ ಮಲಗಿದ್ದ ಜನರ ಮೇಲೆ ಟೆಂಪೊ ಹರಿದ ಪರಿಣಾಮ ಒಬ್ಬ ಮೃತಪಟ್ಟು, ಮೂವರು ಗಾಯಗೊಂಡಿದ್ದಾರೆ.

ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ನಡವಿ ಗ್ರಾಮದ ತಿಪ್ಪಣ್ಣ ದುರಗಪ್ಪ (75) ಮೃತರು. ಸಿರಗುಪ್ಪ ತಾಲ್ಲೂಕಿನ ರುದ್ರಪಾಲ ಗ್ರಾಮದ ಮಲ್ಲಮ್ಮ ಬಿಳೆಕಲ್ಲಪ್ಪ (32), ಕಾರಟಗಿ ತಾಲ್ಲೂಕಿನ ನಂದಿಹಳ್ಳಿಯ ತುಕರಾಮ ಮಾಕಪ್ಪ (65) ಮತ್ತು ಕುಕನೂರು ತಾಲ್ಲೂಕಿನ ಗೌರಿಹಾಳ ಗ್ರಾಮದ ಹನುಮವ್ವ ಉಪ್ಪಾರ (57) ಗಾಯಗೊಂಡವರು’ ಎಂದು ಮುನಿರಾಬಾದ್ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ದೇವಸ್ಥಾನಕ್ಕೆ ಬಂದಿದ್ದ ಒಂಬತ್ತು ಮಂದಿ ಮುದ್ದಮ್ಮ ದೇಗುಲ ಹಿಂಭಾಗದ ಬಳೆ ಅಂಗಡಿ ಎದುರಿನ ರಸ್ತೆ ಬದಿ ಮಲಗಿದ್ದರು. ಟೆಂಪೊದ ಬೆಳಕು ಕಣ್ಣಿಗೆ ರಾಚಿದ್ದರಿಂದ ಕೆಲವರು ಓಡಿಹೋದರು. ಟೆಂಪೊ ಚಾಲಕ, ಬಳ್ಳಾರಿ ತಾಲ್ಲೂಕಿನ ಯರಂಗಳಿಯ ನಿವಾಸಿ ಶ್ರೀನಿವಾಸ ಎಂಬಾತನನ್ನು ಬಂಧಿಸಲಾಗಿದೆ. ಆತ ಮದ್ಯ ಕುಡಿದಿದ್ದ ಎಂದು ಶೇಖರ ಹರಿಜನ ಎಂಬುವರು ದೂರು ನೀಡಿದ್ದಾರೆ’ ಎಂದು ತಿಳಿಸಿದ್ದಾರೆ.

‘ರಸ್ತೆ ಬದಿ ಮಲಗಿದವರ ಮೇಲೆ ಹರಿದ ಟೆಂಪೊ’ ವಿಡಿಯೊಗಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ತರಬೇತಿ ವಿಮಾನ ಪತನ: ಮಹಿಳಾ ಪೈಲಟ್‌ಗೆ ಗಾಯ

ಪುಣೆ (ಪಿಟಿಐ): ಮಹಾರಾಷ್ಟ್ರದಲ್ಲಿ ತರಬೇತಿ ವಿಮಾನ ಪತನಗೊಂಡಿದ್ದು ಯಾವುದೇ ಪ್ರಾಣಹಾನಿ ಉಂಟಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಕುರಿತು ಡಿಜಿಸಿಎ ತನಿಖೆಗೆ ಆದೇಶಿಸಿದೆ.

ತರಬೇತಿ ವಿಮಾನವು ಇಂದಾಪುರ ತಾಲ್ಲೂಕಿನ ಕಡಬನವಾಡಿ ಗ್ರಾಮದ ಜಮೀನಿನಲ್ಲಿ ಪತನಗೊಂಡಿದೆ. ಘಟನೆಯಲ್ಲಿ ಮಹಿಳಾ ಪೈಲಟ್ ಅಪಾಯದಿಂದ ಪಾರಾಗಿದ್ದಾರೆ. ಅವರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಈ ತರಬೇತಿ ವಿಮಾನ ಕಾರ್ವರ್ ಏವಿಯೇಷನ್ ಸಂಸ್ಥೆಗೆ ಸೇರಿದೆ.

ಕರೂರ್ ವೈಶ್ಯ ಬ್ಯಾಂಕ್ ಲಾಭ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರೂರ್ ವೈಶ್ಯ ಬ್ಯಾಂಕ್‌ನ ಜೂನ್ ತ್ರೈಮಾಸಿಕದ ಲಾಭವು ಶೇಕಡ 110ರಷ್ಟು ಹೆಚ್ಚಾಗಿದ್ದು, ₹ 229 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹ 109 ಕೋಟಿ ಲಾಭ ಗಳಿಸಿತ್ತು.

ಬ್ಯಾಂಕ್‌ನ ಒಟ್ಟು ಎನ್‌ಪಿಎ ಪ್ರಮಾಣ ಶೇ 5.21ಕ್ಕೆ ಇಳಿಕೆಯಾಗಿದೆ. ಇದು ಹಿಂದಿನ ವರ್ಷದ ಜೂನ್ ಕೊನೆಯಲ್ಲಿ ಶೇ 7.97ರಷ್ಟು ಇತ್ತು. ನಿವ್ವಳ ಎನ್‌ಪಿಎ ಶೇ 1.91ರಷ್ಟು ಇದೆ ಎಂದು ಪ್ರಕಟಣೆ ತಿಳಿಸಿದೆ.

ಬ್ಯಾಂಕ್‌ನ ಠೇವಣಿಗಳ ಮೊತ್ತವು ಜೂನ್ ತ್ರೈಮಾಸಿಕದಲ್ಲಿ ಶೇ 11ರಷ್ಟು ಹೆಚ್ಚಾಗಿದ್ದು, ₹ 71,168 ಕೋಟಿಗೆ ತಲುಪಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-55500
ಕುಮಟ	
ಚಿಪ್ಪು	27089-32089
ಕೋಕ	18509-30509
ಹಳೆಚಾಲಿ	43569-47599
ಹೊಸಚಾಲಿ	37509-40899
ಸಾಗರ	
ಬಿಳಿಗೋಟು	22310-29699
ಚಾಲಿ	33029-37609
ಕೋಕ	19499-34799
ಕೆಂಪುಗೋಟು	25369-37799
ರಾಶಿ	41899-49889
ಸಿಪ್ಪೆಗೋಟು	6281-21869
ಶಿವಮೊಗ್ಗ	
ಬೆಟ್ಟೆ	51058-54000
ಗೊರಬಲು	17129-38119
ರಾಶಿ	45599-49599
ಸರಕು	60699-79876
ಪುತ್ತೂರು	
ಕೋಕ	11000-26000
ಹೊಸತು	31500-44500
ಸಿದ್ದಾಪುರ	
ಬಿಳಿಗೋಟು	23999-31899
ಚಾಲಿ	36269-40199
ಕೋಕ	23889-32601
ಕೆಂಪುಗೋಟು	32699-32699
ರಾಶಿ	46699-48599
ತಟ್ಟಿಬೆಟ್ಟೆ	38690-44299
ಶಿರಸಿ	
ಬೆಟ್ಟೆ	40199-43810
ಬಿಳಿಗೋಟು	25009-34099
ಚಾಲಿ	37861-41109
ರಾಶಿ	46489-48809
ಯಲ್ಲಾಪುರ	
ಬಿಳಿಗೋಟು	28412-32629
ಚಾಲಿ	34719-40610
ಕೋಕ	18600-29601
ಕೆಂಪುಗೋಟು	29615-34969
ರಾಶಿ	46902-53999

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15800	15600	15750	215.85 ಸೆಂಟ್ಸ್
ಎಸಿ	8680	8300	8550	
ಆರ್‌ಪಿ	9500	9500	9650	ಲಂಡನ್
ಆರ್‌ಸಿ	4700	4500	4475	1987 ಡಾಲರ್ಸ್

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1300
ಮಧ್ಯಮ	₹800-1000
ಸಣ್ಣ	₹400-800

ಮುಂಬೈ ಧಾರಣೆ

ಶೇಂಗಾ

25-7-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	10650-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1650)
ಒಂದು ವಾರದ ಡೆಲಿವರಿ	1635 (1645)
ಸೋಯಾ ಕಚ್ಚಾ	1160 (1150)
ಪಾಮ್ ವಾರದ ಡೆಲಿವರಿ	1183 (1183)
ಸೂರ್ಯಕಾಂತಿ ಎಣ್ಣೆ ಕಚ್ಚಾ	1480 (1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,600 (50,700)
ಬೆಳ್ಳಿ ಕೆ.ಜಿ 54,600 (54,500)

ಆವರಣದಲ್ಲಿ ಶನಿವಾರದ ಧಾರಣೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ


ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕ

ಕೆನರಾ ಬ್ಯಾಂಕ್ ಲಾಭ ಶೇ 72 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 2,022 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 1,177 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇಕಡ 72ರಷ್ಟು ಹೆಚ್ಚಾಗಿದೆ ಎಂದು ಬ್ಯಾಂಕ್ ತಿಳಿಸಿದೆ.



ಪ್ರಭಾಕರ್

ವರಮಾನವು ಉತ್ತಮ ಬೆಳವಣಿಗೆ ಕಂಡಿದ್ದು, ಸುಸ್ತಿ ಸಾಲಗಳ ಪ್ರಮಾಣ ಇಳಿಕೆ ಆಗಿರುವುದೇ ನಿವ್ವಳ ಲಾಭದಲ್ಲಿ ಏರಿಕೆಗೆ ಕಾರಣ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಎಲ್‌.ವಿ. ಪ್ರಭಾಕರ್ ಅವರು ಸೋಮವಾರ ವರ್ಚುವಲ್ ಆಗಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬ್ಯಾಂಕ್‌ನ ಒಟ್ಟು ವರಮಾನವು ₹ 20,940 ಕೋಟಿಯಿಂದ ₹ 23,351 ಕೋಟಿಗೆ ಏರಿಕೆ ಆಗಿದೆ. ಬಡ್ಡಿ ವರಮಾನವು ಶೇ 8.3ರಷ್ಟು ಹೆಚ್ಚಾಗಿ ₹ 18,176 ಕೋಟಿಗೆ ತಲುಪಿದೆ.

ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 8.50ರಷ್ಟು ಇದ್ದಿದ್ದು, ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 6.98ಕ್ಕೆ ಇಳಿಕೆ ಆಗಿದೆ. ಮೌಲ್ಯದ ಲೆಕ್ಕದಲ್ಲಿ ₹ 58,215 ಕೋಟಿಯಿಂದ ₹ 54,733 ಕೋಟಿಗೆ ಇಳಿಕೆ ಆಗಿದೆ.

ನಿವ್ವಳ ಎನ್‌ಪಿಎ ಶೇ 3.46ರಿಂದ ಶೇ 2.48ಕ್ಕೆ ಇಳಿಕೆ ಆಗಿದೆ.

ಗೃಹ ಸಾಲ ನೀಡಿಕೆಯು ಶೇ 16.03ರಷ್ಟು ಬೆಳವಣಿಗೆ ಕಂಡಿದ್ದು, ₹ 75,578 ಕೋಟಿಗೆ ತಲುಪಿದೆ. ಠೇವಣಿ ಮೊತ್ತವು ₹ 110.52 ಲಕ್ಷ ಕೋಟಿ ಆಗಿದ್ದು, ಹಿಂದಿನ ವರ್ಷದ ಅವಧಿಗೆ ಹೋಲಿಸಿದರೆ ಶೇ 8.49ರಷ್ಟು ಬೆಳವಣಿಗೆ ಆಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ತ್ರೈಮಾಸಿಕದ ಅಂತ್ಯಕ್ಕೆ ದೇಶದಲ್ಲಿನ ಒಟ್ಟು ಶಾಖೆಗಳ ಸಂಖ್ಯೆ 9,732ಕ್ಕೆ ತಲುಪಿದೆ. ಒಟ್ಟು 10,802 ಎಟಿಎಂಗಳಿವೆ.

ಎಕ್ಸಿಸ್ ಬ್ಯಾಂಕ್ ಲಾಭ ದುಪ್ಪಟ್ಟು

ನವದೆಹಲಿ (ಪಿಟಿಐ): ಎಕ್ಸಿಸ್ ಬ್ಯಾಂಕ್‌ನ ನಿವ್ವಳ ಲಾಭವು ಜೂನ್ ತ್ರೈಮಾಸಿಕದಲ್ಲಿ ಎರಡು ಪಟ್ಟು ಹೆಚ್ಚಾಗಿದ್ದು, ₹ 4,125 ಕೋಟಿಗೆ ತಲುಪಿದೆ. ಎನ್‌ಪಿಎ ಪ್ರಮಾಣ ಕಡಿಮೆ ಆಗಿರುವುದು ಲಾಭ ಹೆಚ್ಚಳಕ್ಕೆ ಒಂದು ಕಾರಣ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹ 2,160 ಕೋಟಿ ಲಾಭ ಗಳಿಸಿತ್ತು. ಈ ವರ್ಷದ ಜೂನ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹ 21,727 ಕೋಟಿ ವರಮಾನ ಕಂಡಿದೆ.

ಎನ್‌ಪಿಎ ಪ್ರಮಾಣವು ಜೂನ್ 30ರ ವೇಳೆಗೆ ಶೇ 2.76ಕ್ಕೆ ತಲುಪಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಮಾಹಿತಿ ನೀಡಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಎನ್‌ಪಿಎ ಪ್ರಮಾಣವು ಶೇ 3.85ರಷ್ಟು ಇತ್ತು.

ಕ್ರಿಕೆಟ್: ಎರಡನೇ ಪಂದ್ಯದಲ್ಲಿ ಭಾರತಕ್ಕೆ 2 ವಿಕೆಟ್ ಗೆಲುವು; ಸರಣಿಯಲ್ಲಿ 2–0 ಮುನ್ನಡೆ

ಅಕ್ಷರ್ ಅಬ್ಬರಕ್ಕೆ ಒಲಿದ ಜಯ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಒತ್ತಡದ ಸಮಯದಲ್ಲೂ ಭರ್ಜರಿ ಆಟವಾಡಿದ ಅಕ್ಷರ್ ಪಟೇಲ್, ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತಕ್ಕೆ ಎರಡು ವಿಕೆಟ್‌ಗಳ ರೋಚಕ ಗೆಲುವು ತಂದುಕೊಟ್ಟರು.

ಕ್ವೀನ್ಸ್ ಪಾರ್ಕ್ ಓವಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಗೆಲುವಿಗೆ 312 ರನ್‌ಗಳ ಗುರಿ ಪಡೆದ ಭಾರತ, 49.4 ಓವರ್‌ಗಳಲ್ಲಿ ಎಂಟು ವಿಕೆಟ್ ಕಳೆದುಕೊಂಡು ಜಯ ಸಾಧಿಸಿತು.

ಮೊದಲು ಬ್ಯಾಟ್ ಮಾಡಿದ್ದ ಆತಿಥೇಯ ತಂಡ ಶಾಯ್ ಹೋಪ್ (115) ಮತ್ತು ನಿಕೊಲಸ್ ಪೂರನ್ (74) ಅವರ ಉತ್ತಮ ಆಟದ ನೆರವಿನಿಂದ 6 ವಿಕೆಟ್‌ಗೆ 311 ರನ್ ಕಲೆಹಾಕಿತ್ತು.

ಈ ಗೆಲುವಿನ ಮೂಲಕ ಶಿಖರ್ ಧವನ್ ಬಳಗ ಮೂರು ಪಂದ್ಯಗಳ ಸರಣಿಯನ್ನು 2–0 ರಲ್ಲಿ ಗೆದ್ದುಕೊಂಡಿತು. ಮೂರನೇ ಹಾಗೂ ಕೊನೆಯ ಪಂದ್ಯ ಜುಲೈ 27 ರಂದು ನಡೆಯಲಿದೆ.

35 ಎಸೆತಗಳಲ್ಲಿ ಅಜೇಯ 64 ರನ್ ಗಳಿಸಿದ ಅಕ್ಷರ್ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಮೂರು ಬೌಂಡರಿ ಮತ್ತು ಐದು ಸಿಕ್ಸರ್‌ಗಳನ್ನು ಹೊಡೆದ ಅವರು ಕೊನೆಯ ಓವರ್‌ಗಳಲ್ಲಿ ಪಂದ್ಯವನ್ನು ವಿಂಡೀಸ್ ಕೈಯಿಂದ ಕಿತ್ತುಕೊಂಡರು.

ಸವಾಲಿನ ಗುರಿ ಬೆನ್ನಟ್ಟಿದ ಭಾರತ 39ನೇ ಓವರ್‌ನಲ್ಲಿ ಐದು ವಿಕೆಟ್‌ಗೆ 205 ರನ್ ಗಳಿಸಿ ಸೋಲಿನ ಹಾದಿ ಹಿಡಿದಿತ್ತು. ಈ ವೇಳೆ ಕ್ರೀಸ್‌ಗೆ ಬಂದ ಅಕ್ಷರ್, ದೀಪಕ್ ಹೂಡಾ (33 ರನ್, 36 ಎ., 4X2) ಜತೆ ಆರನೇ ವಿಕೆಟ್‌ಗೆ 33 ಎಸೆತಗಳಲ್ಲಿ 51 ರನ್ ಸೇರಿಸಿದರು. ಆ ಬಳಿಕ ಕೊನೆಯ ಕ್ರಮಾಂಕದ ಆಟಗಾರರ ನೆರವಿನೊಂದಿಗೆ ತಂಡವನ್ನು ಗೆಲುವಿನ ಗಡಿ ದಾಟಿಸಿದರು.

ಮುಖ್ಯಾಂಶಗಳು

- 35 ಎಸೆತಗಳಲ್ಲಿ 64 ರನ್ ಗಳಿಸಿದ ಎಡಗೈ ಬ್ಯಾಟರ್
- ವೆಸ್ಟ್ ಇಂಡೀಸ್‌ಗೆ ಮತ್ತೆ ನಿರಾಸೆ
- ಅಯ್ಯರ್, ಸ್ಯಾಮ್ಸನ್ ಅರ್ಧಶತಕ

ಭಾರತದ ಜಯಕ್ಕೆ ಕೊನೆಯ ಮೂರು ಎಸೆತಗಳಲ್ಲಿ ಆರು ರನ್‌ಗಳು ಬೇಕಿದ್ದವು. ಕೈಲ್ ಮೇಯರ್ಸ್ ಅವರ ಬೌಲಿಂಗ್‌ನಲ್ಲಿ ಚೆಂಡನ್ನು ಸಿಕ್ಸರ್‌ಗೆ ಅಟ್ಟಿ ಗೆಲುವಿನ ಸಂಭ್ರಮ ಆಚರಿಸಿದರು.

ಶ್ರೇಯಸ್, ಸ್ಯಾಮ್ಸನ್ ಅರ್ಧಶತಕ: ಮೊದಲ ಪಂದ್ಯದ 'ಹೀರೊ' ಶಿಖರ್ ಧವನ್ (13) ಅವರನ್ನು ಭಾರತ ಬೇಗನೇ ಕಳೆದುಕೊಂಡಿತು. ಉತ್ತಮ ಆರಂಭ ನೀಡಿದ ಶುಭಮನ್ ಗಿಲ್ (43 ರನ್, 49 ಎ., 4X5) ಅರ್ಧಶತಕಕ್ಕೆ ಏಳು ರನ್‌ಗಳು ಬೇಕಿದ್ದಾಗ ಔಟ್ ಆದರು.

ಒಟ್ಟು ಸ್ಕೋರ್ 79 ಆಗಿದ್ದಾಗ ಸೂರ್ಯಕುಮಾರ್ ಯಾದವ್ (9) ಕೂಡಾ ಔಟಾದದ್ದು, ತಂಡವನ್ನು ಒತ್ತಡಕ್ಕೆ ಸಿಲುಕಿಸಿತು. ಈ ವೇಳೆ ಜತೆಯಾದ ಶ್ರೇಯಸ್ ಅಯ್ಯರ್ (63 ರನ್, 71 ಎ., 4X4, 6X1) ಮತ್ತು ಸಂಜು ಸ್ಯಾಮ್ಸನ್ (54 ರನ್, 51 ಎ., 4X3, 6X3) ಗೆಲುವಿನ ಆಸೆ ಜೀವಂತವಾಗಿರಿಸಿಕೊಂಡರು.

ಇವರಿಬ್ಬರು ನಾಲ್ಕನೇ ವಿಕೆಟ್‌ಗೆ 94 ಎಸೆತಗಳಲ್ಲಿ 99 ರನ್ ಸೇರಿಸಿದರು. ಶ್ರೇಯಸ್ ಅವರನ್ನು ಎಲ್‌ಬಿ ಬಲೆಯಲ್ಲಿ ಬೀಳಿಸಿದ ಅಲ್ಜಾರಿ ಜೋಸೆಫ್ ಈ ಜತೆಯಾಟ ಮುರಿದರು. ಅಲ್ಪ ಸಮಯದ ಬಳಿಕ ಸ್ಯಾಮ್ಸನ್ ರನೌಟಾದರು. ಇವರಿಬ್ಬರು ಔಟಾದಾಗ ತಂಡದ ಗೆಲುವಿಗೆ 11 ಓವರ್‌ಗಳಲ್ಲಿ 105 ರನ್‌ಗಳು ಬೇಕಿದ್ದವು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 50 ಓವರ್‌ಗಳಲ್ಲಿ 6 ವಿಕೆಟ್‌ಗೆ 311. ಭಾರತ: 49.4 ಓವರ್‌ಗಳಲ್ಲಿ 8 ವಿಕೆಟ್‌ಗೆ 312 (ಶುಭಮನ್ ಗಿಲ್ 43, ಶ್ರೇಯಸ್ ಅಯ್ಯರ್ 63, ಸಂಜು ಸ್ಯಾಮ್ಸನ್ 54, ದೀಪಕ್ ಹೂಡಾ 33, ಅಕ್ಷರ್ ಪಟೇಲ್ ಔಟಾಗದೆ 64, ಅಲ್ಜಾರಿ ಜೋಸೆಫ್ 46ಕ್ಕೆ 2, ಕೈಲ್ ಮೇಯರ್ಸ್ 48ಕ್ಕೆ 2, ಜೇಡೆನ್ ಸೀಲ್ಸ್ 40ಕ್ಕೆ 1) ಫಲಿತಾಂಶ: ಭಾರತಕ್ಕೆ 2 ವಿಕೆಟ್ ಗೆಲುವು



ಬಿರುಸಿನ ಅರ್ಧಶತಕ ಗಳಿಸಿದ ಅಕ್ಷರ್ ಪಟೇಲ್ –ಎಎಫ್‌ಪಿ ಚಿತ್ರ

ಪ್ರೀಕ್ವಾರ್ಟರ್‌ಗೆ ಅಹಿದಾ

ಎಐಟಿಎ 16 ವರ್ಷದೊಳಗಿನವರ ಟೆನಿಸ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಅಹಿದಾ ಸಿಂಗ್ ಅವರು ಎಐಟಿಎ ಸೂಪರ್ ಸಿರೀಸ್ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಪ್ರೀಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕಿಯರ ವಿಭಾಗದ ಮೊದಲ ಸುತ್ತಿನಲ್ಲಿ ಸೋಮವಾರ ಅಹಿದಾ 6-1, 6-0ರಿಂದ ತಮಿಳುನಾಡಿನ ಮಧುಮಿತಾ ರಮೇಶ್ ಅವರನ್ನು ಮಣಿಸಿದರು.

ಪಂದ್ಯದುದ್ದಕ್ಕೂ 11 ವರ್ಷದ ಅಹಿದಾ, ಎಂಟನೇ ಶ್ರೇಯಾಂಕದ ಮಧುಮಿತಾ ವಿರುದ್ಧ ಪಾರಮ್ಯ ಮೆರೆದರು. ಮತ್ತೊಂದು ಪಂದ್ಯದಲ್ಲಿ ಕ್ವಾಲಿಫೈಯರ್‌ನಲ್ಲಿ ಗೆದ್ದುಬಂದ ಇಂದುಶಾ ನಿಮಕಾಯಲ 6-1, 6-2ರಿಂದ ಐದನೇ ಶ್ರೇಯಾಂಕದ ಜಿಯಾ ಸಿಂಗ್ ಎದುರು ಗೆದ್ದರು.

ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಮೇಘನಾ ಜಿ.ಡಿ. 6-0, 6-1ರಿಂದ ವಂಶಿಕಾ ಬೋರ್ಕರ್ ಎದುರು, ಶ್ರೇಯಾಂಶಿ ಫೆವಾರೆ 6-2, 6-4ರಿಂದ ಕರ್ಶಿಕಾ ಸತೀಶ್ ಎದುರು, ಅನ್ವಿ ಪುನಗಂಟಿ 6-0, 7-6ರಿಂದ ಉಮಾಮ್ ಅಹ್ಮದ್ ವಿರುದ್ಧ, ಸವಿತಾ ಭುವನೇಶ್ವರನ್ 6-3, 7-6ರಿಂದ ಸುಶ್ಮಿತಾ ರವಿ ವಿರುದ್ಧ, ಸಾನ್ವಿ ಮಿಶ್ರಾ 6-0, 6-2ರಿಂದ ಪ್ರಾಪ್ತಿ ಶೆಟ್ಟಿ ಎದುರು, ಚೆಂಗಟಗೆರೆ ನವೀನ 7-5, 6-1ರಿಂದ ಪೂಜಾ ನಾಗರಾಜ್ ಎದುರು, ಅರ್ಜಾನ್ ಕೊರಾಕಿವಾಲಾ 6-0, 6-2ರಿಂದ ಅನ್ವೇಷಾ ಧರ್ ಎದುರು, ದಿಶಾ ಸಂತೋಷ್ 6-1, 6-0ರಿಂದ ಜೀವಶ್ರೀ ಸೆಂಥಿಲ್ ವಿರುದ್ಧ ಜಯ ಸಾಧಿಸಿ ಎರಡನೇ ಸುತ್ತಿಗೆ ಮುನ್ನಡೆದರು.

ಬಾಲಕರ ವಿಭಾಗದ ಮೊದಲ ಸುತ್ತಿನ ಹಣಾಹಣಿಗಳಲ್ಲಿ ಆರಾಧ್ಯ ಕ್ಷಿತಿಜ್ 6-1, 6-3ರಿಂದ ಪಾಲ್ ಚರಣ್ ಎದುರು, ರೂರಿಕ್ ರಜಿನಿ 7-6 (4), 6-3ರಿಂದ ಶ್ರೀಕರ್ ದೋನಿ ಎದುರು, ಅನಂತ್ ಕೃಷ್ಣನ್ 6-2, 6-3ರಿಂದ ಕೆವಿನ್ ಜೋನಾಥನ್ ಎದುರು, ಸುಹಾಸ್ ಸೋಮ 6-1, 6-3ರಿಂದ ನವಿನ್ ಬಾಬು ವಿರುದ್ಧ, ಕ್ರಿಸ್ಟೊ ಬಾಬು 6-1, 6-2ರಿಂದ ವಿಷ್ಣು ಮೋಹನ್ ಎದುರು, ಅಹಿಲ್ ಆಯಾಜ್ 6-4, 6-3ರಿಂದ ಅರ್ಜುನ್ ಪ್ರೇಮಕುಮಾರ್ ಎದುರು, ಯಶ್ ಪಂಚಾಕ್ಷರಿ 3-6, 6-3, 6-4ರಿಂದ ಅಬ್ರದೀಪ್ ಭಟ್ಟಾಚಾರ್ಯ ಎದುರು, ಅನುರಾಗ್ ರಾಜೇಶ್ ಕಳ್ಳಂಬೆಳ್ಳ 6-2, 6-3ರಿಂದ ಬಾಲಗಣೇಶ್ ಪಟೇಲ್ ವಿರುದ್ಧ, ಗಂಧರ್ವ್ ಕೊತಪಲ್ಲಿ 6-3, 6-1ರಿಂದ ಅರಿಹಂತ್ ಕೌಲ್ ವಿರುದ್ಧ ಜಯ ಗಳಿಸಿದರು.

ಪ್ರಕಾಶ್ ಸರನ್ 6-1, 6-0ರಿಂದ ಪ್ರಣೀತ್ ಗೋಗಿನೇನಿ ಎದುರು, ಶ್ರೀಕಾಂತ್ ಕಣ್ಣನ್ 6-0, 6-1ರಿಂದ ನಿಹಾರ್ ಸುರೇಶ್ ಕುಮಾರ್ ಎದುರು ಗೆದ್ದರು.



ಆರಾಧ್ಯ ಕ್ಷಿತಿಜ್ ಆಟದ ವೈಖರಿ– ಪ್ರಜಾವಾಣಿ ಚಿತ್ರ /ಎಸ್‌.ಕೆ. ದಿನೇಶ್

ತರಬೇತಿಗೆ ಅಡ್ಡಿ: ಲವ್ಲಿನಾ ಆರೋಪ

ಕೋಚ್‌ಗಳಿಗೆ ಅಧಿಕಾರಿಗಳಿಂದ ಕಿರುಕುಳ: ಮಹಿಳಾ ಬಾಕ್ಸರ್ ಆಕ್ರೋಶ

ಬರ್ಮಿಂಗ್‌ಹ್ಯಾಂ (ಪಿಟಿಐ): 'ನನ್ನ ಕೋಚ್‌ಗಳು ಕ್ರೀಡಾ ಆಡಳಿತಗಾರರಿಂದ ನಿರಂತರ ಕಿರುಕುಳ ಎದುರಿಸುತ್ತಿದ್ದು, ಕಾಮನ್‌ವೆಲ್ತ್ ಕೂಟಕ್ಕೆ ಸರಿಯಾದ ತಯಾರಿ ನಡೆಸಲು ಸಾಧ್ಯವಾಗಿಲ್ಲ' ಎಂದು ಮಹಿಳಾ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಆರೋಪಿಸಿದ್ದಾರೆ.

ಐರ್ಲೆಂಡ್‌ನಲ್ಲಿ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದ ಭಾರತ ಬಾಕ್ಸಿಂಗ್ ತಂಡ ಭಾನುವಾರ ರಾತ್ರಿ ಬರ್ಮಿಂಗ್‌ಹ್ಯಾಂಗೆ ಬಂದಿಳಿದಿದೆ. ಆದರೆ ಲವ್ಲಿನಾ ಅವರ ವೈಯಕ್ತಿಕ ಕೋಚ್ ಸಂಧ್ಯಾ ಗುರುಂಗ್ ಅವರಿಗೆ ಮಾನ್ಯತಾ ಪತ್ರ ಇಲ್ಲದ ಕಾರಣ ಕ್ರೀಡಾಗ್ರಾಮಕ್ಕೆ ಪ್ರವೇಶ ನಿರಾಕರಿಸಲಾಗಿದೆ.

ಇನ್ನೊಬ್ಬರು ವೈಯಕ್ತಿಕ ಕೋಚ್ ಅಮೇಯ್ ಕೊಲೇಕರ್ ಅವರಿಗೆ ಕಾಮನ್‌ವೆಲ್ತ್ ಕೂಟದ ತಂಡದಲ್ಲಿ ಅವಕಾಶ ನೀಡಿಲ್ಲ. ತಮಗೆ ಆಗಿರುವ ಅನ್ಯಾಯದ ಬಗ್ಗೆ ಲವ್ಲಿನಾ 'ಟ್ವೀಟ್' ಮೂಲಕ ಆಕ್ರೋಶ ಹೊರಹಾಕಿದ್ದಾರೆ.

'ನನ್ನ ವೈಯಕ್ತಿಕ ಕೋಚ್‌ಅನ್ನು ತಂಡದಲ್ಲಿ ಸೇರಿಸಿಕೊಳ್ಳುವಂತೆ ನಿರಂತರ ಮನವಿ ಮಾಡಿದರೂ, ಸಂಬಂಧಪಟ್ಟವರು ಕಿವಿಗೊಟ್ಟಿಲ್ಲ. ಕೋಚ್ ಸಂಧ್ಯಾ ಅವರು ಕ್ರೀಡಾಗ್ರಾಮದ ಹೊರಗೆ ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಗೊಂದಲಗಳಿಂದಾಗಿ ಮಾನಸಿಕವಾಗಿ ಕುಗ್ಗಿದ್ದೇನೆ' ಎಂದು ಅಸಮಾಧಾನ ಹೊರಹಾಕಿದ್ದಾರೆ.

'ನಾನು ಒಲಿಂಪಿಕ್ ಪದಕ ಗೆಲ್ಲಲು ಕಾರಣವಾಗಿದ್ದ ಎಲ್ಲ ಕೋಚ್‌ಗಳನ್ನು ಕಡೆಗಣಿಸಲಾಗಿದೆ. ಇದು ನನ್ನ ತರಬೇತಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ' ಎಂದು ದೂರಿದ್ದಾರೆ.

'ಈ ಎಲ್ಲಾ ಗೊಂದಲಗಳ ನಡುವೆ ನಾನು ಕಾಮನ್‌ವೆಲ್ತ್ ಕೂಟದ ಮೇಲೆ ಗಮನ ಕೇಂದ್ರೀಕರಿಸುವುದಾದರೂ ಹೇಗೆ? ಕ್ರೀಡೆಯ ಆಡಳಿತದಲ್ಲಿ ರಾಜಕೀಯ ನುಸುಳಿರುವುದರಿಂದ ಇಡೀ ವ್ಯವಸ್ಥೆಯೇ ಗಬ್ಬೆದ್ದು ಹೋಗಿದೆ' ಎಂದು ಕಿಡಿಕಾರಿದ್ದಾರೆ.

ಬಗೆಹರಿಸಲು ಕ್ರಮ: ಲವ್ಲಿನಾ ಅವರಿಗೆ ಆಗಿರುವ ತೊಂದರೆಯನ್ನು ಬಗೆಹರಿಸಲು ಎಲ್ಲ ಕ್ರಮವಹಿಸಲಾಗುವುದು ಎಂದು ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಹೇಳಿದೆ.

'ಸಾಯ್, ಈ ಬೆಳವಣಿಗೆಯ ಬಗ್ಗೆ ಭಾರತ ಬಾಕ್ಸಿಂಗ್ ಫೆಡರೇಷನ್ ಜತೆ ಮಾತುಕತೆ ನಡೆಸಿದೆ. ಕ್ರೀಡಾ ಸಚಿವಾಲಯವು ವಿವಾದ ಬಗೆಹರಿಸುವಂತೆ ಐಒಎಗೆ ಸೂಚಿಸಿದೆ. ಭಾರತಕ್ಕೆ ಪದಕ ತಂದುಕೊಡುವ ನೆಚ್ಚಿನ ಬಾಕ್ಸರ್ ಲವ್ಲಿನಾ ಅವರ ತಯಾರಿಗೆ ಯಾವುದೇ ಅಡ್ಡಿ ಉಂಟಾಗದಂತೆ ನೋಡಿಕೊಳ್ಳಲಾಗುವುದು' ಎಂದು ಸಾಯ್ ಅಧಿಕಾರಿಯೊಬ್ಬರು ತಿಳಿಸಿದರು.

'ಸಂಧ್ಯಾ ಅವರಿಗೆ ಮಾನ್ಯತಾಪತ್ರ ಒದಗಿಸಿಕೊಡುವಂತೆ ಕಾಮನ್‌ವೆಲ್ತ್ ಕೂಟದ ಸಂಘಟಕರಿಗೆ ಮನವಿ ಮಾಡಲಾಗಿದೆ' ಎಂದು ಐಒಎ ಹಂಗಾಮಿ ಅಧ್ಯಕ್ಷ ಅನಿಲ್ ಖನ್ನಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಲವ್ಲಿನಾ ಬೊರ್ಗೊಹೈನ್

'ಗೊಂದಲಕ್ಕೆ ಶೀಘ್ರ ಪರಿಹಾರ'

'ಸ್ಪರ್ಧಿಗಳು ಮತ್ತು ಕೋಚ್‌ಗಳಿಗೆ ಕ್ರೀಡಾಕೂಟದ ಮಾನ್ಯತಾಪತ್ರ ಒದಗಿಸಿಕೊಡುವ ಪ್ರಕ್ರಿಯೆಯನ್ನು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ನಿರ್ವಹಿಸುತ್ತಿದೆ. ಲವ್ಲಿನಾ ಅವರಿಗೆ ಆಗಿರುವ ತೊಂದರೆ ಶೀಘ್ರದಲ್ಲೇ ಬಗೆಹರಿಯುವ ವಿಶ್ವಾಸವಿದೆ. ಕೋಚ್ ಸಂಧ್ಯಾ ಅವರಿಗೆ ಮಾನ್ಯತಾಪತ್ರ ಒದಗಿಸಿಕೊಡಲು ಎಲ್ಲ ರೀತಿಯ ಪ್ರಯತ್ನ ನಡೆದಿದೆ' ಎಂದು ಭಾರತ ಬಾಕ್ಸಿಂಗ್ ಫೆಡರೇಷನ್ ತಿಳಿಸಿದೆ.

ಮೆಂಡಿಸ್ ದಾಳಿಗೆ ಕುಸಿದ ಪಾಕ್

ಗಾಲ್ (ಎಎಫ್‌ಪಿ): ರಮೇಶ್ ಮೆಂಡಿಸ್ ಅವರ ಸ್ಪಿನ್ ದಾಳಿಗೆ ಕುಸಿದ ಪಾಕಿಸ್ತಾನ ತಂಡ ಶ್ರೀಲಂಕಾ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಹಿನ್ನಡೆ ಅನುಭವಿಸಿದೆ.

ಗಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಎರಡನೇ ದಿನವಾದ ಸೋಮವಾರದ ಆಟದ ಅಂತ್ಯಕ್ಕೆ ಪಾಕಿಸ್ತಾನ, 7 ವಿಕೆಟ್‌ಗೆ 191 ರನ್ ಗಳಿಸಿದೆ. ಇನಿಂಗ್ಸ್ ಹಿನ್ನಡೆ ತಪ್ಪಿಸಲು ಬಾಬರ್ ಅಜಮ್ ಬಳಗಕ್ಕೆ ಇನ್ನೂ 187 ರನ್ ಬೇಕಿದೆ.

ಮೊದಲ ಟೆಸ್ಟ್‌ನಲ್ಲಿ ಗೆಲುವಿಗೆ ಕಾರಣರಾಗಿದ್ದ ಅಬ್ದುಲ್ಲಾ ಶಫೀಕ್ (0) ಅವರನ್ನು ಪಾಕ್ ತಂಡ ಬೇಗನೇ ಕಳೆದುಕೊಂಡಿತು. ಬಾಬರ್ ಅಜಮ್ ಕೂಡಾ ವಿಫಲರಾದರು.

ಇಮಾಮ್ ಉಲ್ ಹಕ್ (32), ಮೊಹಮ್ಮದ್ ರಿಜ್ವಾನ್ (24) ಮತ್ತು ಫವಾದ್ ಆಲಂ (24) ಉತ್ತಮ ಆರಂಭ ಪಡೆದರೂ ಅದನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸುವಲ್ಲಿ ವಿಫಲರಾದರು. ರಿಜ್ವಾನ್ ಮತ್ತು ಫವಾದ್ ವಿಕೆಟ್ ಪಡೆದ ಮೆಂಡಿಸ್, ತಮ್ಮ ತಂಡದ ಹಿಡಿತ ಬಿಗಿಗೊಳಿಸಿದರು.

ಅಘಾ ಸಲ್ಮಾನ್ (62, 126 ಎ) ಮಾತ್ರ ಅಲ್ಪ ಪ್ರತಿರೋಧ ಒಡ್ಡಿ ಅರ್ಧಶತಕ ಗಳಿಸಿದರು. ಪ್ರಭಾತ್ ಜಯಸೂರ್ಯ ಎಸೆತದಲ್ಲಿ ಅವರು ಔಟಾದರು.

ಇದಕ್ಕೂ ಮುನ್ನ 6 ವಿಕೆಟ್‌ಗೆ 315 ರನ್‌ಗಳಿಂದ ಆಟ ಮುಂದುವರಿಸಿದ ಶ್ರೀಲಂಕಾ ತಂಡ 378 ರನ್‌ಗಳಿಗೆ ಆಲೌಟಾಯಿತು. ನಸೀಂ ಶಾ ಮತ್ತು ಯಾಸಿರ್ ಶಾ ತಲಾ ಮೂರು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್ ಶ್ರೀಲಂಕಾ 378 (103 ಓವರ್). ಪಾಕಿಸ್ತಾನ 7ಕ್ಕೆ 191 (69.4 ಓವರ್) ಇಮಾಮ್ ಉಲ್ ಹಕ್ 32, ಬಾಬರ್ ಅಜಮ್ 16, ಮೊಹಮ್ಮದ್ ರಿಜ್ವಾನ್ 24, ಫವಾದ್ ಆಲಂ 24, ಅಘಾ ಸಲ್ಮಾನ್ 62, ರಮೇಶ್ ಮೆಂಡಿಸ್ 42ಕ್ಕೆ 3, ಪ್ರಭಾತ್ ಜಯಸೂರ್ಯ 59ಕ್ಕೆ 2



ಮೆಂಡಿಸ್

ಬಾಜಾಸ್ ರೇಸ್ ಪೂರ್ಣಗೊಳಿಸಿದ ಐಶ್ವರ್ಯ ಪಿಸೆ

ಬೆಂಗಳೂರು: ಭಾರತದ ಐಶ್ವರ್ಯ ಪಿಸೆ ಅವರು ಎಫ್‌ಐಎಂ ಬಾಜಾಸ್ ಮೋಟರ್‌ಸ್ಪೋರ್ಟ್ ವಿಶ್ವಕಪ್‌ನ ನಾಲ್ಕನೇ ಸುತ್ತು 'ಬಾಜಾ ಆ್ಯರಗನ್'ಅನ್ನು ಭಾನುವಾರ ಪೂರ್ಣಗೊಳಿಸಿದರು.

ಶೆರ್ಕೊ ಟಿವಿಎಸ್ ರ‍್ಯಾಲಿ ಫ್ಯಾಕ್ಟರಿ' ತಂಡವನ್ನು ಪ್ರತಿನಿಧಿಸಿದ ಬೆಂಗಳೂರಿನ ಪಿಸೆ, ಸ್ಪೇನ್‌ನಲ್ಲಿ ನಡೆದ ರೇಸ್‌ನಲ್ಲಿ ಗ್ರೂಪ್ 1, ಕೆಟಗರಿ 1ನೇ ರೇಸ್‌ನಲ್ಲಿ ಭಾಗವಹಿಸಿದ್ದರು. ಲೇಡೀಸ್ ಕ್ಲಾಸ್‌ನಲ್ಲಿ ಪೂರ್ಣ ಪಾಯಿಂಟ್ಸ್ ಕಲೆಹಾಕಿದ ಅವರು, 450 ಸಿಸಿ ವಿಭಾಗದಲ್ಲಿ 14ನೇ ಸ್ಥಾನ ಗಳಿಸಿದರು. ಒಟ್ಟಾರೆ 11 ತಾಸು 8 ನಿಮಿಷ 52 ಸೆಕೆಂಡುಗಳಲ್ಲಿ ಗುರಿ ತಲುಪಿ 47ನೇ ಸ್ಥಾನ ಪಡೆದರು.

ಉದ್ದೀಪನ ಮದ್ದು: ಸಿಕ್ಕಿಬಿದ್ದ ಅಥ್ಲೀಟ್

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್‌ಗೆ ಆಯ್ಕೆಯಾಗಿರುವ 4X100 ಮೀಟರ್ಸ್ ರಿಲೇ ಮಹಿಳಾ ತಂಡದ ಅಥ್ಲೀಟ್‌ವೊಬ್ಬರು ಉದ್ದೀಪನ ಮದ್ದು ಸೇವಿಸಿರುವುದು ಖಚಿತಪಟ್ಟಿದೆ. ಹೀಗಾಗಿ ಭಾರತ ತಂಡದಿಂದ ಅವರನ್ನು ಕೈಬಿಡುವ ಸಾಧ್ಯತೆಯಿದೆ.

ಉದ್ದೀಪನ ಮದ್ದು ಸೇವಿಸಿರುವ ಅಥ್ಲೀಟ್ ಹೆಸರನ್ನು ಅಧಿಕಾರಿಗಳು ಬಹಿರಂಗಪಡಿಸಿಲ್ಲ.

'ಕಾಮನ್‌ವೆಲ್ತ್ ಗೇಮ್ಸ್‌ಗೆ ರಿಲೇ ತಂಡಕ್ಕೆ ಆಯ್ಕೆಯಾಗಿದ್ದ ಅಥ್ಲೀಟ್‌ವೊಬ್ಬರು ಉದ್ದೀಪನ ಮದ್ದು ಸೇವಿಸಿದ್ದು ದೃಢಪಟ್ಟಿದೆ. ಅವರು ಕೂಟದಿಂದ ಹಿಂದೆ ಸರಿಯಲಿದ್ದಾರೆ' ಎಂದು ಉನ್ನತ ಮೂಲಗಳು ತಿಳಿಸಿವೆ. ಮಹಿಳಾ ರಿಲೇ ತಂಡದಲ್ಲಿ ಈಗ ನಾಲ್ಕು ಜನ ಮಾತ್ರ ಉಳಿಯುವಂತಾಗಿದೆ. ಇವರಲ್ಲಿ ಒಬ್ಬರಿಗೆ ಗಾಯದ ಸಮಸ್ಯೆ ಎದುರಾದರೆ ಟ್ರ್ಯಾಕ್ ವಿಭಾಗಕ್ಕೆ ಆಯ್ಕೆಯಾಗಿರುವ ಯಾರಾದರೂ ತಂಡ ಸೇರಬಹುದು. ಅದಾಗ್ಯೂ ಇದು ತಂಡದ ಮೇಲೆ ಪರಿಣಾಮ ಬೀರಲಿದೆ.

ಭಾರತ ಅಥ್ಲೆಟಿಕ್ಸ್ ಫೆಡರೇಷನ್ ಈ ಮೊದಲು ದ್ಯುತಿ ಚಾಂದ್, ಹಿಮಾ ದಾಸ್, ಶ್ರಬಣಿ ನಂದಾ, ಎನ್‌.ಎಸ್‌. ಸಿಮಿ, ಎಸ್‌.ಧನಲಕ್ಷ್ಮೀ ಮತ್ತು ಎಂ.ವಿ. ಜಿಲ್ನಾ ಅವರನ್ನು 37 ಸದಸ್ಯರ ಅಥ್ಲೆಟಿಕ್ಸ್ ತಂಡಕ್ಕೆ ಆಯ್ಕೆ ಮಾಡಿತ್ತು. ಆದರೆ ಭಾರತ ಒಲಿಂಪಿಕ್ ಸಂಸ್ಥೆಯು 36 ಅಥ್ಲೀಟ್‌ಗಳ ಕೋಟಾ ನಿಗದಿಪಡಿಸಿದ್ದರಿಂದ ಜಿಲ್ನಾ ಅವರನ್ನು ತಂಡದಿಂದ ಕೈಬಿಡಲಾಗಿತ್ತು. ಬಳಿಕ ಧನಲಕ್ಷ್ಮೀ ಅವರು ಉದ್ದೀಪನ ಮದ್ದು ಸೇವಿಸಿದ್ದು ಖಚಿತವಾದ್ದರಿಂದ ಸ್ಥಾನ ಕಳೆದುಕೊಂಡರು. ಆ ಸ್ಥಾನಕ್ಕೆ ಮತ್ತೆ ಜಿಲ್ನಾ ಆಯ್ಕೆಯಾಗಿದ್ದಾರೆ.

ತಡವಾಗಿ ತಂಡ ಸೇರಿದ ಅಥ್ಲೀಟ್ ಮದ್ದು ಸೇವಿಸಿದವರು ಎಂದು ವರದಿಯಾಗಿದೆ.

ತಿದ್ದುಪಡಿ

ಲೂಯಿಸ್ ಹ್ಯಾಮಿಲ್ಟನ್ ಅವರು ಭಾನುವಾರ ನಡೆದ ಫ್ರೆಂಚ್ ಗ್ರ್ಯಾನ್ ಪ್ರಿ ಫಾರ್ಮುಲಾ ರೇಸ್‌ನಲ್ಲಿ ಪಾಲ್ಗೊಂಡು ವೃತ್ತಿಜೀವನದ 300ನೇ ಗ್ರ್ಯಾನ್‌ಪ್ರಿನಲ್ಲಿ ಸ್ಪರ್ಧಿಸಿದ ಸಾಧನೆ ಮಾಡಿದರು. 'ಪ್ರಜಾವಾಣಿ' ಜುಲೈ 25ರ ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿ ಪ್ರಕಟವಾಗಿತ್ತು.